ಲಿಖಿತ ಮೂಲಕ ಉತ್ತರಿಸುವ
ಪ್ರಶ್ನೆಗಳ ಪಟ್ಟಿ

ಒಟ್ಟು ಪ್ರಶ್ನೆಗಳು – ೧೨೩

**ಪಟ್ಟಿ – ೧೫**

# ಕರ್ನಾಟಕ ವಿಧಾನ ಪರಿಷತ್ತು

**ನೂರ ಐವತ್ತೆಂಟನೆಯ ಮುಂದುವರೆದ ಅಧಿವೇಶನ**

**ಬುಧವಾರ, ದಿನಾಂಕ : ೨೫ನೇ ಮಾರ್ಚ್ , ೨೦೨೬**

---

## ಸಮೂಹ – III

೧. ಸಾರಿಗೆ ಮತ್ತು ಮುಜರಾಯಿ ಸಚಿವರು

೨. ಲೋಕೋಪಯೋಗಿ ಸಚಿವರು

೩. ಕಂದಾಯ ಸಚಿವರು

೪. ವಸತಿ, ವಕ್ಫ್ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಚಿವರು

೫. ಪಶುಸಂಗೋಪನೆ ಮತ್ತು ರೇಷ್ಮೆ ಸಚಿವರು

೬. ಮೀನುಗಾರಿಕೆ, ಬಂದರು ಮತ್ತು ಒಳನಾಡು ಜಲಸಾರಿಗೆ ಸಚಿವರು

---

## ಅರಣ್ಯ ವ್ಯಾಪ್ತಿಯಲ್ಲಿ ಮನೆ ನಿರ್ಮಾಣ ಮಾಡಿರುವ ಬಗ್ಗೆ

**ಶ್ರೀಮತಿ ಬಲ್ಕೀಸ್ ಬಾನು (ವಿಧಾನಸಭೆಯಿಂದ ಚುನಾಯಿತರಾದವರು) :–**

೧೭೭೩ (೨೨೧೫) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದಲ್ಲಿ ಅರಣ್ಯ ವ್ಯಾಪ್ತಿಯಲ್ಲಿರುವ ಹಳ್ಳಿಗಳಲ್ಲಿ ಮನೆ ನಿರ್ಮಿಸಿಕೊಂಡು ವಾಸವಾಗಿರುವ ಕುಟುಂಬಗಳ ಸಂಖ್ಯೆಯೆಷ್ಟು ; (ಜಿಲ್ಲಾವಾರು ವಿವರ ನೀಡುವುದು)

(ಆ) ಅರಣ್ಯ ಕಾಯ್ದೆಯಡಿ ಎಷ್ಟು ಕುಟುಂಬಗಳಿಗೆ ಹಕ್ಕುಪತ್ರವನ್ನು ನೀಡಲಾಗಿದೆ ; (ಜಿಲ್ಲಾವಾರು ವಿವರ ನೀಡುವುದು)

(ಇ) ೨೦೦೪ರ ಅರಣ್ಯ ಹಕ್ಕು ಕಾಯ್ದೆಯಂತೆ ಪಹಣಿ ಕಾಲಂ ೧೧ ರಲ್ಲಿ ಎಷ್ಟು ಪಹಣಿಯಲ್ಲಿ ಇಂಡೀಕರಣ ಮಾಡಲಾಗಿದೆ ; ರಾಜ್ಯದಲ್ಲಿ ಎಷ್ಟು ಹಕ್ಕುಪತ್ರಗಳನ್ನು ನೀಡಲಾಗಿದೆ ; ಎಷ್ಟು ಕುಟುಂಬಗಳಿಗೆ ಹಕ್ಕುಪತ್ರ ನೀಡಲು ಬಾಕಿಯಿರುತ್ತದೆ ; (ಜಿಲ್ಲಾವಾರು ವಿವರ ನೀಡುವುದು)

(ಈ) ಅರಣ್ಯ ಹಕ್ಕು ಕಾಯ್ದೆಯಂತೆ ರಾಜ್ಯದ ಪ್ರತಿ ಗ್ರಾಮಕ್ಕೆ ಗ್ರಾಮ ಹಕ್ಕು ಅರಣ್ಯ ಸಮಿತಿ ಚಾಲ್ತಿಯಲ್ಲಿದೆಯೇ ?

## ಕಂದಾಯ ಗ್ರಾಮಗಳ ಕುರಿತು

**ಶ್ರೀಮತಿ ಬಲ್ಕೀಸ್ ಬಾನು (ವಿಧಾನಸಭೆಯಿಂದ ಚುನಾಯಿತರಾದವರು) :–**

೧೭೭೪ (೨೧೦೦) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಶಿವಮೊಗ್ಗ ಜಿಲ್ಲೆಯಲ್ಲಿ ಹೊಸದಾಗಿ ಕಂದಾಯ ಗ್ರಾಮ/ಉಪಗ್ರಾಮ ರಚಿಸಿದ ಸಂಖ್ಯೆಗಳು ಎಷ್ಟು ; (ಗ್ರಾಮ ಮತ್ತು ಸರ್ವೆ ನಂಬರ್‌ವಾರು ಮಾಹಿತಿ ನೀಡುವುದು)

(ಆ) ೯೪ ರಡಿಯಲ್ಲಿ ಈವರೆಗೂ ಎಷ್ಟು ಹಕ್ಕುಪತ್ರ ನೀಡಲಾಗಿದೆ ; (ತಾಲ್ಲೂಕುವಾರು, ಗ್ರಾಮವಾರು ಮತ್ತು ಸರ್ವೆ ನಂಬರ್‌ವಾರು ಮಾಹಿತಿ ನೀಡುವುದು)

(ಇ) ಎಷ್ಟು ಅರ್ಜಿಗಳನ್ನು ಸ್ವೀಕರಿಸಲಾಗಿತ್ತು ; ಅದರಲ್ಲಿ ಎಷ್ಟು ಅರ್ಜಿಗಳನ್ನು ಮುಕ್ತಾಯಗೊಳಿಸಲಾಗಿದೆ ; ಹಾಗೂ ಬಾಕಿ ಉಳಿದಿರುವ ಅರ್ಜಿಗಳು ಎಷ್ಟು ; ಇವುಗಳನ್ನು ವಿಲೇವಾರಿ ಮಾಡಲು ಇನ್ನು ಎಷ್ಟು ದಿನಗಳ ಕಾಲಾವಕಾಶ ಬೇಕಾಗುತ್ತದೆ ?

## ರೈತರ ರಸ್ತೆ ಸಮಸ್ಯೆ ಕುರಿತು

**ಶ್ರೀಮತಿ ಬಲ್ಕೀಸ್ ಬಾನು (ವಿಧಾನಸಭೆಯಿಂದ ಚುನಾಯಿತರಾದವರು) :–**

೧೭೭೫ (೨೧೯) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದ ರೈತರು ವ್ಯವಸಾಯ ಉದ್ದೇಶಗಳಿಗಾಗಿ ತಮ್ಮ ಸ್ವಂತ ಜಮೀನುಗಳಿಗೆ ಹೋಗಲು ರಸ್ತೆ ಸಮಸ್ಯೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಬಂದಿದ್ದಲ್ಲಿ, ಸರ್ಕಾರ ಕೈಗೊಂಡಿರುವ ಕ್ರಮಗಳೇನು ;

(ಆ) ನೆರೆಹೊರೆಯ ಭೂ ಮಾಲೀಕರು ರೈತರಿಗೆ ದಾರಿ ಬಿಡದೆ ತೊಂದರೆ ಕೊಡುತ್ತಿರುವ ಬಗ್ಗೆ ಎಷ್ಟು ದೂರುಗಳು ದಾಖಲಾಗಿವೆ ;

(ಜಿಲ್ಲಾವಾರು ಮಾಹಿತಿ ನೀಡುವುದು) ಹಾಗೂ ನೆರೆಹೊರೆಯ ಜಮೀನಿನಲ್ಲಿ ದಾರಿ ಬಳಸಲು ಸರ್ಕಾರದಿಂದ ಇರುವ ಆದೇಶಗಳಾವುವು ; (ಆದೇಶದ ಪ್ರತಿಗಳನ್ನು ನೀಡುವುದು)

(ಇ) ನೆರೆಹೊರೆಯ ಜಮೀನಿನ ಮಾಲೀಕರು ಹಿಂಬದಿ ರೈತರಿಗೆ ದಾರಿ ಬಿಡದೆ ತೊಂದರೆ ನೀಡುತ್ತಿದ್ದರೆ ಅಂತಹ ಜಮೀನು ಮಾಲೀಕರ ವಿರುದ್ಧ ಯಾವ ಕ್ರಮವನ್ನು ಕೈಗೊಳ್ಳಲಾಗುವುದು ; (ವಿವರ ನೀಡುವುದು)

(ಈ) ದಾರಿ ಸಮಸ್ಯೆಯನ್ನು ಪರಿಹರಿಸಲು ತಹಶೀಲ್ದಾರ್‌ರವರಿಗೆ ಮತ್ತು ಜಿಲ್ಲಾಧಿಕಾರಿಗಳಿಗೆ ಸಂಪೂರ್ಣ ಅಧಿಕಾರವನ್ನು ನೀಡಲಾಗಿದೆಯೇ ; (ನೀಡಿದ್ದಲಿ, ಅವರ ಅಧಿಕಾರ ವ್ಯಾಪ್ತಿಯ ಬಗ್ಗೆ ಮಾಹಿತಿ ನೀಡುವುದು)

(ಉ) ನಕಾಶೆ ಕಂಡ ಕಾಲು ದಾರಿ, ಬಂಡಿದಾರಿ ಒತ್ತುವರಿ ತೆರವುಗೊಳಿಸುವ ಬಗ್ಗೆ ಸರ್ಕಾರದಿಂದ ಹೊಸದಾಗಿ ಂಯಾವುದಾದರೂ ಆದೇಶ/ಸುತ್ತೋಲೆಗಳನ್ನು ಹೊರಡಿಸಲಾಗಿದೆಯೇ ? (ಪ್ರತಿ ನೀಡುವುದು)

## RRT ತಿದ್ದುಪಡಿ ವಿಳಂಬವಾಗುತ್ತಿರುವ ಕುರಿತು

**ಶ್ರೀ ಚಿದಾನಂದ್ ಎಂ. ಗೌಡ (ಪದವೀಧರರ ಕ್ಷೇತ್ರ) :–**

೧೭೭೬ (೨೧೦೮) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಕಳೆದ ಎರಡು ವರ್ಷಗಳಲ್ಲಿ ಬೆಂಗಳೂರು ಉತ್ತರ ಉಪವಿಭಾಗದಲ್ಲಿ ಆರ್.ಆರ್.ಟಿ ತಿದ್ದುಪಡಿಗೆ ಬಂದ ಅರ್ಜಿಗಳ ಸಂಖ್ಯೆ ಎಷ್ಟು ;

(ಆ) ತಿದ್ದುಪಡಿ ಮಾಡಲಾದ ಪ್ರಕರಣದ ಸಂಖ್ಯೆ ಎಷ್ಟು ; ತಿದ್ದುಪಡಿ ಮಾಡದೆ ಬಾಕಿ ಇರುವ ಪ್ರಕರಣಗಳ ಸಂಖ್ಯೆ ಎಷ್ಟು ; ತಿದ್ದುಪಡಿ ಮಾಡದಿರಲು ಕಾರಣಗಳೇನು ; ಪ್ರತಿ ಪ್ರಕರಣಕ್ಕೂ ಪ್ರತ್ಯೇಕವಾಗಿ ಮಾಹಿತಿ ನೀಡುವುದು ;

(ಇ) ಆರ್.ಆರ್.ಟಿ ತಿದ್ದುಪಡಿಗೆ ಸಕಾಲದಲ್ಲಿ ನಿಗದಿಪಡಿಸಿರುವ ಕಾಲಾವಕಾಶವೆಷ್ಟು ; ಹಲವು ಪ್ರಕರಣಗಳು ತಿಂಗಳುಗಟ್ಟಲೆ ತಿದ್ದುಪಡಿಯಾಗದೆ ಬಾಕಿ ಉಳಿದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಬಂದಿದ್ದಲ್ಲಿ, ಈ ಬಗ್ಗೆ ಸರ್ಕಾರ ಕೈಗೊಂಡ ಕ್ರಮಗಳೇನು ;

(ಈ) ಸಕಾಲದಲ್ಲಿ ಆರ್.ಆರ್.ಟಿ ತಿದ್ದುಪಡಿ ಪ್ರಕರಣಗಳನ್ನು ವಿಲೇ ಮಾಡಲು ಸರ್ಕಾರ ಕೈಗೊಳ್ಳುವ ಕ್ರಮಗಳೇನು ?

## 'ಶಕ್ತಿ' ಯೋಜನೆಯ ಕುರಿತು

**ಶ್ರೀ ಕೇಶವ ಪ್ರಸಾದ್ ಎಸ್. (ವಿಧಾನಸಭೆಯಿಂದ ಚುನಾಯಿತರಾದವರು) :–**

೧೭೭೭ (೨೦೬೪) ಮಾನ್ಯ ಸಾರಿಗೆ ಮತ್ತು ಮುಜರಾಯಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದಲ್ಲಿ 'ಶಕ್ತಿ' ಯೋಜನೆ ಜಾರಿಯಾದ ದಿನದಿಂದ ಈವರೆಗೆ ನಾಲ್ಕು ಸಾರಿಗೆ ನಿಗಮಗಳಾದ ಕೆ.ಎಸ್.ಆರ್.ಟಿ.ಸಿ (KSRTC), ಬಿ.ಎಂ.ಟಿ.ಸಿ (BMTC), ವಾ.ಕ.ರ.ಸಾ.ಸಂ (NWKRTC) ಮತ್ತು ಕ.ಕ.ರ.ಸಾ.ಸಂ (KKRTC) ಗಳಲ್ಲಿ ಉಚಿತವಾಗಿ ಪ್ರಯಾಣಿಸಿದ ಮಹಿಳಾ ಫಲಾನುಭವಿಗಳ ಸಂಖ್ಯೆ ಎಷ್ಟು ; (ನಿಗಮವಾರು ಮಾಹಿತಿ ನೀಡುವುದು)

(ಆ) ಈ ಯೋಜನೆಗಾಗಿ ಸರ್ಕಾರವು ಸಾರಿಗೆ ನಿಗಮಗಳಿಗೆ ಮರು ಪಾವತಿ ಮಾಡಬೇಕಾದ ಒಟ್ಟು ಮೊತ್ತ ಎಷ್ಟು ; ಈ ಪೈಕಿ ಈವರೆಗೆ ಎಷ್ಟು ಹಣ ಬಿಡುಗಡೆ ಮಾಡಲಾಗಿದೆ ಮತ್ತು ಇನ್ನೂ ಎಷ್ಟು ಮೊತ್ತದ ಅನುದಾನ ಬಾಕಿ ಇದೆ ; (ವರ್ಷವಾರು ಮತ್ತು ನಿಗಮವಾರು ವಿವರ ನೀಡುವುದು)

(ಇ) ಸುಮಾರು ರೂ.೪,೦೦೦ ಕೋಟಿಗೂ ಅಧಿಕ ಮೊತ್ತದ ಅನುದಾನ ಬಾಕಿ ಇರುವುದರಿಂದ ಸಾರಿಗೆ ಸಂಸ್ಥೆಗಳು ಆರ್ಥಿಕವಾಗಿ ದಿವಾಳಿಯಾಗುತ್ತಿರುವುದು ಮತ್ತು ನೌಕರರ ವೇತನ ಹಾಗೂ ನಿವೃತ್ತಿ ಸೌಲಭ್ಯಗಳನ್ನು ನೀಡಲು ವಿಳಂಬವಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಈ) ಕೋವಿಡ್ ಸಂದರ್ಭದಲ್ಲಿ ಮೃತಪಟ್ಟ ಸಾರಿಗೆ ನೌಕರರ ಕುಟುಂಬಗಳಿಗೆ ನೀಡಬೇಕಾದ ರೂ.೩೦ ಲಕ್ಷ ಪರಿಹಾರ ಧನವನ್ನು ಹಣದ ಕೊರತೆಯ ನೆಪವೊಡ್ಡಿ ತಡೆ ಹಿಡಿಯಲಾಗಿದೆಯೇ ; ಈ ಬಗ್ಗೆ ಹೈಕೋರ್ಟ್ ವ್ಯಕ್ತಪಡಿಸಿರುವ ಆಕ್ಷೇಪಣೆಗಳಿಗೆ ಸರ್ಕಾರದ ಪ್ರತಿಕ್ರಿಯೆಯೇನು ;

(ಉ) ಸಾರಿಗೆ ನಿಗಮಗಳ ಆರ್ಥಿಕ ಸುಸ್ಥಿತಿಯನ್ನು ಕಾಪಾಡಲು ಮತ್ತು ಬಾಕಿ ಇರುವ ಎಲ್ಲಾ ಅನುದಾನವನ್ನು ಬಿಡುಗಡೆ ಮಾಡಲು ಸರ್ಕಾರವು ನಿಗದಿಪಡಿಸಿರುವ ಕಾಲಮಿತಿ ಏನು ?

## ರೇರಾ ಪ್ರಾಧಿಕಾರದ ಕಾರ್ಯಚಟುವಟಿಕೆಯ ಬಗ್ಗೆ

**ಶ್ರೀ ಗೋವಿಂದ ರಾಜು (ವಿಧಾನಸಭೆಯಿಂದ ಚುನಾಯಿತರಾದವರು) :–**

೧೭೭೮ (೨೦೮೬) ಮಾನ್ಯ ವಸತಿ, ವಕ್ಫ್ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಕರ್ನಾಟಕ ರಿಯಲ್ ಎಸ್ಟೇಟ್ ನಿಯಂತ್ರಣ ಪ್ರಾಧಿಕಾರ ರಚನೆಯಾಗಿ ಎಷ್ಟು ವರ್ಷಗಳು ಆಗಿದೆ ; ಈ ಸಂಸ್ಥೆಯನ್ನು ಸ್ಥಾಪನೆ ಮಾಡುವ ಉದ್ದೇಶವೇನು ಹಾಗೂ ಇದರ ಕಾರ್ಯವೈಖರಿ ಏನು ;

(ಆ) ಸದರಿ ಪ್ರಾಧಿಕಾರದಲ್ಲಿ ಇದುವರೆಗೂ ನೋಂದಣಿ ಮಾಡಿಕೊಂಡಿರುವ ಬಿಲ್ಡರ್ಸ್ ಸಂಸ್ಥೆಗಳು ಯಾವುವು ; ಹಾಗೂ ಇದುವರೆಗೂ ನೋಂದಣಿ ಮಾಡಿಸಿಕೊಳ್ಳದೆ ಇರುವ ಬಿಲ್ಡರ್ಸ್‌ಗಳ ಮೇಲೆ ಸರ್ಕಾರ ಯಾವ ಕ್ರಮ ತೆಗೆದುಕೊಂಡಿದೆ ;

(ಇ) ಪ್ರಾಧಿಕಾರದ ನಿಯಮದಂತೆ ಬಿಲ್ಡರ್ಸ್‌ಗಳಿಗೆ ನೀಡಲಾಗಿರುವ ಮಾರ್ಗದರ್ಶನವೇನು ; ಮನೆ ಖರೀದಿದಾರರು ಮತ್ತು ಹೂಡಿಕೆದಾರರಿಗೆ ಎಷ್ಟು ದಿನದ ಒಳಗೆ ಅವರ ಆಸ್ತಿಯನ್ನು ನೋಂದಾವಣಿ ಮಾಡಬೇಕೆಂಬ ನಿಯಮವಿದೆಯೇ ;

(ಈ) ಈ ಪ್ರಾಧಿಕಾರಕ್ಕೆ ಇದುವರೆಗೂ ಸಾರ್ವಜನಿಕರು ಹಾಗೂ ಹೂಡಿಕೆದಾರರಿಂದ ಎಷ್ಟು ದೂರುಗಳೂ ದಾಖಲಾಗಿದೆ ; ಎಷ್ಟು ದೂರುದಾರರಿಗೆ ಪರಿಹಾರವನ್ನು ಒದಗಿಸಲಾಗಿದೆ ;

(ಉ) ರೇರಾ ಸಂಸ್ಥೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಸಿಬ್ಬಂದಿ ಮತ್ತು ಅಧಿಕಾರಿಗಳ ಸಂಖ್ಯೆಯೆಷ್ಟು ; ಕಳೆದ ೩ ವರ್ಷದಿಂದ ಸರ್ಕಾರ ಒದಗಿಸಿರುವ ಅನುದಾನವೆಷ್ಟು ? (ಪೂರ್ಣ ವಿವರಗಳೊಂದಿಗೆ ಮಾಹಿತಿ ನೀಡುವುದು)

# ಹೆನ್ನಾಗರ ಗ್ರಾಮದ ಸರ್ವೆ ನಂ ೫ ರಲ್ಲಿ ಜಮೀನನ್ನು ಅರಣ್ಯ ಇಲಾಖೆಗೆ ವರ್ಗಾಯಿಸಿರುವುದರ ಬಗ್ಗೆ

**ಶ್ರೀ ರಾಮೋಜಿಗೌಡ (ಪದವೀಧರರ ಕ್ಷೇತ್ರ) :–**

೧೭೭೯ (೨೦೮೫) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಆನೇಕಲ್ ತಾಲ್ಲೂಕು, ಜಿಗಣಿ ಹೋಬಳಿ, ಹೆನ್ನಾಗರ ಗ್ರಾಮದ ಸರ್ವೆ ನಂ ೫ ರಲ್ಲಿ, ೫೨ ಎಕರೆ. ೨೫ ಗುಂಟೆ ಜಮೀನನ್ನು ತಾತ್ಕಾಲಿಕವಾಗಿ ಅರಣ್ಯ ಇಲಾಖೆಯ ಉಸ್ತುವಾರಿಗಾಗಿ ಹಾಗೂ ಸಂರಕ್ಷಣೆಗಾಗಿ ವರ್ಗಾಯಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ಮಾನ್ಯ ವಿಶೇಷ ಜಿಲ್ಲಾಧಿಕಾರಿಗಳ ಆದೇಶವಿದ್ದರೂ ಜಮೀನನ್ನು ಅರಣ್ಯ ಇಲಾಖೆಗೆ ಹಸ್ತಾಂತರಿಸಿರುವುದಿಲ್ಲ, ಇದಕ್ಕೆ ಕಾರಣಗಳೇನು ; (ವಿವರ ನೀಡುವುದು)

(ಇ) ಸದರಿ ಜಾಗದಲ್ಲಿ ಅನಧಿಕೃತ ಕಟ್ಟಡ/ವಸತಿಗಳನ್ನು ನಿರ್ಮಾಣ ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಬಂದಿದ್ದಲ್ಲಿ, ಅಕ್ರಮವಾಗಿ ನಿರ್ಮಿಸುತ್ತಿರುವವರ ಮೇಲೆ ಯಾವ ಕ್ರಮ ಕೈಗೊಂಡಿದೆ ;

(ಈ) ಈ ಜಮೀನು ಸ.ನಂ ೫ ರಲ್ಲಿ ಆಕಾರ್ ಬಂದ್‌ನಂತೆ ಒಟ್ಟು ವಿಸ್ತೀರ್ಣ ೭೮–೦೫ ಎ/ಗುಂಟೆ ಇದ್ದು ಸದರಿ ವಿಸ್ತೀರ್ಣ ಜಮೀನಲ್ಲಿ ೮ ಎಕರೆ ಸರ್ಕಾರಿ ಪ್ರೌಢಶಾಲಾ ಆಟದ ಮೈದಾನಕ್ಕೆ ಮಂಜೂರಾಗಿದ್ದು, ಇದರಲ್ಲಿ ೪ ಎಕರೆ ಸರ್ಕಾರಿ ಶಾಲೆ ನಿರ್ಮಿಸಿದ್ದು ಇನ್ನೂ ೪ ಎಕರೆ ಒತ್ತುವರಿಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಉ) ಈ ಜಮೀನನ್ನು Botanical Garden ಮಾಡುವುದಾಗಿ ಅರಣ್ಯ ಇಲಾಖೆ ತಿಳಿಸಿದ್ದು, ಈ ಜಮೀನನ್ನು ಅರಣ್ಯ ಇಲಾಖೆಗೆ ಯಾವಾಗ ವರ್ಗಾವಣೆ ಮಾಡಲಾಗುವುದು ?

## ಗುತ್ತಿಗೆದಾರರಿಗೆ ನೀಡಬೇಕಾಗಿರುವ ಬಾಕಿ ಹಣದ ಬಗ್ಗೆ

**ಶ್ರೀ ಗೋವಿಂದ ರಾಜು (ವಿಧಾನಸಭೆಯಿಂದ ಚುನಾಯಿತರಾದವರು) :–**

೧೭೮೦ (೨೦೮೮) ಮಾನ್ಯ ಲೋಕೋಪಯೋಗಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದಲ್ಲಿ ಲೋಕೋಪಯೋಗಿ ಇಲಾಖೆಯು ವಿವಿಧ ಕಾಮಗಾರಿಗಳನ್ನು ಪೂರೈಸಿರುವ ಗುತ್ತಿಗೆದಾರರಿಗೆ ಫೆಬ್ರವರಿ ೨೦೨೬ ರ ಅಂತ್ಯದವರೆಗೆ ಪಾವತಿಸಬೇಕಾದ ಬಾಕಿ ಮೊತ್ತವೆಷ್ಟು; (ಜಿಲ್ಲಾವಾರು ಮತ್ತು ಇಲಾಖೆಯ ಉಪ–ವಿಭಾಗವಾರು ಮಾಹಿತಿ ನೀಡುವುದು)

(ಆ) ಬಿಲ್‌ಗಳ ಪಾವತಿಯಲ್ಲಿ ಆಗುತ್ತಿರುವ ವಿಳಂಬವನ್ನು ವಿರೋಧಿಸಿ ಕರ್ನಾಟಕ ರಾಜ್ಯ ಗುತ್ತಿಗೆದಾರರ ಸಂಘವು ಮಾರ್ಚ್ ೨೦೨೬ ರಿಂದ ರಾಜ್ಯಾದ್ಯಂತ ಕಾಮಗಾರಿಗಳನ್ನು ಸ್ಥಗಿತಗೊಳಿಸಿ ಮುಷ್ಕರ ನಡೆಸಲು ನಿರ್ಧರಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಬಂದಿದ್ದಲ್ಲಿ, ಅವರ ಬೇಡಿಕೆಗಳೇನು ;

(ಇ) ಕಳೆದ ಮೂರು ವರ್ಷಗಳಿಂದಲೂ ಬಿಲ್‌ಗಳು ಬಾಕಿ ಇರುವುದರಿಂದ ಸಣ್ಣ ಮತ್ತು ಮಧ್ಯಮ ದರ್ಜೆಯ ಗುತ್ತಿಗೆದಾರರು ತೀವ್ರ ಆರ್ಥಿಕ ಸಂಕಷ್ಟಕ್ಕೆ ಸಿಲುಕಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಈ ಬಾಕಿ ಬಿಲ್‌ಗಳನ್ನು 'ಜ್ಯೇಷ್ಠತೆ' (Seniority) ಆಧಾರದ ಮೇಲೆ ಪಾವತಿಸಲು ಸರ್ಕಾರ ಹಾಕಿಕೊಂಡಿರುವ ಕಾಲಮಿತಿ ಎಷ್ಟು ;

(ಈ) ಈ ಬಾಕಿ ಬಿಲ್‌ಗಳ ಪಾವತಿಗೆ ಹಣಕಾಸು ಇಲಾಖೆಯಿಂದ ಅನುಮೋದನೆ ಪಡೆಯಲು ಇರುವ ತಾಂತ್ರಿಕ ಅಥವಾ ಆರ್ಥಿಕ ಅಡೆತಡೆಗಳೇನು ;

(ಉ) ಇಲಾಖೆಯಲ್ಲಿ 'ಪ್ಯಾಕೇಜ್ ಸಿಸ್ಟಮ್' ಮುಂದುವರೆಯುತ್ತಿರುವುದರಿಂದ ಸ್ಥಳೀಯ ಗುತ್ತಿಗೆದಾರರಿಗೆ ಅನ್ಯಾಯವಾಗುತ್ತಿದೆ ಎಂಬ ಆರೋಪದ ಬಗ್ಗೆ ಸರ್ಕಾರದ ನಿಲುವೇನು ಮತ್ತು ಈ ವ್ಯವಸ್ಥೆಯನ್ನು ಸರಿಪಡಿಸಲು ಕೈಗೊಂಡಿರುವ ಕ್ರಮಗಳೇನು ?

## ಬೆಂಗಳೂರು ನಗರ ಜಿಲ್ಲೆಯಲ್ಲಿ ಇ–ಆಸ್ತಿ ನೋಂದಣಿ ಪ್ರಕ್ರಿಯೆ ಕುರಿತು

**ಶ್ರೀ ಹೆಚ್.ಎಸ್. ಗೋಪಿನಾಥ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೧೭೮೧ (೨೧೨೫) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಬೆಂಗಳೂರು ನಗರ ಮತ್ತು ಗ್ರಾಮಾಂತರ ಜಿಲ್ಲೆಯಲ್ಲಿ ಇ–ಆಸ್ತಿ ನೋಂದಣಿ ಮಾಡಿಸಿಕೊಳ್ಳಲು ಇರುವ ನಿಯಮ/ಮಾನದಂಡಗಳು ಯಾವುವು ; (ವಿವರ ನೀಡುವುದು)

(ಆ) ಈ ಪ್ರಕ್ರಿಯೆಯಲ್ಲಿ ಹಲವಾರು ಗೊಂದಲಗಳು ಸೃಷ್ಟಿಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಬಂದಿದ್ದಲ್ಲಿ, ಸದರಿ ಗೊಂದಲಗಳನ್ನು ಪರಿಹರಿಸಿ ಸುಲಭಗೊಳಿಸಲು ಸರ್ಕಾರ ಕೈಗೊಂಡ ಕ್ರಮಗಳು ಯಾವುವು ; (ವಿವರ ನೀಡುವುದು)

(ಇ) ಇ–ಆಸ್ತಿ ನೋಂದಣಿ ಮಾಡಿಸಿಕೊಳ್ಳುವಲ್ಲಿ ಗ್ರಾಮೀಣ ಭಾಗಕ್ಕೂ ನಗರ ಭಾಗಗಳಿಗೂ ವ್ಯತ್ಯಾಸಗಳಿವೆಯೇ ; ಇದ್ದಲ್ಲಿ, ಇರುವಂತಹ ವ್ಯತ್ಯಾಸಗಳಾವುವು ? (ವಿವರ ನೀಡುವುದು)

## ಬಿ.ಎಂ.ಟಿ.ಸಿ ಸಂಸ್ಥೆಗೆ ಸರ್ಕಾರ ಉಳಿಸಿಕೊಂಡಿರುವ ಬಾಕಿ ಹಣದ ಬಗ್ಗೆ

**ಶ್ರೀ ಹೆಚ್.ಎಸ್. ಗೋಪಿನಾಥ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೧೭೮೨ (೨೧೨೬) ಮಾನ್ಯ ಸಾರಿಗೆ ಮತ್ತು ಮುಜರಾಯಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದಲ್ಲಿ ಶಕ್ತಿ ಯೋಜನೆ ಪ್ರಾರಂಭವಾದ ದಿನದಿಂದ ಇದುವರೆಗೂ ನಾಲ್ಕು ಸಾರಿಗೆ ಸಂಸ್ಥೆಗಳಿಂದ ಪ್ರಯಾಣ ಮಾಡಿರುವ ಮಹಿಳಾ ಪ್ರಯಾಣಿಕರ ಸಂಖ್ಯೆ ಎಷ್ಟು ;

(ಆ) ಮಹಿಳೆಯರ ಟಿಕೆಟ್ ಮೊತ್ತವನ್ನು ರಾಜ್ಯ ಸರ್ಕಾರವು ಬಿ.ಎಂ.ಟಿ.ಸಿ ಗೆ ಪೂರ್ಣ ಪ್ರಮಾಣದಲ್ಲಿ ಪಾವತಿಸದೇ ಕೋಟ್ಯಾಂತರ ರೂ. ಬಾಕಿ ಉಳಿಸಿಕೊಂಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಇ) ಬಂದಿದ್ದಲ್ಲಿ, ಎಷ್ಟು ಬಾಕಿ ಉಳಿಸಿಕೊಂಡಿದೆ ಹಾಗೂ ಬಾಕಿ ಉಳಿಸಿಕೊಳ್ಳಲು ಇರುವ ಕಾರಣಗಳೇನು ;

(ಈ) ಸರ್ಕಾರವು ಈವರೆಗೆ ಬಾಕಿ ಮರುಪಾವತಿಸದಿರುವುದರಿಂದ ಸಂಸ್ಥೆಯು ಆರ್ಥಿಕ ಸಂಕಷ್ಟಕ್ಕೆ ಸಿಲುಕಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಉ) ಬಂದಿದ್ದಲ್ಲಿ, ಈ ಬಗ್ಗೆ ಸರ್ಕಾರ ಕೈಗೊಂಡ ಕ್ರಮಗಳೇನು ?

## ಕಲ್ಯಾಣ ಕರ್ನಾಟಕ ಭಾಗದ ಮಾಜಿ ದೇವದಾಸಿಯರಿಗೆ ಮಂಜೂರು ಮಾಡಿದ ನಿವೇಶನ ಹಾಗೂ ಮನೆಗಳ ಕುರಿತು

**ಶ್ರೀಮತಿ ಹೇಮಲತಾ ನಾಯಕ (ವಿಧಾನಸಭೆಯಿಂದ ಚುನಾಯಿತರಾದವರು) :–**

೧೭೮೩ (೨೧೨೧) ಮಾನ್ಯ ವಸತಿ, ವಕ್ಫ್ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಕಳೆದ ೩ ವರ್ಷಗಳಲ್ಲಿ ಕಲ್ಯಾಣ ಕರ್ನಾಟಕ ಭಾಗದ ಜಿಲ್ಲೆಗಳಲ್ಲಿ ರಾಜೀವ್ ಗಾಂಧಿ ವಸತಿ ನಿಗಮದ ವತಿಯಿಂದ ಮಾಜಿ

ದೇವದಾಸಿಯರಿಗೆ ಮಂಜೂರು ಮಾಡಿದ ನಿವೇಶನಗಳು ಹಾಗೂ ಮನೆಗಳ ಸಂಖ್ಯೆ ಎಷ್ಟು ; (ಜಿಲ್ಲಾವಾರು ಮಾಹಿತಿ ಒದಗಿಸುವುದು)

(ಆ) ಮಾಜಿ ದೇವದಾಸಿಯರಿಗೆ ಮಂಜೂರು ಮಾಡಿದ ಮನೆಗಳಿಗೆ ಸಂಬಂಧಿಸಿದಂತೆ ಇಲ್ಲಿಯವರೆಗೆ ಎಷ್ಟು ಜನರಿಗೆ ಸಂಪೂರ್ಣವಾಗಿ ಹಣವನ್ನು ಬಿಡುಗಡೆ ಮಾಡಲಾಗಿರುತ್ತದೆ ;

(ಇ) ಎಷ್ಟು ಮನೆಗಳಿಗೆ ಇನ್ನು ಹಣವನ್ನು ಬಿಡುಗಡೆ ಮಾಡಲು ಬಾಕಿ ಇದೆ ; ಯಾವ ಯಾವ ಹಂತಗಳಲ್ಲಿ ಬಾಕಿ ಇದೆ ; ಬಾಕಿ ಇರುವ ಪ್ರಕರಣಗಳಲ್ಲಿ ಶೀಘ್ರವಾಗಿ ಹಣವನ್ನು ಬಿಡುಗಡೆ ಮಾಡಲು ಯಾವ ಕ್ರಮಗಳನ್ನು ಕೈಗೊಳ್ಳಲಾಗಿದೆ ?

## ರಾಜ್ಯದ ೪ ನಿಗಮಗಳಲ್ಲಿ ಸಂಚರಿಸುವ ಬಸ್ಸುಗಳ ಬಗ್ಗೆ

**ಶ್ರೀ ಐವನ್ ಡಿ'ಸೋಜಾ (ವಿಧಾನಸಭೆಯಿಂದ ಚುನಾಯಿತರಾದವರು) :–**

೧೭೮೪ (೨೦೨೩) ಮಾನ್ಯ ಸಾರಿಗೆ ಮತ್ತು ಮುಜರಾಯಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದ ೪ ನಿಗಮಗಳಲ್ಲಿ ಸಂಚರಿಸುವ ಬಸ್ಸುಗಳಿಗೆ ಎಷ್ಟು ವರ್ಷಗಳ ಅವಧಿಗೆ ಪರವಾನಿಗೆ ನೀಡಲಾಗಿರುತ್ತದೆ ; ಅವುಗಳು ಎಷ್ಟು ಕಿ.ಮಿ ಸಂಚಾರಕ್ಕೆ ಅರ್ಹತೆ ಹೊಂದಿರುತ್ತದೆ ; (ವಿವರ ನೀಡುವುದು)

(ಆ) ಪ್ರಸ್ತುತ ೪ ನಿಗಮಗಳಲ್ಲಿ ಅವಧಿ ಮೀರಿರುವ ಬಸ್ಸುಗಳ ಸಂಖ್ಯೆ ಎಷ್ಟು ; ಅವಧಿ ಮೀರಿರುವ ಬಸ್ಸುಗಳು ರಸ್ತೆಯಲ್ಲಿಯೇ ಕೆಟ್ಟುನಿಂತು ಪ್ರಯಾಣಿಕರಿಗೆ ಹಾಗೂ ಸಾರ್ವಜನಿಕರಿಗೆ ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಇ) ಅವಧಿ ಮೀರಿರುವ ಬಸ್ಸುಗಳನ್ನು ತೆಗೆದು ಹೊಸ ಬಸ್ಸುಗಳನ್ನು ನೀಡಲು ಸರ್ಕಾರ ಕ್ರಮ ಕೈಗೊಳ್ಳುತ್ತದೆಯೇ ; ಹಾಗಿದ್ದಲ್ಲಿ, ಯಾವ ಕಾಲಮಿತಿಯೊಳಗೆ ಪೂರ್ಣಗೊಳಿಸಲಾಗುವುದು ?

## ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಮುಜರಾಯಿ ವ್ಯಾಪ್ತಿಗೆ ಬರುವ ದೇವಸ್ಥಾನಗಳ ಬಗ್ಗೆ

**ಶ್ರೀ ಐವನ್ ಡಿ'ಸೋಜಾ (ವಿಧಾನಸಭೆಯಿಂದ ಚುನಾಯಿತರಾದವರು) :–**

೧೭೮೫ (೨೦೨೪) ಮಾನ್ಯ ಸಾರಿಗೆ ಮತ್ತು ಮುಜರಾಯಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಮುಜರಾಯಿ ವ್ಯಾಪ್ತಿಗೆ ಬರುವ ದೇವಸ್ಥಾನಗಳಲ್ಲಿ ಎ ದರ್ಜೆ, ಬಿ ದರ್ಜೆ ಮತ್ತು ಸಿ ದರ್ಜೆಯ ದೇವಸ್ಥಾನಗಳ ಸಂಖ್ಯೆ ಎಷ್ಟು ; (ವಿವರ ನೀಡುವುದು)

(ಆ) ಈ ದೇವಸ್ಥಾನಗಳಿಂದ ವಾರ್ಷಿಕವಾಗಿ ಸರ್ಕಾರಕ್ಕೆ ಎಷ್ಟು ಆದಾಯ ಬರುತ್ತದೆ : (ದೇವಸ್ಥಾನವಾರು ವಿವರ ನೀಡುವುದು)

(ಇ) ಈ ದೇವಸ್ಥಾನಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಸಿಬ್ಬಂದಿಗಳ ಸಂಖ್ಯೆ ಎಷ್ಟು ? (ಅವರಿಗೆ ಮಾಸಿಕ ನೀಡುತ್ತಿರುವ ವೇತನದ ವಿವರ ನೀಡುವುದು)

## ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯಿಂದ ವಿವಿಧ ಯೋಜನೆಯ ಬಗ್ಗೆ

**ಶ್ರೀ ಐವನ್ ಡಿ'ಸೋಜಾ (ವಿಧಾನಸಭೆಯಿಂದ ಚುನಾಯಿತರಾದವರು) :–**

೧೭೮೬ (೨೦೨೫) ಮಾನ್ಯ ವಸತಿ, ವಕ್ಫ್ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ದಕ್ಷಿಣ ಕನ್ನಡ ಜಿಲ್ಲೆಗೆ ೨೦೨೫-೨೬ನೇ ಸಾಲಿಗೆ ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯಿಂದ ವಿವಿಧ ಯೋಜನೆಯಡಿಯಲ್ಲಿ ಫಲಾನುಭವಿಗಳನ್ನು ಆಯ್ಕೆ ಮಾಡಲಾಗಿದೆಯೇ ; ಎಷ್ಟು ಅರ್ಜಿಗಳು ಬಂದಿದೆ ; (ಯೋಜನವಾರು ವಿವರ ನೀಡುವುದು)

(ಆ) ಸದರಿ ಯೋಜನೆಗಳನ್ನು ಎಲ್ಲಾ ಫಲಾನುಭವಿಗಳಿಗೆ ನೀಡಲಾಗಿದೆಯೇ ; ಬಾಕಿ ಇರುವ ಫಲಾನುಭವಿಗಳಿಗೆ ನೀಡಲು ಯಾವಾಗ ಕ್ರಮ ಕೈಗೊಳ್ಳಲಾಗುವುದು ;

(ಇ) ೨೦೨೬-೨೭ನೇ ಸಾಲಿನಲ್ಲಾದರೂ ಅರ್ಜಿ ಸಲ್ಲಿಸಿರುವ ಎಲ್ಲಾ ಫಲಾನುಭವಿಗಳಿಗೆ ಸರ್ಕಾರದ ಯೋಜನೆ ತಲುಪಿಸಲು ಸರ್ಕಾರ ಕ್ರಮ ಕೈಗೊಳ್ಳಲಾಗುವುದೇ ?

## ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಪಶು ಚಿಕಿತ್ಸಾಲಯ ಕಾರ್ಯನಿರ್ವಹಿಸುವ ಬಗ್ಗೆ

**ಶ್ರೀ ಐವನ್ ಡಿ'ಸೋಜಾ (ವಿಧಾನಸಭೆಯಿಂದ ಚುನಾಯಿತರಾದವರು) :–**

೧೭೮೭ (೨೦೨೬) ಮಾನ್ಯ ಪಶುಸಂಗೋಪನೆ ಮತ್ತು ರೇಷ್ಮೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಎಷ್ಟು ಪಶು ಚಿಕಿತ್ಸಾಲಯಗಳು ಕಾರ್ಯ ನಿರ್ವಹಿಸುತ್ತಿವೆ ; ಈ ಚಿಕಿತ್ಸಾಲಯಗಳು ಎಷ್ಟು ಸ್ವಂತ ಕಟ್ಟಡ ಹಾಗೂ ಎಷ್ಟು ಬಾಡಿಗೆ ಕಟ್ಟಡದಲ್ಲಿ ಕಾರ್ಯನಿರ್ವಹಿಸುತ್ತಿವೆ ; (ವಿವರ ನೀಡುವುದು)

(ಆ) ಎಲ್ಲಾ ಚಿಕಿತ್ಸಾಲಯಗಳು ಬಾಡಿಗೆ ಕಟ್ಟಡದಿಂದ ಸ್ವಂತ ಕಟ್ಟಡ ಹೊಂದಲು ಸರ್ಕಾರ ಕ್ರಮ ಕೈಗೊಳ್ಳುವುದೇ ; ಯಾವ

ಕಾಲಮಿತಿಯೊಳಗೆ ಕ್ರಮ ಕೈಗೊಳ್ಳಲಾಗುವುದು ; (ವಿವರ ನೀಡುವುದು)

(ಇ) ದಕ್ಷಿಣ ಕನ್ನಡ ಜಿಲ್ಲೆಗೆ ಎಷ್ಟು ಹೊಸ ಪಶು ಚಿಕಿತ್ಸಾಲಯಗಳಿಗೆ ಬೇಡಿಕೆ ಬಂದಿದೆ ; ಅವುಗಳನ್ನು ಯಾವ ಕಾಲಮಿತಿಯೊಳಗೆ ಈಡೇರಿಸಲು ಸರ್ಕಾರ ಕ್ರಮ ಕೈಗೊಳ್ಳುವುದು ?

## ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರಿಗೆ ಮೀಸಲಿಟ್ಟ ಡಿ.ಸಿ.ಮನ್ನಾ ಜಮೀನು ಅತಿಕ್ರಮಣ ಹಾಗೂ ಅರ್ಹ ಫಲಾನುಭವಿಗಳಿಗೆ ಹಂಚಿಕೆ ಮಾಡುವ ಕುರಿತು

**ಶ್ರೀ ಎಫ್.ಹೆಚ್.ಜಕ್ಕಪ್ಪನವರ್ (ನಾಮನಿರ್ದೇಶನ ಹೊಂದಿದವರು) :–**

೧೭೮೮ (೨೦೩೩) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗಳಲ್ಲಿ ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡದವರಿಗಾಗಿ ಮೀಸಲಿರಿಸಲಾದ ಡಿ.ಸಿ. ಮನ್ನಾ (Depressed Classes Mission) ಯೋಜನೆಯ ಒಟ್ಟು ಜಮೀನು ಎಷ್ಟು ; (ಜಿಲ್ಲಾವಾರು, ತಾಲ್ಲೂಕುವಾರು ಮತ್ತು ಗ್ರಾಮವಾರು ಸಂಪೂರ್ಣ ವಿಸ್ತೀರ್ಣದ ವಿವರ ನೀಡುವುದು)

(ಆ) ಸದರಿ ಜಿಲ್ಲೆಗಳಲ್ಲಿ ಈವರೆಗೆ ಎಷ್ಟು ಎಕರೆ ಡಿ.ಸಿ. ಮನ್ನಾ ಜಮೀನನ್ನು ಅರ್ಹ ಫಲಾನುಭವಿಗಳಿಗೆ ಹಂಚಿಕೆ ಮಾಡಲಾಗಿದೆ ಮತ್ತು ಇನ್ನು ಎಷ್ಟು ಎಕರೆ ಜಮೀನು ಹಂಚಿಕೆಯಾಗದೆ ಬಾಕಿ ಉಳಿದಿದೆ ; (ಸಂಪೂರ್ಣ ಮಾಹಿತಿ ನೀಡುವುದು)

(ಇ) ಈ ಡಿ.ಸಿ. ಮನ್ನಾ ಜಮೀನನ್ನು ಅರ್ಹರಲ್ಲದ ವ್ಯಕ್ತಿಗಳು ಅಥವಾ ಇತರರು ಅತಿಕ್ರಮಣ ಮಾಡಿ ಸಾಗುವಳಿ ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಬಂದಿದ್ದಲ್ಲಿ, ಅಂತಹ ಅತಿಕ್ರಮಣದಾರರನ್ನು ತೆರವುಗೊಳಿಸಲು ಸರ್ಕಾರ ಕೈಗೊಂಡಿರುವ ಕಾನೂನಾತ್ಮಕ ಕ್ರಮಗಳೇನು ;

(ಈ) ಬಾಕಿ ಉಳಿದಿರುವ ಡಿ.ಸಿ. ಮನ್ನಾ ಜಮೀನನ್ನು ಕೇವಲ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರಿಗೆ ಶೀಘ್ರವಾಗಿ ಹಂಚಿಕೆ ಮಾಡಲು ಸರ್ಕಾರವು ಕಾಲಮಿತಿಯ ಯೋಜನೆಯನ್ನು ಹಾಕಿಕೊಂಡಿದೆಯೇ ;

(ಉ) ಡಿ.ಸಿ. ಮನ್ನಾ ಜಮೀನುಗಳು ಬೇರೆಯವರ ಹೆಸರಿಗೆ ಅಕ್ರಮವಾಗಿ ಖಾತೆ (RTC) ಬದಲಾವಣೆಯಾಗಿರುವುದು ಕಂಡುಬಂದಲ್ಲಿ, ಅಂತಹ ಅಧಿಕಾರಿಗಳ ವಿರುದ್ಧ ಮತ್ತು ಅಕ್ರಮ ವರ್ಗಾವಣೆಯನ್ನು ರದ್ದುಪಡಿಸಲು ಸರ್ಕಾರ ತೆಗೆದುಕೊಂಡಿರುವ ನಿರ್ಣಯಗಳೇನು ?

## ಹುಬ್ಬಳ್ಳಿ–ಧಾರವಾಡ ಮಹಾನಗರ ಪಾಲಿಕೆಯ 'ಗಿರಣಿ ಚಾಳ್' ಪ್ರದೇಶವನ್ನು ಕೊಳಚೆ ಪ್ರದೇಶ ಎಂದು ಘೋಷಿಸುವ ಕುರಿತು

**ಶ್ರೀ ಎಫ್.ಹೆಚ್.ಜಕ್ಕಪ್ಪನವರ್ (ನಾಮನಿರ್ದೇಶನ ಹೊಂದಿದವರು) :–**

೧೭೮೯ (೨೦೩೪) ಮಾನ್ಯ ವಸತಿ, ವಕ್ಫ್ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಹುಬ್ಬಳ್ಳಿ–ಧಾರವಾಡ ಮಹಾನಗರ ಪಾಲಿಕೆ ವ್ಯಾಪ್ತಿಯ ೫೦ನೇ ವಾರ್ಡ್‌ನಲ್ಲಿ ಬರುವ 'ಗಿರಣಿ ಚಾಳ್' ಪ್ರದೇಶವನ್ನು ಅಧಿಕೃತವಾಗಿ

ಕೊಳಚೆ ಪ್ರದೇಶ (Slum) ಎಂದು ಘೋಷಿಸಲಾಗಿದೆಯೇ : ಹಾಗಿದ್ದಲ್ಲಿ, ಘೋಷಣೆಯಾದ ದಿನಾಂಕ ಮತ್ತು ಈ ಕುರಿತು ಅಧಿಸೂಚನೆಯ ವಿವರಗಳನ್ನು ನೀಡುವುದು ;

(ಆ) ಪ್ರಸ್ತುತ ಈ 'ಗಿರಣಿ ಚಾಳ್' ಕೊಳಚೆ ಪ್ರದೇಶದಲ್ಲಿ ವಾಸವಾಗಿರುವ ಒಟ್ಟು ಕುಟುಂಬಗಳ ಸಂಖ್ಯೆ ಎಷ್ಟು ; (ಸರ್ಕಾರ ನಡೆಸಿದ ಇತ್ತೀಚಿನ ಸಮೀಕ್ಷೆಯ ವರದಿಯೊಂದಿಗೆ ಮಾಹಿತಿ ನೀಡುವುದು)

(ಇ) ಸದರಿ ಪ್ರದೇಶದ ನಿವಾಸಿಗಳಿಗೆ ಇದುವರೆಗೆ ಹಕ್ಕು ಪತ್ರ (Title Deeds) ವಿತರಿಸಲಾಗಿದೆಯೇ ; ಇಲ್ಲದಿದ್ದಲ್ಲಿ, ಹಕ್ಕು ಪತ್ರ ನೀಡಲು ಇರುವ ಕಾನೂನಾತ್ಮಕ ಅಡೆತಡೆಗಳೇನು ಮತ್ತು ಎಷ್ಟು ಕುಟುಂಬಗಳು ಹಕ್ಕು ಪತ್ರದಿಂದ ವಂಚಿತವಾಗಿವೆ ;

(ಈ) ಈ ಕೊಳಚೆ ಪ್ರದೇಶದ ನಿವಾಸಿಗಳಿಗೆ 'ವಸತಿ ಯೋಜನೆ' ಅಡಿಯಲ್ಲಿ ಸುಸಜ್ಜಿತ ಮನೆಗಳನ್ನು ನಿರ್ಮಿಸಿಕೊಡುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ ; ಹಾಗಿದ್ದಲ್ಲಿ, ಈ ಯೋಜನೆಗೆ ಮೀಸಲಿಟ್ಟ ಅನುದಾನ ಮತ್ತು ಕಾಮಗಾರಿ ಆರಂಭಿಸುವ ಕಾಲಮಿತಿ ಏನು ?

## ಧಾರವಾಡ ಜಿಲ್ಲೆ, ಧಾರವಾಡ ತಾಲ್ಲೂಕಿನ ಹತ್ತಿಕೊಳ್ಳ ಗ್ರಾಮದ ಸರ್ವೆ ನಂಬರ್ ೮೧/೦೧/ಎ ಜಮೀನಿನ ಮಾಲೀಕತ್ವ ಮತ್ತು ಅಲ್ಲಿನ ನಿವಾಸಿಗಳಿಗೆ ಹಕ್ಕು ಪತ್ರ ವಿತರಿಸುವ ಕುರಿತು

**ಶ್ರೀ ಎಫ್.ಹೆಚ್.ಜಕ್ಕಪ್ಪನವರ್ (ನಾಮನಿರ್ದೇಶನ ಹೊಂದಿದವರು) :-**

೧೭೮೦ (೨೦೩೫) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಧಾರವಾಡ ಜಿಲ್ಲೆ, ಧಾರವಾಡ ತಾಲ್ಲೂಕಿನ ಹತ್ತಿಕೊಳ್ಳ ಗ್ರಾಮದ ಸರ್ವೆ ನಂಬರ್ ೮೧/೦೧/ಎ ಜಮೀನಿನ ಒಟ್ಟು ವಿಸ್ತೀರ್ಣ ಎಷ್ಟು ; ಸದರಿ ಜಮೀನು ಪ್ರಸ್ತುತ ಕಂದಾಯ ದಾಖಲೆಗಳ ಪ್ರಕಾರ ಸರ್ಕಾರಿ ಜಮೀನೇ ಅಥವಾ ಖಾಸಗಿ ವ್ಯಕ್ತಿಗಳಿಗೆ ಸೇರಿದ್ದೇ ; (ಸಂಪೂರ್ಣ ವಿವರ ನೀಡುವುದು)

(ಆ) ಸದರಿ ಸರ್ವೆ ನಂಬರ್‌ನ ಜಮೀನಿನಲ್ಲಿ ಗೌಳಿ ಜನಾಂಗದ ಕುಟುಂಬಗಳು ಎಷ್ಟು ವರ್ಷಗಳಿಂದ ವಾಸವಾಗಿವೆ ; ಇವರು ವಾಸಿಸುತ್ತಿರುವ ಜಾಗವನ್ನು 'ಕಂದಾಯ ಗ್ರಾಮ'ವೆಂದು ಘೋಷಿಸಿ, ಅವರಿಗೆ "ಹಕ್ಕುಪತ್ರ" ನೀಡುವಂತೆ ಸಲ್ಲಿಕೆಯಾಗಿರುವ ಪ್ರಸ್ತಾವನೆಗಳು ಸರ್ಕಾರದ ಯಾವ ಹಂತದಲ್ಲಿವೆ ;

(ಇ) ಸದರಿ ಜಮೀನನ್ನು ಅಥವಾ ಗೌಳಿ ಜನಾಂಗದವರು ವಾಸಿಸುತ್ತಿರುವ ಪ್ರದೇಶವನ್ನು ಇತ್ತೀಚಿನ ದಿನಗಳಲ್ಲಿ ಖಾಸಗಿ ವ್ಯಕ್ತಿಗಳು ಯಾರಾದರೂ ಅಕ್ರಮವಾಗಿ ಅತಿಕ್ರಮಣ ಮಾಡಿಕೊಂಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಈ) ಒಂದು ವೇಳೆ ಅತಿಕ್ರಮಣವಾಗಿದ್ದಲ್ಲಿ, ಅಂತಹ ವ್ಯಕ್ತಿಗಳ ವಿರುದ್ಧ ಇಲಾಖೆ ಕೈಗೊಂಡಿರುವ ಕ್ರಮಗಳೇನು ; ದಶಕಗಳಿಂದ ಅಲ್ಲಿಯೇ ವಾಸಿಸುತ್ತಿರುವ ಗೌಳಿ ಜನಾಂಗದವರನ್ನು ಒಕ್ಕಲೆಬ್ಬಿಸದಂತೆ ತಡೆದು ಅವರಿಗೆ ಅದೇ ಜಾಗದಲ್ಲಿ ಕಾನೂನಾತ್ಮಕವಾಗಿ ಹಕ್ಕುಪತ್ರ ನೀಡಲು ಸರ್ಕಾರಕ್ಕಿರುವ ಅಡೆತಡೆಗಳೇನು ?

# ೨೦೨೩ರ PTCL ಕಾಯ್ದೆಯ ಅನುಷ್ಠಾನ ಮತ್ತು SC/ST ಸಮುದಾಯದವರಿಗೆ ಜಮೀನು ಮರಳಿಸಿ ಕೊಟ್ಟಿರುವ ಕುರಿತು

**ಶ್ರೀ ಎಫ್.ಹೆಚ್.ಜಕ್ಕಪ್ಪನವರ್ (ನಾಮನಿರ್ದೇಶನ ಹೊಂದಿದವರು) :–**

೧೭೯೧ (೨೦೩೬) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದಲ್ಲಿ ೨೦೨೩ರ PTCL ತಿದ್ದುಪಡಿ ಕಾಯ್ದೆ (ಕಾಲಮಿತಿಯ ನಿರ್ಬಂಧ ತೆರವುಗೊಳಿಸಿದ ನಂತರ) ಜಾರಿಗೆ ಬಂದ ದಿನಾಂಕದಿಂದ ಈವರೆಗೆ ಎಷ್ಟು ಜನ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಫಲಾನುಭವಿಗಳಿಗೆ ಅವರ ಜಮೀನನ್ನು ಮರಳಿ ಹಸ್ತಾಂತರಿಸಲಾಗಿದೆ ; (ಜಿಲ್ಲಾವಾರು ಮತ್ತು ತಾಲ್ಲೂಕುವಾರು ಸಂಪೂರ್ಣ ವಿವರ ನೀಡುವುದು)

(ಆ) ಸದರಿ ತಿದ್ದುಪಡಿ ಕಾಯ್ದೆಯ ಅಡಿಯಲ್ಲಿ ರಾಜ್ಯದ ವಿವಿಧ ಜಿಲ್ಲಾಧಿಕಾರಿಗಳ ಮತ್ತು ಉಪವಿಭಾಗಾಧಿಕಾರಿಗಳ ನ್ಯಾಯಾಲಯಗಳಲ್ಲಿ ಸಲ್ಲಿಕೆಯಾಗಿರುವ ಒಟ್ಟು ಅರ್ಜಿಗಳೆಷ್ಟು ; ಈ ಪೈಕಿ ವಿಚಾರಣೆ ನಡೆಸಿ ವಿಲೇವಾರಿ ಮಾಡಲಾದ ಮತ್ತು ಬಾಕಿ ಉಳಿದಿರುವ ಪ್ರಕರಣಗಳ ಸಂಖ್ಯೆ ಎಷ್ಟು ; (ಜಿಲ್ಲಾವಾರು ಮಾಹಿತಿ ನೀಡುವುದು)

(ಇ) ತಿದ್ದುಪಡಿ ಕಾಯ್ದೆಯು ಜಾರಿಯಲ್ಲಿದ್ದರೂ ಸಹ, ನೂರಾರು ಪ್ರಕರಣಗಳಲ್ಲಿ ಜಮೀನು ಮರಳಿ ನೀಡಲು ವಿಳಂಬವಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಹಾಗಿದ್ದಲ್ಲಿ, ಈ ವಿಳಂಬಕ್ಕೆ ಇರುವ ತಾಂತ್ರಿಕ ಅಥವಾ ಆಡಳಿತಾತ್ಮಕ ಕಾರಣಗಳೇನು ; (ಸ್ಪಷ್ಟನೆ ನೀಡುವುದು)

(ಈ) ಮೂಲ ಹಂಚಿಕೆದಾರರಿಗೆ ಅಥವಾ ಅವರ ವಾರಸುದಾರರಿಗೆ ಜಮೀನನ್ನು ಶೀಘ್ರವಾಗಿ ಮರಳಿ ನೀಡಲು ಸರ್ಕಾರವು ಜಿಲ್ಲಾಡಳಿತಗಳಿಗೆ ನೀಡಿರುವ ನಿರ್ದೇಶನಗಳೇನು ; ಬಾಕಿ ಇರುವ ಎಲ್ಲಾ ಪ್ರಕರಣಗಳನ್ನು ನಿರ್ದಿಷ್ಟ ಕಾಲಮಿತಿಯೊಳಗೆ ಇತ್ಯರ್ಥಪಡಿಸಲು ಸರ್ಕಾರವು ಕೈಗೊಂಡಿರುವ ಕ್ರಮಗಳೇನು ?

## ಧಾರವಾಡ ಜಿಲ್ಲೆಯ ವಿವಿಧ ತಾಲ್ಲೂಕುಗಳಲ್ಲಿನ ಹೆಚ್ಚುವರಿ ಮತ್ತು ಸರ್ಕಾರಿ ಪಡಾ ಭೂಮಿಯ ಒತ್ತುವರಿ ಮತ್ತು SC/ST ವರ್ಗದವರಿಗೆ ಹಂಚಿಕೆ ಕುರಿತು

**ಶ್ರೀ ಎಫ್.ಹೆಚ್.ಜಕ್ಕಪ್ಪನವರ್ (ನಾಮನಿರ್ದೇಶನ ಹೊಂದಿದವರು) :–**

೧೭೯೨ (೨೦೩೭) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಧಾರವಾಡ ಜಿಲ್ಲೆಯ ಕಲಘಟಗಿ, ಅಳ್ನಾವರ, ಧಾರವಾಡ, ಅಣ್ಣಿಗೇರಿ, ನವಲಗುಂದ, ಕುಂದಗೋಳ, ಹುಬ್ಬಳ್ಳಿ ನಗರ ಮತ್ತು ಹುಬ್ಬಳ್ಳಿ ಗ್ರಾಮಾಂತರ ತಾಲ್ಲೂಕುಗಳಲ್ಲಿ, ಸರ್ಕಾರದ ವಶದಲ್ಲಿರುವ ಒಟ್ಟು ಹೆಚ್ಚುವರಿ (Surplus) ಮತ್ತು ಸರ್ಕಾರಿ ಪಡಾ ಕೃಷಿ ಭೂಮಿ ಎಷ್ಟು ಎಕರೆ ಇದೆ ; (ತಾಲ್ಲೂಕುವಾರು ಮತ್ತು ಸರ್ವೆ ನಂಬರ್‌ವಾರು ಪೂರ್ಣ ವಿವರ ನೀಡುವುದು)

(ಆ) ಈ ಜಿಲ್ಲೆಯ ವಿವಿಧ ತಾಲ್ಲೂಕುಗಳಲ್ಲಿ ಇಂತಹ ಎಷ್ಟು ಎಕರೆ ಸರ್ಕಾರಿ ಕೃಷಿ ಭೂಮಿಯು ಪ್ರಸ್ತುತ ಅತಿಕ್ರಮಣ ಅಥವಾ ಒತ್ತುವರಿಯಾಗಿದೆ ; ಈ ಒತ್ತುವರಿ ಪ್ರಕರಣಗಳ ಸಂಖ್ಯೆ ಎಷ್ಟು ಮತ್ತು ಒತ್ತುವರಿದಾರರ ವಿರುದ್ಧ ಸರ್ಕಾರ ಕೈಗೊಂಡಿರುವ ಕ್ರಮಗಳೇನು ;

(ಇ) ಸದರಿ ಹೆಚ್ಚುವರಿ ಸರ್ಕಾರಿ ಕೃಷಿ ಭೂಮಿಯನ್ನು ಹಾಗೂ ಸರ್ಕಾರಿ ಪಡಾ ಜಮೀನನ್ನು ಭೂ–ರಹಿತ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಕೃಷಿ ಕಾರ್ಮಿಕರಿಗೆ ಕಾನೂನು ಪ್ರಕಾರ ಹಂಚಿಕೆ ಮಾಡಲು ಸರ್ಕಾರ ಯಾವ ಕ್ರಮ ಕೈಗೊಂಡಿದೆ ;

(ಈ) ಜಿಲ್ಲೆಯಲ್ಲಿ ಗುರುತಿಸಲಾದ ಈ ಹೆಚ್ಚುವರಿ ಸರ್ಕಾರಿ ಕೃಷಿ ಭೂಮಿಯನ್ನು ಅರ್ಹ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡ ವರ್ಗದ ಫಲಾನುಭವಿಗಳಿಗೆ ಹಂಚಿಕೆ ಮಾಡಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು ?

## ರಾಜ್ಯದಲ್ಲಿ ಪೋಡಿ ಪ್ರಕರಣಗಳು ಬಾಕಿ ಇರುವ ಕುರಿತು

**ಶ್ರೀ ಟಿ.ಎನ್.ಜವರಾಯಿ ಗೌಡ (ವಿಧಾನಸಭೆಯಿಂದ ಚುನಾಯಿತರಾದವರು) :–**

೧೭೯೩ (೨೦೫೦) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಭೂಮಾಪಕರ ಕೊರತೆ, ಸಕಾಲಕ್ಕೆ ಧಕ್ಕದ ಜಮೀನು ಪೋಡಿ, ರಾಜ್ಯದಲ್ಲಿ ೨.೩೪ ಲಕ್ಷ ಅರ್ಜಿ ಬಾಕಿ ಇರುವ ಕುರಿತು ಸರ್ಕಾರದ ಗಮನಕ್ಕೆ ಬಂದಿದೆಯೇ ; ಬಂದಿದ್ದಲ್ಲಿ, ಸರ್ಕಾರ ತೆಗೆದುಕೊಂಡಿರುವ ಕ್ರಮಗಳೇನು ; (ವಿವರ ನೀಡುವುದು)

(ಆ) ರೈತರ ಜಮೀನಿನ ಅಭಿವೃದ್ದಿ, ಭೂ ಪರಿವರ್ತನೆ, ವಿಭಾಗ ಅಥವಾ ಮಾರಾಟ ಮಾಡಲು ಸಾಧ್ಯವಿಲ್ಲದಿರುವುದು ಜತೆಗೆ ಸಾಲ ಸಹಾಯಧನವೂ ದೊರಕದೆ ರೈತರು, ಸಾರ್ವಜನಿಕರು ತೊಂದರೆ ಅನುಭವಿಸುತ್ತಿರುವುದನ್ನು ತಪ್ಪಿಸಲು ಸರ್ಕಾರ ನಿಗದಿತ ಅವಧಿಯೊಳಗೆ ಪೋಡಿ ಪ್ರಕರಣಗಳನ್ನು ವಿಲೇವಾರಿ ಮಾಡಲು ಕಾಲಮಿತಿಯನ್ನು ನಿಗದಿಪಡಿಸಲಾಗುವುದೇ ;

(ಇ) ಸರ್ವೇಯರ್ ಇಲ್ಲದಿರುವುದೇ ಇದಕ್ಕೆ ಕಾರಣವೇ ; ಸರ್ವೇಯರ್ ಇಲ್ಲದಿರುವುದರಿಂದ ಸರ್ವೇಯರ್‌ಗಳನ್ನು ನೇಮಕ ಮಾಡಿಕೊಳ್ಳಲು ಸರ್ಕಾರ ತಕ್ಷಣವೇ ಕ್ರಮ ವಹಿಸುವುದೇ ?

## ಬೆಂಗಳೂರಿನಲ್ಲಿ ಗೃಹ ಮಂಡಳಿಯಿಂದ ನಿರ್ಮಿಸಿರುವ ಮನೆಗಳ ಕುರಿತು

**ಶ್ರೀ ಟಿ.ಎನ್.ಜವರಾಯಿ ಗೌಡ (ವಿಧಾನಸಭೆಯಿಂದ ಚುನಾಯಿತರಾದವರು) :–**

೧೭೯೪ (೨೦೫೧) ಮಾನ್ಯ ವಸತಿ, ವಕ್ಫ್ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಕರ್ನಾಟಕ ಗೃಹ ಮಂಡಳಿಯು ಬೆಂಗಳೂರಿನಲ್ಲಿ ಸೂರು ಹೊಂದಬೇಕೆನ್ನುವ ಬಡ–ಮಧ್ಯಮ ವರ್ಗದವರಿಗಾಗಿ ಕೆಂಗೇರಿ ಹೋಬಳಿಯ ಬಿ.ಎಂ ಕಾವಲ್‌ನಲ್ಲಿ ಹೊಸ ಯೋಜನೆಯನ್ನು ಪ್ರಾರಂಭಿಸಲಾಗಿದೆಯೇ ; (ಹಾಗಿದ್ದಲ್ಲಿ, ಈ ಬಗ್ಗೆ ವಿವರ ನೀಡುವುದು)

(ಆ) ಈ ಯೋಜನೆಗಾಗಿ ಪ್ರದೇಶದಲ್ಲಿ ಎಷ್ಟು ಎಕರೆ ಜಮೀನನ್ನು ಭೂಸ್ವಾಧೀನಪಡಿಸಿಕೊಂಡಿದೆ ; (ವಿವರ ಒದಗಿಸುವುದು)

(ಇ) ಯಾವ ಅನುಪಾತದಲ್ಲಿ ಯಾವ ಮಾನದಂಡಗಳನ್ನು ಅನುಸರಿಸಿ, ರೈತರಿಂದ ಜಮೀನುಗಳನ್ನು ಪಡೆಯಲಾಗುತ್ತಿದೆ ; (ವಿವರ ನೀಡುವುದು)

(ಈ) ಈ ಯೋಜನೆಯಿಂದ ಲಭ್ಯವಾಗುವ ನಿವೇಶನಗಳ ಸಂಖ್ಯೆ ಎಷ್ಟು ; ಹಾಗೂ ಈ ಯೋಜನೆಗಾಗಿ ಸರ್ಕಾರ ಖರ್ಚು ಮಾಡುತ್ತಿರುವ ಮೊತ್ತವೆಷ್ಟು ; (ಮಾಹಿತಿ ಒದಗಿಸುವುದು)

(ಉ) ಈಗಾಗಲೇ ಬಿ.ಡಿ.ಎ ಮತ್ತು ಗೃಹ ಮಂಡಳಿಯಿಂದ ನಿರ್ಮಿಸಿರುವ ಮನೆಗಳು ಕಳಪೆ ಮಟ್ಟದಿಂದ ಕೂಡಿದ್ದು, ಇವುಗಳನ್ನು ವಿಲೇವಾರಿ ಮಾಡದೆ ಯೋಜನೆಗೆ ಇಷ್ಟೊಂದು ಹಣವನ್ನು ವಿನಿಯೋಗಿಸುತ್ತಿರುವುದು ಸರಿಯಾದ ಕ್ರಮವೇ ? (ವಿವರ ನೀಡುವುದು)

## ವಿವಿಧ ಯೋಜನೆಗಳಡಿಯಲ್ಲಿ ಹಂಚಿಕೆಯಾಗಿರುವ ಮನೆಗಳ ಕುರಿತು

**ಶ್ರೀ ಟಿ.ಎನ್.ಜವರಾಯಿ ಗೌಡ (ವಿಧಾನಸಭೆಯಿಂದ ಚುನಾಯಿತರಾದವರು) :–**

೧೭೯೫ (೨೦೫೨) ಮಾನ್ಯ ವಸತಿ, ವಕ್ಫ್ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಕಳೆದ ೩ ವರ್ಷಗಳಲ್ಲಿ ವಿವಿಧ ಯೋಜನೆಗಳಡಿಯಲ್ಲಿ ಹಂಚಿಕೆಯಾಗಿರುವ ಮನೆಗಳೆಷ್ಟು : (ಜಿಲ್ಲಾವಾರು ಮಾಹಿತಿ ನೀಡುವುದು)

(ಆ) ಕಳೆದ ೨ ವರ್ಷದಲ್ಲಿ ಬೆಂಗಳೂರು ನಗರದ ಯಶವಂತಪುರ ವಿಧಾನಸಭಾ ಕ್ಷೇತ್ರದಲ್ಲಿ ವಿವಿಧ ಯೋಜನೆಗಳಡಿಯಲ್ಲಿ ಮನೆಗಳನ್ನು ಪಡೆಯಲು ಬಂದಿದ್ದ ಅರ್ಜಿಗಳ ಸಂಖ್ಯೆ ಎಷ್ಟು : ಬಂದಿರುವ ಅರ್ಜಿಗಳಲ್ಲಿ ಎಷ್ಟು ಜನ ಅರ್ಹರಿಗೆ ಮನೆಗಳನ್ನು ವಿತರಿಸಲಾಗಿದೆ ; (ವಿವರವಾದ ಮಾಹಿತಿಯನ್ನು ನೀಡುವುದು)

(ಇ) ಹಂಚಿಕೆ ಮಾಡಲು ಬಾಕಿ ಇರುವ ಅರ್ಹ ಫಲಾನುಭವಿಗಳ ಸಂಖ್ಯೆ ಎಷ್ಟು, ಈ ಅರ್ಹ ಫಲಾನುಭವಿಗಳಿಗೆ ಎಷ್ಟು ದಿನಗಳಲ್ಲಿ ಮನೆಗಳನ್ನು ಹಂಚಿಕೆ ಮಾಡಲಾಗುವುದು ;

(ಈ) ಬೆಂಗಳೂರು ನಗರದ ವಿವಿಧೆಡೆ ಮಾನ್ಯ ಮುಖ್ಯಮಂತ್ರಿಯವರ ಒಂದು ಲಕ್ಷ ಬಹುಮಹಡಿಗಳ ವಸತಿ ಯೋಜನೆಯಡಿ ಎಷ್ಟು ಮನೆಗಳನ್ನು ನಿರ್ಮಿಸಲಾಗಿದೆ ; (ವಿವರ ನೀಡುವುದು)

(ಉ) ಬೆಂಗಳೂರು ನಗರದ ಯಾವ ಯಾವ ಸ್ಥಳಗಳಲ್ಲಿ ರಾಜೀವ್‌ಗಾಂಧಿ ವಸತಿ ನಿಗಮ, ಬಹುಮಹಡಿ ಮನೆಗಳನ್ನು ನಿರ್ಮಿಸಿದೆ ;

(ಊ) ಈ ನಿಗಮದಿಂದ ನಿರ್ಮಿಸಿರುವ ಮನೆಗಳ ಹಂಚಿಕೆಗಾಗಿ ಇನ್ನು ಅರ್ಹ ಫಲಾನುಭವಿಗಳ ಪಟ್ಟಿ ಪ್ರಕಟವಾಗದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಬಂದಿದ್ದಲ್ಲಿ, ಸರ್ಕಾರ ಈ ಬಗ್ಗೆ ತೆಗೆದುಕೊಂಡಿರುವ ಕ್ರಮಗಳೇನು ? (ವಿವರ ನೀಡುವುದು)

## ರೇಷ್ಮೆ ಬೆಳೆಯನ್ನು ಉತ್ತೇಜಿಸಲು ಸರ್ಕಾರದ ಸಬ್ಸಿಡಿ ಕುರಿತು

**ಶ್ರೀ ಟಿ.ಎನ್.ಜವರಾಯಿ ಗೌಡ (ವಿಧಾನಸಭೆಯಿಂದ ಚುನಾಯಿತರಾದವರು) :–**

೧೭೭೬ (೨೦೫೩) ಮಾನ್ಯ ಪಶುಸಂಗೋಪನೆ ಮತ್ತು ರೇಷ್ಮೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದಲ್ಲಿ ರೇಷ್ಮೆ ಬೆಳೆಯನ್ನು ಉತ್ತೇಜಿಸಲು ಸರ್ಕಾರ ನೂತನವಾಗಿ ಕೈಗೊಂಡಿರುವ ಕ್ರಮಗಳೇನು ; (ವಿವರ ನೀಡುವುದು)

(ಆ) ರೇಷ್ಮೆ ಬೆಳೆಯು ರಾಜ್ಯದ ರೈತರಿಗೆ ಲಾಭದಾಯಕವಾಗಿರುವುದರಿಂದ ಈ ಬೆಳೆಗೆ ಹೆಚ್ಚಿನ ರೀತಿಯಲ್ಲಿ ಸಬ್ಸಿಡಿ ನೀಡಿ ಬೆಳೆ ಬೆಳೆಯಲು

ರೈತರನ್ನು ಉತ್ತೇಜಿಸಲು ಸರ್ಕಾರ ಹಾಕಿಕೊಂಡಿರುವ ಕ್ರಮಗಳೇನು ; (ವಿವರ ನೀಡುವುದು)

(ಇ) ರಾಜ್ಯದ ರೇಷ್ಮೆ ನಿಗಮದಲ್ಲಿ ಬೇಡಿಕೆಗೆ ತಕ್ಕಂತೆ ಸೀರೆಗಳು ಉತ್ಪಾದನೆ ಆಗದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಬಂದಿದ್ದಲ್ಲಿ, ಸರ್ಕಾರ ಯಾವ ರೀತಿಯ ಕ್ರಮಗಳನ್ನು ತೆಗೆದುಕೊಂಡಿದೆ ? (ವಿವರ ನೀಡುವುದು)

## ಕೃಷಿ ಸಂಬಂಧಿತ ಕಟ್ಟಡಗಳಿಗೆ ವಿದ್ಯುತ್ ಸಂಪರ್ಕ ಕಲ್ಪಿಸುವ ಬಗ್ಗೆ

**ಶ್ರೀ ಕಿಶೋರ್ ಕುಮಾರ್ ಪುತ್ತೂರ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೧೭೯೭ (೨೦೩೮) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದಲ್ಲಿ ಕೃಷಿ ಜಮೀನಿನಲ್ಲಿ ರೈತರು ಕೃಷಿ ಸಂಬಂಧಿತ ಚಟುವಟಿಕೆಗಳಿಗಾಗಿ (ಉದಾ: ಪಂಪ್‌ಹೌಸ್, ಗೋದಾಮು, ಹಾಲು ಸಂಗ್ರಹ ಕೇಂದ್ರ, ಕೃಷಿ ಉಪಕರಣಗಳ ಶೆಡ್, ಕೋಳಿ ಸಾಕಾಣಿಕೆ ಶೆಡ್, ಮುಂತಾದವು) ನಿರ್ಮಿಸಿದ ಕಟ್ಟಡಗಳಿಗೆ ವಿದ್ಯುತ್ ಸಂಪರ್ಕ ಕಲ್ಪಿಸುವ ಸಲುವಾಗಿ ವಿದ್ಯುತ್ ಸರಬರಾಜು ಕಂಪನಿಗಳು ನಿರಾಕ್ಷೇಪಣಾ ಪತ್ರ ಕೋರುತ್ತಿದ್ದು, ಆದರೆ, ಇಂತಹ ಕಟ್ಟಡಗಳಿಗೆ ನಿರಾಕ್ಷೇಪಣಾ ಪತ್ರ ನೀಡುವ ಸರ್ಕಾರದ ಸಂಬಂಧಿತ ನಿಯಮಾವಳಿಗಳ ವ್ಯಾಖ್ಯಾನದಲ್ಲಿ ಸ್ಪಷ್ಟತೆ ಇಲ್ಲದಿರುವುದರಿಂದ ಸ್ಥಳೀಯ ಮಟ್ಟದಲ್ಲಿ ಗೊಂದಲಗಳು ಉಂಟಾಗಿ ಸಾರ್ವಜನಿಕರಿಗೆ ತೊಂದರೆ ಆಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ಕೃಷಿ ಜಮೀನಿನಲ್ಲಿ ಸದರಿ ಉದ್ದೇಶಗಳಿಗೆ ನಿರ್ಮಿಸಲಾದ ಕಟ್ಟಗಳಿಗೆ, ಭೂ ಪರಿವರ್ತನೆ ಮಾಡದೆ ವಿದ್ಯುತ್ ಸಂಪರ್ಕ ನೀಡಲು ಕಾನೂನುಬದ್ಧ ಅವಕಾಶವಿದೆಯೇ ; ಇದ್ದಲ್ಲಿ, ಅದರ ಕುರಿತು ಸರ್ಕಾರ ಹೊರಡಿಸಿದ ಸ್ಪಷ್ಟ ಮಾರ್ಗಸೂಚಿಗಳು/ಸುತ್ತೋಲೆಗಳ ವಿವರವೇನು ;

(ಇ) ಕೃಷಿ ಜಮೀನಿನಲ್ಲಿ ನಿರ್ಮಿಸಲಾದ ಕಟ್ಟಡಗಳಿಗೆ ನಿರಾಕ್ಷೇಪಣಾ ಪತ್ರ ನೀಡುವ ವಿಷಯದಲ್ಲಿ ಮೆಸ್ಕಾಂ ಸೇರಿದಂತೆ ಇತರೆ ಎಸ್ಕಾಂಗಳಿಗೆ ಸರ್ಕಾರ ಯಾವುದೇ ಏಕೀಕೃತ ಮಾರ್ಗಸೂಚಿ ನೀಡಿದೆಯೇ ; ಇಲ್ಲದಿದ್ದರೆ, ಪ್ರತಿ ಜಿಲ್ಲೆಯಲ್ಲಿ ವಿಭಿನ್ನ ರೀತಿಯ ಅನುಷ್ಠಾನ ನಡೆಯುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಈ) ನಿರಾಕ್ಷೇಪಣಾ ಪತ್ರ ನೀಡುವಲ್ಲಿ ಕಂದಾಯ ಇಲಾಖೆ/ತಹಶೀಲ್ದಾರ್ ಮತ್ತು ವಿದ್ಯುತ್ ಸರಬರಾಜು ಕಂಪನಿಗಳ ನಡುವಿನ ಅಧಿಕಾರ ಹಾಗೂ ಜವಾಬ್ದಾರಿಗಳ ಕುರಿತು ಸರ್ಕಾರ ಯಾವುದೇ ಸಮನ್ವಯ ವ್ಯವಸ್ಥೆಯನ್ನು ರೂಪಿಸಿದೆಯೇ ; ರಾಜ್ಯದಾದ್ಯಂತ ಈ ಕುರಿತು ಉಂಟಾಗಿರುವ ಗೊಂದಲ ನಿವಾರಣೆಗೆ ಏಕೀಕೃತ, ಪಾರದರ್ಶಕ ಹಾಗೂ ರೈತಪರ ಮಾರ್ಗಸೂಚಿಗಳನ್ನು ಹೊರಡಿಸುವ ಬಗ್ಗೆ ಸರ್ಕಾರದ ನಿಲುವೇನು ?

## ರಾಜ್ಯದಲ್ಲಿನ ಗೋಶಾಲೆಗಳ ಕುರಿತು

**ಶ್ರೀ ಕಿಶೋರ್ ಕುಮಾರ್ ಪುತ್ತೂರ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೧೭೬೮ (೨೦೪೦) ಮಾನ್ಯ ಪಶುಸಂಗೋಪನೆ ಮತ್ತು ರೇಷ್ಮೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಪಶುಸಂಗೋಪನೆ ಇಲಾಖೆಯು ಅಧೀನದಲ್ಲಿ ಕಾರ್ಯನಿರ್ವಹಿಸುತ್ತಿರುವ ಗೋಶಾಲೆಗಳು/ಗೋಸಂಕುಲ ಸಂರಕ್ಷಣೆ ಕೇಂದ್ರಗಳ ನಿರ್ವಹಣೆಯನ್ನು ಸರ್ಕಾರ ಸಮರ್ಪಕವಾಗಿ

ನಡೆಯುತ್ತಿಲ್ಲವೆಂಬ ಸಾರ್ವಜನಿಕ ದೂರಿನ ಕುರಿತು ಸರ್ಕಾರದ ಗಮನಕ್ಕೆ ಬಂದಿದೆಯೇ ; ರಾಜ್ಯದಲ್ಲಿ ಪ್ರಸ್ತುತ ಎಷ್ಟು ಸರ್ಕಾರಿ ಗೋಶಾಲೆಗಳು ಕಾರ್ಯನಿರ್ವಹಿಸುತ್ತಿವೆ ; ಪ್ರತಿ ಗೋಶಾಲೆಯ ಅನುಮೋದಿತ ಸಾಮರ್ಥ್ಯ (Capacity) ಮತ್ತು ಪ್ರಸ್ತುತ ಇರುವ ಪಶುಗಳ ಸಂಖ್ಯೆ ಎಷ್ಟು ;

(ಆ) ಗೋಶಾಲೆಗಳ ನಿರ್ವಹಣೆಗೆ ವರ್ಷವಾರು ಅನುದಾನ ಎಷ್ಟು ಮಂಜೂರಾಗಿದೆ ; ಕಳೆದ ಮೂರು ವರ್ಷಗಳ ಅನುದಾನ ಬಿಡುಗಡೆ ಮತ್ತು ಖರ್ಚಿನ ವಿವರವನ್ನು (ಆಹಾರ, ಔಷಧಿ, ಸಿಬ್ಬಂದಿ ವೇತನ, ಮೂಲಸೌಕರ್ಯ, ನಿರ್ವಹಣೆ) ಜಿಲ್ಲಾವಾರು ನೀಡುವುದು ;

(ಇ) ಪ್ರತಿ ಪಶುವಿಗೆ ದಿನಸಿ ಆಹಾರ ಮಾನದಂಡ ಹಾಗೂ ಪೌಷ್ಟಿಕಾಂಶ ಪ್ರಮಾಣವನ್ನು ನಿಗದಿಪಡಿಸಿರುವ ಸರ್ಕಾರದ ಮಾರ್ಗಸೂಚಿಗಳು ಯಾವುವು ; ಅವುಗಳ ಅನುಷ್ಠಾನವನ್ನು ಪರಿಶೀಲಿಸಲು ಯಾವುದೇ ತಾಂತ್ರಿಕ ತಪಾಸಣೆ (Technical Audit/Veterinary Inspection) ವ್ಯವಸ್ಥೆ ಇದೆಯೇ ;

(ಈ) ಗೋಶಾಲೆಗಳಲ್ಲಿ ನಿಯಮಿತ ಆರೋಗ್ಯ ತಪಾಸಣೆ, ಲಸಿಕಾ ಕಾರ್ಯಕ್ರಮ (Vaccination Schedule), ರೋಗ ನಿಯಂತ್ರಣ ಕ್ರಮಗಳು ಮತ್ತು ಪಶು ವೈದ್ಯರ ನೇಮಕಾತಿ ಬಗ್ಗೆ ನಿಗದಿತ ಮಾನದಂಡಗಳನ್ನು ಪಾಲಿಸಲಾಗುತ್ತಿದೆಯೇ ; ಇಲಾಖೆಯಲ್ಲಿನ ಖಾಲಿ ಹುದ್ದೆಗಳ ಸಂಖ್ಯೆ ಎಷ್ಟು ;

(ಉ) ರಾಜ್ಯದಲ್ಲಿನ ಸರ್ಕಾರಿ ಗೋಶಾಲೆಗಳ ಸಮರ್ಪಕ, ಪಾರದರ್ಶಕ ಮತ್ತು ವೈಜ್ಞಾನಿಕ ನಿರ್ವಹಣೆಯನ್ನು ಖಚಿತಪಡಿಸಲು ಸರ್ಕಾರವು ಕೈಗೊಳ್ಳಲು ಉದ್ದೇಶಿಸಿರುವ ಸಮಗ್ರ ಸುಧಾರಣಾ ಕ್ರಮಗಳು ಯಾವುವು ?

## ನಿವೃತ್ತ ಸೈನಿಕರಿಗೆ ನೀಡುತ್ತಿರುವ ಸೌಲಭ್ಯಗಳ ಕುರಿತು

**ಶ್ರೀ ಕಿಶೋರ್ ಕುಮಾರ್ ಪುತ್ತೂರ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೧೭೯ (೨೦೪೧) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದಲ್ಲಿ ಸೇನೆಯಿಂದ ನಿವೃತ್ತಿ ಹೊಂದಿರುವ ಅನೇಕ ಸೈನಿಕರು ಜಾರಿಯಲ್ಲಿರುವ ಸರ್ಕಾರದ ನಿಯಮಾವಳಿ ಪ್ರಕಾರ ಕೃಷಿ ಅಥವಾ ವಸತಿ ಉದ್ದೇಶಕ್ಕಾಗಿ ಭೂ ಮಂಜೂರಾತಿ ಕೋರಿ ರಾಜ್ಯದ ವಿವಿಧ ತಾಲ್ಲೂಕುಗಳಲ್ಲಿ ತಹಶೀಲ್ದಾರರಿಗೆ ಅರ್ಜಿ ಸಲ್ಲಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಕಳೆದ ಮೂರು ವರ್ಷಗಳಲ್ಲಿ ಎಷ್ಟು ನಿವೃತ್ತ ಸೈನಿಕರು ಭೂ ಮಂಜೂರಾತಿ ಕೋರಿ ಅರ್ಜಿ ಸಲ್ಲಿಸಿದ್ದಾರೆ ; ಅವುಗಳಲ್ಲಿ ಎಷ್ಟು ಅರ್ಜಿಗಳಿಗೆ ಭೂ ಮಂಜೂರಾತಿ ನೀಡಲಾಗಿದೆ ಹಾಗೂ ಎಷ್ಟು ಅರ್ಜಿಗಳು ಬಾಕಿ ಉಳಿದಿವೆ ; (ಜಿಲ್ಲಾವಾರು ವಿವರವನ್ನು ನೀಡುವುದು)

(ಆ) ಅರ್ಜಿಗಳು ಹಲವು ವರ್ಷಗಳಿಂದ ಬಾಕಿ ಉಳಿಯಲು ಕಾರಣವೇನು ; ಭೂ ಲಭ್ಯತೆ ಕೊರತೆ, ದಾಖಲೆಗಳ ಪರಿಶೀಲನೆ ವಿಳಂಬ, ಭೂ ಸುಧಾರಣಾ ಕಾಯ್ದೆಗಳ ನಿರ್ಬಂಧಗಳು ಅಥವಾ ಆಡಳಿತಾತ್ಮಕ ನಿರ್ಲಕ್ಷ್ಯವೇ ಕಾರಣವಾಗಿದೆಯೇ ;

(ಇ) ನಿವೃತ್ತ ಸೈನಿಕರಿಗೆ ಭೂ ಮಂಜೂರಾತಿಗೊಳಿಸುವ ಕುರಿತು ಪ್ರಸ್ತುತ ಜಾರಿಯಲ್ಲಿರುವ ಸರ್ಕಾರದ ನಿಯಮ ಮತ್ತು ಮಾರ್ಗಸೂಚಿಗಳು ಯಾವುವು ; ಅವುಗಳನ್ನು ಅನುಷ್ಠಾನಗೊಳಿಸುವಲ್ಲಿ ಜಿಲ್ಲಾಧಿಕಾರಿಗಳು ಹಾಗೂ ತಹಶೀಲ್ದಾರರು ಅನುಸರಿಸಬೇಕಾದ ಕಾಲಮಿತಿಯನ್ನು ಸರ್ಕಾರ ನಿಗದಿ ಮಾಡಿದೆಯೇ ;

(ಈ) ಭೂ ಮಂಜೂರಾತಿ ಪ್ರಕ್ರಿಯೆಯನ್ನು ಪಾರದರ್ಶಕ ಹಾಗೂ ವೇಗವಾಗಿ ನಿರ್ವಹಿಸಲು ಆನ್‌ಲೈನ್ ಟ್ರ್ಯಾಕಿಂಗ್ ವ್ಯವಸ್ಥೆ ಅಥವಾ ಏಕಗವಾಕ್ಷಿ ವ್ಯವಸ್ಥೆ ಜಾರಿಗೆ ತರುವ ಬಗ್ಗೆ ಸರ್ಕಾರದ ನಿಲುವೇನು ; ಈಗಾಗಲೇ ಅರ್ಜಿ ಸಲ್ಲಿಸಿ ವರ್ಷಗಳ ಕಾಲ ನಿರೀಕ್ಷೆಯಲ್ಲಿರುವ ನಿವೃತ್ತ ಸೈನಿಕರ ಹಿತಾಸಕ್ತಿಯನ್ನು ಕಾಪಾಡಲು ಸರ್ಕಾರ ತಕ್ಷಣ ಕೈಗೊಳ್ಳುವ ಕ್ರಮಗಳೇನು ;

(ಉ) ನಿವೃತ್ತ ಸೈನಿಕರಿಗೆ ರಾಜ್ಯ ಸರ್ಕಾರದಿಂದ ನೀಡುತ್ತಿರುವ ಸೌಲಭ್ಯಗಳು ಯಾವುವು ?

## ರಾಜ್ಯದಲ್ಲಿರುವ ಕಂದಾಯ ಗ್ರಾಮಗಳ ಕುರಿತು

**ಶ್ರೀ ಕಿಶೋರ್ ಕುಮಾರ್ ಪುತ್ತೂರ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೧೮೦೦ (೨೦೪೨) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದಲ್ಲಿರುವ ಒಟ್ಟು ಕಂದಾಯ ಗ್ರಾಮಗಳು ಎಷ್ಟು ಮತ್ತು ಸದರಿ ಕಂದಾಯ ಗ್ರಾಮಗಳಿಗೆ ಮಂಜೂರಾದ ಗ್ರಾಮ ಆಡಳಿತ ಅಧಿಕಾರಿಗಳ (VAO) ಹುದ್ದೆಗಳು ಎಷ್ಟು ; ಭರ್ತಿಯಾದ ಮತ್ತು ಪ್ರಸ್ತುತ ಖಾಲಿ ಇರುವ ಹುದ್ದೆಗಳು ಎಷ್ಟು ; (ಜಿಲ್ಲಾವಾರು ಮಾಹಿತಿ ನೀಡುವುದು)

(ಆ) ರಾಜ್ಯದ ಒಟ್ಟು ಎಷ್ಟು ಕಂದಾಯ ಗ್ರಾಮಗಳಲ್ಲಿ ಗ್ರಾಮಾಡಳಿತಾಧಿಕಾರಿ (VAO) ಕಛೇರಿಗಳಿವೆ ; ಅವುಗಳಲ್ಲಿ ಎಷ್ಟು ಕಛೇರಿಗಳಿಗೆ ಸ್ವಂತ ಕಟ್ಟಡಗಳಿವೆ ಮತ್ತು ಎಷ್ಟು ಕಛೇರಿಗಳು ಬಾಡಿಗೆ ಕಟ್ಟಡಗಳಲ್ಲಿ ಕಾರ್ಯನಿರ್ವಹಿಸುತ್ತಿವೆ ; ಮತ್ತು ಗ್ರಾಮ ಆಡಳಿತ ಅಧಿಕಾರಿ ಕಛೇರಿಗಳು ಇಲ್ಲದ ಗ್ರಾಮಗಳು ಎಷ್ಟು : ಕಛೇರಿ ನಿರ್ಮಿಸಲು ನಿವೇಶನ ಕಾಯ್ದಿರಿಸಿದ ಒಟ್ಟು ಗ್ರಾಮಗಳೆಷ್ಟು ; (ಜಿಲ್ಲಾವಾರು ವಿವರವನ್ನು ನೀಡುವುದು)

(ಇ) ಶೌಚಾಲಯ, ಕುಡಿಯುವ ನೀರು, ವಿದ್ಯುತ್, ಅಂತರ್ಜಾಲ (Internet) ಸಂಪರ್ಕ ಸೇರಿದಂತೆ ಮೂಲಭೂತ ಸೌಕರ್ಯಗಳಿಲ್ಲದ ಕಛೇರಿಗಳ ಸಂಖ್ಯೆ ಎಷ್ಟು; ಗ್ರಾಮ ಆಡಳಿತ ಅಧಿಕಾರಿಗಳ ಕಛೇರಿಗೆ ವಿದ್ಯುತ್ ಬಿಲ್ ಮತ್ತು ಅಂತರ್ಜಾಲ ಸಂಪರ್ಕ ವೆಚ್ಚವನ್ನು ಭರಿಸಲು ಸರ್ಕಾರ ಅನುದಾನ ಬಿಡುಗಡೆ ಮಾಡುತ್ತಿದೆಯೇ ;

(ಈ) ಮಾಡುತ್ತಿದ್ದಲ್ಲಿ, ಯಾವ ಖಾತೆಗೆ ಅನುದಾನ ಜಮೆ ಮಾಡಲಾಗುತ್ತದೆ ; ಇತ್ತೀಚಿನ ಮೂರು ವರ್ಷಗಳಲ್ಲಿ ಸದರಿ ಉದ್ದೇಶಕ್ಕೆ ಬಿಡುಗಡೆ ಮಾಡಿದ ಅನುದಾನದ ಮೊತ್ತವೆಷ್ಟು ; (ಜಿಲ್ಲಾವಾರು ಮಾಹಿತಿ ನೀಡುವುದು)

(ಉ) ಎಲ್ಲಾ ಗ್ರಾಮ ಆಡಳಿತಾಧಿಕಾರಿ ಕಛೇರಿಗಳಿಗೆ ಸ್ವಂತ ಕಟ್ಟಡ ನಿರ್ಮಾಣ ಮಾಡಲು ಸರ್ಕಾರ ಯಾವುದಾದರೂ ವಿಶೇಷ ಯೋಜನೆ ರೂಪಿಸಿರುವುದೇ ; ರೂಪಿಸಿದ್ದಲ್ಲಿ, ಇದಕ್ಕೆ ಮೀಸಲಿರಿಸಿದ ಅನುದಾನದ ಮೊತ್ತ ಎಷ್ಟು ?

## ಶಾಸಕರ ಭವನದಲ್ಲಿ ಕೈಗೊಂಡಿರುವ ಕಾಮಗಾರಿಗಳ ಕುರಿತು

**ಶ್ರೀ ಕೇಶವ ಪ್ರಸಾದ್ ಎಸ್.(ವಿಧಾನಸಭೆಯಿಂದ ಚುನಾಯಿತರಾದವರು) :–**

೧೮೦೧ (೨೦೬೮) ಮಾನ್ಯ ಲೋಕೋಪಯೋಗಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಜೂನ್ ೨೦೨೩ ರಿಂದ ಈವರೆಗೆ ಬೆಂಗಳೂರಿನ ಶಾಸಕರ ಭವನದಲ್ಲಿ (LH) ಕೈಗೊಂಡಿರುವ ಒಟ್ಟು ಸಿವಿಲ್ (Civil), ಎಲೆಕ್ಟ್ರಿಕಲ್ (Electrical), ಪ್ಲಂಬಿಂಗ್ (Plumbing) ಮತ್ತು ಇತರ ನವೀಕರಣ ಕಾಮಗಾರಿಗಳ ವಿವರ ಹಾಗೂ ಇದಕ್ಕಾಗಿ ವೆಚ್ಚ ಮಾಡಲಾದ ಒಟ್ಟು ಮೊತ್ತ ಎಷ್ಟು ; (ಕಾಮಗಾರಿವಾರು ಮತ್ತು ಕೊಠಡಿವಾರು ಸಂಪೂರ್ಣ ಮಾಹಿತಿ ನೀಡುವುದು)

(ಆ) ಅಲ್ಪಾವಧಿಯಲ್ಲಿಯೇ ಪದೇ ಪದೇ ನವೀಕರಣ ಕಾಮಗಾರಿಗಳನ್ನು ಕೈಗೊಳ್ಳುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಹಾಗಿದ್ದಲ್ಲಿ, ಈ ಕಾಮಗಾರಿಗಳ ಗುಣಮಟ್ಟದ ಬಗ್ಗೆ ನಡೆಸಲಾದ ತಪಾಸಣೆ ವರದಿ ಎಲ್ಲಿದೆ ;

(ಇ) ರಾಜ್ಯ ಸರ್ಕಾರವು ಎಲ್ಲಾ ಸರ್ಕಾರಿ ಕಟ್ಟಡಗಳಲ್ಲಿ ಕಡ್ಡಾಯವಾಗಿ ಸೌರ ಮೇಲ್ಛಾವಣಿ (Solar Rooftop) ಅಳವಡಿಸಬೇಕೆಂದು ಆದೇಶ ಹೊರಡಿಸಿದ್ದರೂ, ಶಾಸಕರ ಭವನದಲ್ಲಿ ಇದುವರೆಗೆ ಸೌರಶಕ್ತಿ ಘಟಕಗಳನ್ನು ಅಳವಡಿಸದಿರಲು ಕಾರಣಗಳೇನು ;

(ಈ) ಶಾಸಕರ ಭವನದ ಮಾಸಿಕ ವಿದ್ಯುತ್ ಬಿಲ್ ಸರಾಸರಿ ಎಷ್ಟು ಬರುತ್ತದೆ ; ಸೌರಶಕ್ತಿ ಅಳವಡಿಕೆಯಿಂದ ಸರ್ಕಾರಕ್ಕೆ ಆಗಬಹುದಾದ ಉಳಿತಾಯದ ಬಗ್ಗೆ ಇಲಾಖೆಯು ಯಾವುದಾದರೂ ಸಮೀಕ್ಷೆ ನಡೆಸಿದೆಯೇ ;

(ಉ) ಯಾವ ಕಾಲಮಿತಿಯೊಳಗ ಶಾಸಕರ ಭವನವನ್ನು ಸಂಪೂರ್ಣವಾಗಿ ಸೌರಶಕ್ತಿಚಾಲಿತ ಕಟ್ಟಡವನ್ನಾಗಿ (Solar-powered building) ಪರಿವರ್ತಿಸಲು ಸರ್ಕಾರ ಯೋಜಿಸಿದೆಯೇ ?

## ಬೀದರ್ ಸಾರಿಗೆ ವಿಭಾಗದ ಬಸ್‌ಗಳ ಕಾರ್ಯಚರಣೆ, ನಿರ್ವಹಣೆ ಹಾಗೂ ಆಧುನೀಕರಣ ಕುರಿತು

**ಡಾ॥ ಎಂ.ಜಿ. ಮುಳೆ (ವಿಧಾನಸಭೆಯಿಂದ ಚುನಾಯಿತರಾದವರು) :–**

೧೮೦೨ (೨೦೫೪) ಮಾನ್ಯ ಸಾರಿಗೆ ಮತ್ತು ಮುಜರಾಯಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) Kalyana Karnataka Road Transport Corporation (KKRTC) ಯ ಬೀದರ್ ವಿಭಾಗದಲ್ಲಿ ಪ್ರಸ್ತುತ ಕಾರ್ಯನಿರ್ವಹಿಸುತ್ತಿರುವ ಒಟ್ಟು ಬಸ್‌ಗಳ ಸಂಖ್ಯೆ ಎಷ್ಟು; ಇವುಗಳಲ್ಲಿ ಗ್ರಾಮೀಣ ಮಾರ್ಗಗಳಿಗೆ ಸಂಚರಿಸುವ ಬಸ್‌ಗಳು ಎಷ್ಟು ಮತ್ತು ನಗರ/ಅಂತರ ಜಿಲ್ಲಾ ಮಾರ್ಗಗಳಿಗೆ ಸಂಚರಿಸುವ ಬಸ್‌ಗಳ ಸಂಖ್ಯೆ ಎಷ್ಟು ; (ವರ್ಗವಾರು ವಿವರ ನೀಡುವುದು)

(ಆ) ಬೀದರ್ ವಿಭಾಗದ ಬಸ್‌ಗಳಿಗೆ ಪ್ರತಿ ಲೀಟರ್ ಡೀಸೆಲ್‌ಗೆ ದೊರೆಯುತ್ತಿರುವ ಸರಾಸರಿ ಕಿಲೋಮೀಟರ್ (KMPL) ಪ್ರಮಾಣ ಎಷ್ಟು; ಇಂಧನ ದಕ್ಷತೆ ಹೆಚ್ಚಿಸಲು, ಇಂಧನ ಸೋರಿಕೆ ತಡೆಯಲು ಮತ್ತು ಡ್ರೈವರ್‌ಗಳ ಆರ್ಥಿಕ ಚಾಲನೆ (Fuel-efficient driving) ತರಬೇತಿಗಾಗಿ ಕೈಗೊಂಡಿರುವ ತಾಂತ್ರಿಕ ಕ್ರಮಗಳೇನು ;

(ಇ) ಬೀದರ್ ವಿಭಾಗದಲ್ಲಿ ನಿಗದಿತ ಕಿಲೋಮಿಟರ್ ಮೀರಿಸಿ ಸಂಚರಿಸಿರುವ ಅಥವಾ ಹಳೆಯದಾಗಿರುವ (Over-aged) ಬಸ್‌ಗಳ ಸಂಖ್ಯೆ ಎಷ್ಟು ;

(ಈ) ಕಳೆದ ಎರಡು ವರ್ಷಗಳಲ್ಲಿ ಎಷ್ಟು ಹಳೆಯ ಬಸ್‌ಗಳನ್ನು ಸ್ಥಗಿತಗೊಳಿಸಲಾಗಿದೆ ಅವುಗಳ ಬದಲಿಗೆ ಎಷ್ಟು ಹೊಸ ಬಸ್‌ಗಳನ್ನು ಮಂಜೂರು ಮಾಡಿ ರಸ್ತೆಗಿಳಿಸಲಾಗಿದೆ ; (ವರ್ಷವಾರು ಮಾಹಿತಿ ನೀಡುವುದು)

(ಉ) ಜಿಲ್ಲೆಯ ಸಾರಿಗೆ ವರ್ಕ್ ಶಾಪ್‌ಗಳಲ್ಲಿ ಬಸ್‌ಗಳ ಸಮರ್ಪಕ ನಿರ್ವಹಣೆಗೆ ಅಗತ್ಯವಿರುವ ಆಧುನಿಕ ಯಂತ್ರೋಪಕರಣಗಳು, ಲಿಫ್ಟ್‌ಗಳು, ಡಯಾಗ್ನೋಸ್ಟಿಕ್ ಉಪಕರಣಗಳು ಹಾಗೂ ಬಿಡಿಭಾಗಗಳ ಕೊರತೆ ಇರುವುದಾಗಿ ವರದಿಯಾಗಿದೆಯೇ; ಕಳೆದ ಒಂದು ವರ್ಷದಲ್ಲಿ ವರ್ಕ್‌ಶಾಪ್ ಸುಧಾರಣೆ ಮತ್ತು ನಿರ್ವಹಣಾ ಸೌಲಭ್ಯಗಳಿಗಾಗಿ ಮೀಸಲಾದ ಮತ್ತು ಬಿಡುಗಡೆಯಾದ ಅನುದಾನ ಎಷ್ಟು ;

(ಊ) ಪರಿಸರ ಮಾಲಿನ್ಯ ತಡೆಗಟ್ಟಲು ಹಾಗೂ ಸಾರಿಗೆ ವೆಚ್ಚ ಕಡಿಮೆ ಮಾಡಲು ಬೀದರ್ ಜಿಲ್ಲೆಯಲ್ಲಿ ಎಲೆಕ್ಟ್ರಿಕ್ ಬಸ್‌ಗಳನ್ನು (Eletric Buses) ಪ್ರಾಯೋಗಿಕವಾಗಿ ಅಥವಾ ಹಂತ ಹಂತವಾಗಿ ಪರಿಚಯಿಸುವ ಕುರಿತು ಸರ್ಕಾರದ ಮುಂದೆ ಪ್ರಸ್ತಾವನೆ ಇದೆಯೇ; ಇದ್ದಲ್ಲಿ, ಬೀದರ್ ವಿಭಾಗಕ್ಕೆ ಎಷ್ಟು ಎಲೆಕ್ಟ್ರಿಕ್ ಬಸ್‌ಗಳನ್ನು ಹಂಚಿಕೆ ಮಾಡಲು ನಿರ್ಧರಿಸಲಾಗಿದೆ; ಅವುಗಳನ್ನು ಚಾರ್ಜಿಂಗ್ ಮೂಲಸೌಕರ್ಯ ಸಹಿತ ಯಾವ ಅವಧಿಯಲ್ಲಿ ಜಾರಿಗೆ ತರಲಾಗುತ್ತದೆ ?

# ಬೀದರ್ ಜಿಲ್ಲೆಯಲ್ಲಿನ ವಿದ್ಯಾರ್ಥಿಗಳ ಶೈಕ್ಷಣಿಕ ಸಾರಿಗೆ ಸೌಲಭ್ಯ ಮತ್ತು ಬಸ್‌ಗಳ ಆಧುನೀಕರಣ ಕುರಿತು

**ಡಾ॥ ಎಂ.ಜಿ. ಮುಳೆ (ವಿಧಾನಸಭೆಯಿಂದ ಚುನಾಯಿತರಾದವರು) :–**

೧೮೦೩ (೨೦೫೫) ಮಾನ್ಯ ಸಾರಿಗೆ ಮತ್ತು ಮುಜರಾಯಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಬೀದರ್ ಜಿಲ್ಲೆಯ ದೂರದ ಗ್ರಾಮೀಣ ಪ್ರದೇಶಗಳಿಂದ ತಾಲ್ಲೂಕು ಕೇಂದ್ರ ಹಾಗೂ ಜಿಲ್ಲಾ ಕೇಂದ್ರಗಳಲ್ಲಿನ ಕಾಲೇಜುಗಳಿಗೆ ನೇರ ಬಸ್ ಸಂಪರ್ಕ ಹೊಂದಿರುವ ಗ್ರಾಮಗಳ ಸಂಖ್ಯೆ ಎಷ್ಟು; ಬಸ್ ಸೌಲಭ್ಯವಿಲ್ಲದ ಗ್ರಾಮಗಳಿಂದ ವಿದ್ಯಾರ್ಥಿಗಳು ಶಿಕ್ಷಣದಿಂದ ವಂಚಿತರಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; (ತಾಲ್ಲೂಕುವಾರು ವಿವರ ನೀಡುವುದು)

(ಆ) ಜಿಲ್ಲೆಯಲ್ಲಿನ ಶಾಲೆ–ಕಾಲೇಜು ವಿದ್ಯಾರ್ಥಿಗಳು ಎದುರಿಸುತ್ತಿರುವ ಸಂಚಾರ ಸಮಸ್ಯೆಗಳು, ಬಸ್‌ಗಳ ಕೊರತೆ ಹಾಗೂ ಬಸ್‌ಪಾಸ್ ವಿತರಣೆಯಲ್ಲಿ ಉಂಟಾಗುತ್ತಿರುವ ವಿಳಂಬ ಕುರಿತು ಕಳೆದ ಒಂದು ವರ್ಷದಲ್ಲಿ ಸಾರಿಗೆ ಇಲಾಖೆ ಯಾವುದೇ ಅಧಿಕೃತ ಕ್ಷೇತ್ರ ಸಮೀಕ್ಷೆ (Field Survey) ನಡೆಸಿದೆಯೇ; ನಡೆಸಿದ್ದರೆ, ಕಂಡುಬಂದ ಪ್ರಮುಖ ವಿಷಯಗಳೇನು ;

(ಇ) ವಿದ್ಯಾರ್ಥಿಗಳ ಅನುಕೂಲಕ್ಕಾಗಿ ಶಾಲೆ–ಕಾಲೇಜು ಆರಂಭ ಹಾಗೂ ಮುಕ್ತಾಯ ಸಮಯಗಳಲ್ಲಿ ಹೆಚ್ಚುವರಿ ಟ್ರಿಪ್‌ಗಳನ್ನು (Additional Trips) ಪ್ರಾರಂಭಿಸುವ ಅಥವಾ ವಿಶೇಷ ವಿದ್ಯಾರ್ಥಿ ಬಸ್‌ಗಳನ್ನು ಸಂಚರಿಸುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ ;

(ಈ) ಬೀದರ್ ವಿಭಾಗದಲ್ಲಿ ಕಾರ್ಯನಿರ್ವಹಿಸುತ್ತಿರುವ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ (KSRTC) ಬಸ್‌ಗಳಲ್ಲಿ ಅತ್ಯಂತ ಹಳೆಯದು ಹಾಗೂ ಪದೇ ಪದೇ ತಾಂತ್ರಿಕ ದೋಷಕ್ಕೀಡಾಗುತ್ತಿರುವ ಬಸ್‌ಗಳ ಸಂಖ್ಯೆ ಎಷ್ಟು ; ಇವುಗಳ ಬದಲಿಗೆ ಈ ಆರ್ಥಿಕ ವರ್ಷದಲ್ಲಿ ಎಷ್ಟು ಹೊಸ ಹಾಗೂ ಸುಸಜ್ಜಿತ ಬಸ್‌ಗಳನ್ನು ಜಿಲ್ಲೆಗೆ ಮಂಜೂರು ಮಾಡಲಾಗಿದೆ ;

(ಉ) ವಿದ್ಯಾರ್ಥಿನಿಯರ ಸುರಕ್ಷತೆ ಮತ್ತು ಬಸ್‌ಗಳ ಸಂಚಾರದ ನೈಜ ಸಮಯದ ಮಾಹಿತಿಗಾಗಿ ಜಿಲ್ಲೆಯ ಎಲ್ಲಾ ಬಸ್‌ಗಳಲ್ಲಿ ಸಿಸಿಟಿವಿ (CCTV) ಮತ್ತು ಜಿಪಿಎಸ್ (GPS) ಅಳವಡಿಕೆ ಪ್ರಕ್ರಿಯೆ ಪೂರ್ಣಗೊಂಡಿದೆಯೇ ; ಬಾಕಿ ಇದ್ದಲ್ಲಿ, ಅದನ್ನು ಪೂರ್ಣಗೊಳಿಸಲು ನಿಗದಿಪಡಿಸಿರುವ ಕಾಲಮಿತಿ ಏನು ?

## ಬೀದರ್ ಜಿಲ್ಲೆಯಲ್ಲಿನ ಭೂದಾಖಲೆಗಳ ನಿರ್ವಹಣೆ, ಪೋಡಿ ಪ್ರಕರಣಗಳು ಮತ್ತು ತಾಂತ್ರಿಕ ಸೌಲಭ್ಯಗಳ ಕುರಿತು

**ಡಾ॥ ಎಂ.ಜಿ. ಮುಳೆ (ವಿಧಾನಸಭೆಯಿಂದ ಚುನಾಯಿತರಾದವರು) :–**

೧೮೦೪ (೨೦೫೬) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಬೀದರ್ ಜಿಲ್ಲೆಯಲ್ಲಿನ ಭೂ ದಾಖಲೆಗಳ ಡಿಜಿಟಲೀಕರಣಕ್ಕಾಗಿ ಜಾರಿಗೆ ತರಲಾಗಿರುವ Bhoomi (e-Bhoomi) ಯೋಜನೆಯಡಿ ಎಲ್ಲಾ ಭೂ ದಾಖಲೆಗಳ ಡಿಜಿಟಲೀಕರಣ ಮತ್ತು ನವೀಕರಣ ಪ್ರಕ್ರಿಯೆ ಸಂಪೂರ್ಣಗೊಂಡಿದೆಯೇ; ಬಾಕಿ ಇದ್ದಲ್ಲಿ, ಯಾವ ಅವಧಿಯೊಳಗೆ ಪೂರ್ಣಗೊಳಿಸಲಾಗುವುದು ; (ತಾಲ್ಲೂಕುವಾರು ವಿವರ ನೀಡುವುದು)

(ಆ) ಜಿಲ್ಲೆಯಲ್ಲಿನ ಭೂಮಾಲೀಕತ್ವ ವಿಭಜನೆಗೆ ಸಂಬಂಧಿಸಿದ ಪೊಡಾ/ ಪೋಡಿ (Phodi/Partition) ಪ್ರಕರಣಗಳಲ್ಲಿ ವಿಲೇವಾರಿಯಾಗದೆ ಬಾಕಿ ಇರುವ ಒಟ್ಟು ಅರ್ಜಿಗಳ ಸಂಖ್ಯೆ ಎಷ್ಟು; ಇವುಗಳಲ್ಲಿ ಎರಡು ವರ್ಷಗಳಿಗಿಂತ ಹಳೆಯದಾದ ಅರ್ಜಿಗಳ ಸಂಖ್ಯೆ ಎಷ್ಟು ; (ತಾಲ್ಲೂಕುವಾರು ಮಾಹಿತಿ ನೀಡುವುದು)

(ಇ) ರೈತರು ಕಛೇರಿಗಳಿಗೆ ಅಲೆಯದೆ ಆನ್‌ಲೈನ್ ಮೂಲಕವೇ ಕಂದಾಯ ದಾಖಲೆಗಳನ್ನು ಪಡೆಯಲು ಅನುಕೂಲವಾಗುವ ವ್ಯವಸ್ಥೆ ಜಿಲ್ಲೆಯ ಎಲ್ಲಾ ಗ್ರಾಮ ಪಂಚಾಯಿತಿ ಕೇಂದ್ರಗಳು ಹಾಗೂ ಬಾಪೂಜಿ ಸೇವಾ ಕೇಂದ್ರಗಳಲ್ಲಿ ಸಂಪೂರ್ಣವಾಗಿ ಕಾರ್ಯ ನಿರ್ವಹಿಸುತ್ತಿದೆಯೇ ; ಇದರ ಬಳಕೆ ಪ್ರಮಾಣ ಎಷ್ಟು ;

(ಈ) ಸದರಿ ಜಿಲ್ಲೆಯಲ್ಲಿ 'ಕಂದಾಯ ಅದಾಲತ್' (Revenue Adalat) ಅಥವಾ ವಿಶೇಷ ಶಿಬಿರಗಳನ್ನು ಆಯೋಜಿಸಲಾಗಿದೆಯೇ; ಕಳೆದ ಒಂದು ವರ್ಷದಲ್ಲಿ ಈ ಮೂಲಕ ಎಷ್ಟು ಪ್ರಕರಣಗಳನ್ನು ವಿಲೇವಾರಿ ಮಾಡಲಾಗಿದೆ ;

(ಉ) ಜಿಲ್ಲೆಯ ತಾಲ್ಲೂಕು ಕಛೇರಿಗಳು ಮತ್ತು ಉಪ-ನೋಂದಣಾಧಿಕಾರಿಗಳ ಕಛೇರಿಗಳಲ್ಲಿ ಹಲವು ಹುದ್ದೆಗಳು ಖಾಲಿ ಇರುವುದರಿಂದ ಸಾರ್ವಜನಿಕ ಕೆಲಸಗಳು ವಿಳಂಬವಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಈ ಹುದ್ದೆಗಳನ್ನು ಭರ್ತಿ ಮಾಡಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು ?

# ಬೀದರ್ ಜಿಲ್ಲೆಯಲ್ಲಿನ ರಸ್ತೆ ಕಾಮಗಾರಿಗಳ ಗುಣಮಟ್ಟ ಮತ್ತು ಗುತ್ತಿಗೆದಾರರ ಉತ್ತರದಾಯಿತ್ವ ಕುರಿತು

**ಡಾ॥ ಎಂ.ಜಿ. ಮುಳೆ (ವಿಧಾನಸಭೆಯಿಂದ ಚುನಾಯಿತರಾದವರು) :–**

೧೮೦೫ (೨೦೫೭) ಮಾನ್ಯ ಲೋಕೋಪಯೋಗಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಕಳೆದ ಮೂರು ವರ್ಷಗಳಲ್ಲಿ ಬೀದರ್ ಜಿಲ್ಲೆಯಲ್ಲಿನ ಲೋಕೋಪಯೋಗಿ ಇಲಾಖೆ (PWD) ಹಾಗೂ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ (RDPR) ವತಿಯಿಂದ ನಿರ್ಮಾಣಗೊಂಡ ಅಥವಾ ಅಭಿವೃದ್ಧಿಪಡಿಸಲಾದ ಒಟ್ಟು ರಸ್ತೆ ಕಾಮಗಾರಿಗಳ ಸಂಖ್ಯೆ ಹಾಗೂ ಒಟ್ಟು ಉದ್ದ (ಕಿ.ಮೀ) ಎಷ್ಟು ; (ವರ್ಷವಾರು ಮತ್ತು ತಾಲ್ಲೂಕುವಾರು ವಿವರ ನೀಡುವುದು)

(ಆ) ಮೇಲ್ಕಂಡ ರಸ್ತೆ ಕಾಮಗಾರಿಗಳು ಪೂರ್ಣಗೊಂಡ ನಂತರ ನಿಯಮಾನುಸಾರ ಮೂರನೇ ವ್ಯಕ್ತಿ ಸಂಸ್ಥೆಯಿಂದ (Third Party Inspection) ಗುಣಮಟ್ಟ ಪರಿಶೀಲನೆ ನಡೆಸಲಾಗಿದೆಯೇ; ಗುಣಮಟ್ಟದಲ್ಲಿ ಲೋಪ ಕಂಡುಬಂದ ಪ್ರಕರಣಗಳ ಸಂಖ್ಯೆ ಎಷ್ಟು; ಅಂತಹ ಪ್ರಕರಣಗಳಲ್ಲಿ ಕೈಗೊಂಡ ಕ್ರಮಗಳ ವಿವರವೇನು ;

(ಇ) ಕಳೆದ ಎರಡು ಮಳೆಗಾಲಗಳ ನಂತರ ಜಿಲ್ಲೆಯಲ್ಲಿನ ಹಾನಿಗೊಳಗಾದ ಹಾಗೂ ಗುಂಡಿಬಿದ್ದ ರಸ್ತೆಗಳ ಪಟ್ಟಿಯು ಸರ್ಕಾರದ ಬಳಿಯಿದೆಯೇ; ಗ್ಯಾರಂಟಿ ಅವಧಿ (Defect Liability Period) ಮುಗಿಯುವ ಮೊದಲೇ ಹಾನಿಗೊಳಗಾದ ರಸ್ತೆ ಕಾಮಗಾರಿಗಳ ಸಂಖ್ಯೆ ಎಷ್ಟು ;

(ಈ) ಕಳಪೆ ಕಾಮಗಾರಿ ಅಥವಾ ನಿಗದಿತ ಅವಧಿಯಲ್ಲಿ ಕೆಲಸ ಪೂರ್ಣಗೊಳಿಸದ ಕಾರಣಕ್ಕಾಗಿ ಬೀದರ್ ಜಿಲ್ಲೆಯ ಎಷ್ಟು ಗುತ್ತಿಗೆದಾರರ ವಿರುದ್ಧ ದಂಡಾತ್ಮಕ ಕ್ರಮ ಕೈಗೊಳ್ಳಲಾಗಿದೆ ; ಎಷ್ಟು ಗುತ್ತಿಗೆದಾರರನ್ನು ಕಪ್ಪುಪಟ್ಟಿಗೆ (Blacklist) ಸೇರಿಸಲಾಗಿದೆ ;

(ಉ) ರಸ್ತೆಗಳನ್ನು ನಿರಂತರವಾಗಿ ಸುಸ್ಥಿತಿಯಲ್ಲಿ ಕಾಯ್ದುಕೊಳ್ಳಲು (Maintenance) ಪ್ರತ್ಯೇಕ ವಾರ್ಷಿಕ ಅನುದಾನ ಮೀಸಲಿಡಲಾಗಿದೆಯೇ; ಇದ್ದಲ್ಲಿ, ಕಳೆದ ಆರ್ಥಿಕ ವರ್ಷದಲ್ಲಿ ಬೀದರ್ ಜಿಲ್ಲೆಯ ರಸ್ತೆ ನಿರ್ವಹಣೆಗೆ ಬಿಡುಗಡೆ ಮಾಡಲಾದ ಹಾಗೂ ಬಳಸಲಾದ ಒಟ್ಟು ಮೊತ್ತ ಎಷ್ಟು ?

## ರೈತರ ಆತ್ಮಹತ್ಯೆ, ಬಣವೆ ನಷ್ಟ, ಹಾವು ಕಡಿತ ಪ್ರಕರಣಗಳಲ್ಲಿ ಪರಿಹಾರ ಪಾವತಿ ಕುರಿತು

**ಶ್ರೀ ಮಧು ಜಿ. ಮಾದೇಗೌಡ (ಪದವೀಧರರ ಕ್ಷೇತ್ರ) :–**

೧೮೦೭ (೨೦೦೮) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದಲ್ಲಿ ರೈತರ ಆತ್ಮಹತ್ಯೆ, ಬಣವೆ ನಷ್ಟ, ಹಾವು ಕಡಿತದಿಂದ ಆಕಸ್ಮಿಕ ಮರಣ ಪ್ರಕರಣಗಳಿಗೆ ಸಂಬಂಧಿಸಿದಂತೆ ಆಯಾಯ ಆರ್ಥಿಕ ವರ್ಷದಲ್ಲೇ ಪರಿಹಾರ ಪಾವತಿಯಾಗದೇ ಈವರೆವಿಗೂ ಬಾಕಿ ಉಳಿದಿರುವ ಪ್ರಕರಣಗಳ ಸಂಖ್ಯೆ ಎಷ್ಟು ; (ಜಿಲ್ಲಾವಾರು, ಪ್ರಕರಣವಾರು [ರೈತರ ಆತ್ಮಹತ್ಯೆ, ಬಣವೆ ನಷ್ಟ, ಆಕಸ್ಮಿಕ ಮರಣ] ಸಂಖ್ಯೆ, ವರ್ಷ, ಮೊತ್ತದ ವಿವರ ನೀಡುವುದು)

(ಆ) ಆಯಾಯ ಆರ್ಥಿಕ ವರ್ಷದಲ್ಲೇ ಪರಿಹಾರಗಳನ್ನು ಇತ್ಯರ್ಥಪಡಿಸಿಕೊಳ್ಳಬೇಕೆಂಬ ಆದೇಶದಿಂದ ಪ್ರಕರಣಗಳನ್ನು ಸಕಾಲದಲ್ಲಿ ಇತ್ಯರ್ಥಪಡಿಸಲು ತೊಂದರೆ ಆಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; (ವಿವರವಾದ ಮಾಹಿತಿ ನೀಡುವುದು)

(ಇ) ಈ ಆದೇಶದ ಪರಿಣಾಮ ಮಂಡ್ಯ ಜಿಲ್ಲೆಯಲ್ಲಿ ೨೦೨೧–೨೨, ೨೦೨೨–೨೩ ಮತ್ತು ೨೦೨೩–೨೪ ನೇ ಸಾಲುಗಳಲ್ಲಿ ಘಟಿಸಿದ ಮೇಲ್ಕಂಡ ೧೪ ಪ್ರಕರಣಗಳಲ್ಲಿ ಈವರೆವಿಗೂ ಪರಿಹಾರ ಪಾವತಿಯಾಗದೇ ತೊಂದರೆ ಆಗಿರುತ್ತದೆ ; ಆಯಾಯ ವರ್ಷದಲ್ಲೇ ಇತ್ಯರ್ಥಪಡಿಸಿಕೊಳ್ಳಬೇಕೆಂಬ ಆದೇಶ ಸ್ವೀಕೃತವಾಗುವ ಮೊದಲೇ ಡಿ.ಬಿ.ಟಿ. ತಂತ್ರಾಂಶದಲ್ಲೂ ನಮೂದಿಸಲಾಗಿದೆ. ಆದ್ಯಾಗೂ, ಇತ್ಯರ್ಥವಾಗಿಲ್ಲ. ಇದೇ ಪರಿಸ್ಥಿತಿ ರಾಜ್ಯದ ಇತರೆ ಜಿಲ್ಲೆಗಳಲ್ಲೂ ಇದೆ, ಬಾಕಿ ಉಳಿದಿರುವ ಎಲ್ಲಾ ಪ್ರಕರಣಗಳನ್ನು ಕಾಲವಿಳಂಬವಿಲ್ಲದೇ ಇತ್ಯರ್ಥಗೊಳಿಸಲು ಸರ್ಕಾರದ ಕ್ರಮಗಳೇನು ;

(ಈ) ಕೆಲವು ಕಾರಣಗಳಿಂದ ಆಯಾಯ ವರ್ಷದಲ್ಲಿ ಪರಿಹಾರವನ್ನು ಪಾವತಿಸಲು ಸಾಧ್ಯವಾಗದೆ ಬಾಕಿ ಉಳಿದಿರುವ ಎಲ್ಲಾ ಪ್ರಕರಣಗಳನ್ನು 'ವಿಶೇಷ ಪ್ರಕರಣ'ಗಳೆಂದು ಪರಿಗಣಿಸಿ ಒಂದು ಬಾರಿಯ ಇತ್ಯರ್ಥಪಡಿಸುವ ಷರತ್ತಿನೊಂದಿಗೆ ಮುಕ್ತಾಯಗೊಳಿಸಲು ಸರ್ಕಾರದ ಕ್ರಮಗಳೇನು ;

(ಉ) ರಾಜ್ಯದಲ್ಲಿ ಕಳೆದ ಮೂರು ವರ್ಷಗಳಲ್ಲಿ ರೈತರ ಆತ್ಮಹತ್ಯೆ, ಬಣವೆ ನಷ್ಟ, ಹಾವು ಕಡಿತದಿಂದ ಆಕಸ್ಮಿಕ ಸಾವು ಪ್ರಕರಣಗಳಿಗೆ ಸಂಬಂಧಿಸಿದಂತೆ ದಾಖಲಾದ ಪ್ರಕರಣಗಳ ಸಂಖ್ಯೆ: ಪಾವತಿಸಲಾದ ಪರಿಹಾರ ಮೊತ್ತ, ಪಾವತಿಸಲು ಬಾಕಿಯಿರುವ ಮೊತ್ತ ಎಷ್ಟು? (ಜಿಲ್ಲಾವಾರು ಮಾಹಿತಿ ನೀಡುವುದು)

## ಕುರಿ/ಮೇಕೆ ತಳಿ ಸಂವರ್ಧನಾ ಮತ್ತು ತರಬೇತಿ ಕೇಂದ್ರಗಳ ಕುರಿತು

**ಶ್ರೀ ಮಧು ಜಿ. ಮಾದೇಗೌಡ (ಪದವೀಧರರ ಕ್ಷೇತ್ರ) :–**

೧೮೦೭ (೨೦೦೯) ಮಾನ್ಯ ಪಶುಸಂಗೋಪನೆ ಮತ್ತು ರೇಷ್ಮೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಜಾನುವಾರು ಗಣತಿ ಪ್ರಕಾರ, ರಾಜ್ಯದಲ್ಲಿರುವ ಕುರಿಗಳು ಮತ್ತು ಮೇಕೆಗಳ ಸಂಖ್ಯೆ ಎಷ್ಟು; ಗಣತಿ ಕಾರ್ಯದಲ್ಲಿ ಗುರುತಿಸಿದಂತೆ ಕಂಡುಬಂದಿರುವ ಕುರಿ/ಮೇಕೆಗಳ ವಿಶಿಷ್ಟ ತಳಿಗಳು ಯಾವುವು ; (ಜಿಲ್ಲಾವಾರು, ಕುರಿ/ ಮೇಕೆ ತಳಿಗಳ ಹೆಸರಿನೊಂದಿಗೆ ಮಾಹಿತಿ ನೀಡುವುದು)

(ಆ) ರಾಜ್ಯದಲ್ಲಿರುವ ಕುರಿ/ ಮೇಕೆ ತಳಿ ಸಂವರ್ಧನಾ ಮತ್ತು ತರಬೇತಿ ಕೇಂದ್ರಗಳ ಸಂಖ್ಯೆ ಎಷ್ಟು ; (ಕೇಂದ್ರ ಹೆಸರು, ಕ್ಷೇತ್ರದ ವಿಸ್ತೀರ್ಣ, ಕುರಿ/ ಮೇಕೆ ತಳಿಗಳು, ಕೇಂದ್ರದ ವ್ಯಾಪ್ತಿಯಲ್ಲಿರುವ ಜಿಲ್ಲೆಗಳ ಮಾಹಿತಿ ನೀಡುವುದು)

(ಇ) ಕೇಂದ್ರಗಳಲ್ಲಿ ಉತ್ಪಾದಿಸಲಾಗುತ್ತಿರುವ ವಿವಿಧ ತಳಿಯ ಟಗರು/ ಹೋತಗಳ ಮಾರಾಟ ದರವನ್ನು ವಯೋಮಿತಿಗೆ ಅನುಗುಣವಾಗಿ ನಿಗದಿಪಡಿಸಲಾಗುತ್ತದೆಯೇ ; ಹಾಗಿದ್ದಲ್ಲಿ, ಪ್ರಸ್ತುತ ಇರುವ ದರ ಎಷ್ಟು ; (ಆದೇಶದ ಪ್ರತಿ ನೀಡುವುದು)

(ಈ) ಕರ್ನಾಟಕ ಕುರಿ ಮತ್ತು ಉಣ್ಣೆ ಅಭಿವೃದ್ಧಿ ನಿಗಮ ನಿ. ಅಧೀನದಲ್ಲಿರುವ ಕುರಿ ಸಂವರ್ಧನಾ ಕೇಂದ್ರಗಳಲ್ಲಿ ಉತ್ಪಾದಿಸಲಾಗುವ ಟಗರು/ ಹೋತಗಳ ಮಾರಾಟದ ಬೆಲೆಯನ್ನು ಪರಿಷ್ಕರಿಸುವ ಉದ್ದೇಶವಿದೆಯೇ ;

(ಉ) ಕಳೆದ ಮೂರು ವರ್ಷಗಳಲ್ಲಿ ಬಂಡೂರು ಕುರಿ ಸಂವರ್ಧನಾ ಕೇಂದ್ರದಲ್ಲಿ ಆಸಕ್ತ ಕುರಿಗಾರರಿಗೆ ವಿತರಿಸಲಾಗಿರುವ ಟಗರು/ ಹೋತಗಳ ಸಂಖ್ಯೆ ಎಷ್ಟು ; ತಳಿಯ ವಿಶೇಷತೆ ಏನು ; ಮಾರಾಟದಿಂದ ಸಂಗ್ರಹವಾದ ಮೊತ್ತ ಎಷ್ಟು ; (ವರ್ಷವಾರು ಮಾಹಿತಿ ನೀಡುವುದು)

(ಊ) ಸರ್ಕಾರದಿಂದ ಬಂಡೂರು ಕುರಿ ಸಂವರ್ಧನಾ ಕೇಂದ್ರಕ್ಕೆ ಕಳೆದ ಮೂರು ವರ್ಷಗಳಲ್ಲಿ ಬಿಡುಗಡೆ ಮಾಡಲಾಗಿರುವ ಅನುದಾನ ಎಷ್ಟು ; ಇದನ್ನು ಯಾವ ಯಾವ ಉದ್ದೇಶಗಳಿಗಾಗಿ ಬಳಸಿಕೊಳ್ಳಲಾಗಿದೆ ? (ವರ್ಷವಾರು ಅನುದಾನದ ಮಾಹಿತಿ ನೀಡುವುದು)

## ಲೋಕೋಪಯೋಗಿ ಇಲಾಖೆಯ ರಸ್ತೆಗಳ ಅನುದಾನ ಬಗ್ಗೆ

**ಶ್ರೀ ಎನ್. ನಾಗರಾಜು (ಎಂ.ಟಿ.ಬಿ) (ವಿಧಾನಸಭೆಯಿಂದ ಚುನಾಯಿತರಾದವರು) :–**

೧೮೦೮ (೨೯೨) ಮಾನ್ಯ ಲೋಕೋಪಯೋಗಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದಲ್ಲಿ ಕಳೆದ ಎರಡು ವರ್ಷಗಳಲ್ಲಿ ಲೋಕೋಪಯೋಗಿ ಇಲಾಖೆಯಿಂದ ಮಂಜೂರಾದ ರಸ್ತೆ ಕಾಮಗಾರಿಗಳು ಯಾವುವು ; (ವಿಧಾನಸಭಾ ಕ್ಷೇತ್ರವಾರು ವಿವರಗಳನ್ನು ನೀಡುವುದು)

(ಆ) ಸದರಿ ರಸ್ತೆ ಕಾಮಗಾರಿಗಳಿಗೆ ಬಿಡುಗಡೆಯಾದ ಅನುದಾನ ಎಷ್ಟು ? (ವಿಧಾನಸಭಾ ಕ್ಷೇತ್ರವಾರು ವಿವರಗಳನ್ನು ನೀಡುವುದು)

## ಸರ್ಕಾರಿ ಜಮೀನು ಮಂಜೂರು ಬಗ್ಗೆ

**ಶ್ರೀ ಎನ್. ನಾಗರಾಜು (ಎಂ.ಟಿ.ಬಿ) (ವಿಧಾನಸಭೆಯಿಂದ ಚುನಾಯಿತರಾದವರು) :–**

೧೮೮೯ (೨೧೯೩) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಹೊಸಕೋಟೆ ತಾಲ್ಲೂಕಿನಲ್ಲಿರುವ ಸರ್ಕಾರಿ ಜಮೀನೆಷ್ಟು: (ಗ್ರಾಮವಾರು, ಸರ್ವೆ ನಂಬರ್‌ಗಳವಾರು, ವಿಸ್ತೀರ್ಣವಾರು ಸಂಪೂರ್ಣ ಮಾಹಿತಿ ನೀಡುವುದು)

(ಆ) ಕಳೆದ ೨ ವರ್ಷಗಳಿಂದ ಸರ್ಕಾರಿ ಜಮೀನುಗಳಿಗೆ ಸಾಗುವಳಿ ಚೀಟಿ ನೀಡಿರುವುದೆಷ್ಟು ; (ಗ್ರಾಮವಾರು, ಸರ್ವೆ ನಂಬರ್‌ಗಳವಾರು, ವಿಸ್ತೀರ್ಣವಾರು, ಹೆಸರುಗಳೊಂದಿಗೆ ಸಂಪೂರ್ಣ ಮಾಹಿತಿ ನೀಡುವುದು)

(ಇ) ಕಳೆದ ೨ ವರ್ಷಗಳಲ್ಲಿ ಸರ್ಕಾರಿ ಜಮೀನುಗಳ ಸರ್ವೆ ನಂಬರ್‌ಗಳಲ್ಲಿ ಸಾಗುವಳಿ ಚೀಟಿಯಂತೆ ಖಾತೆ ಮಾಡಲಾಗಿರುವ ಸಂಖ್ಯೆಯೆಷ್ಟು ? (ಗ್ರಾಮವಾರು, ಸರ್ವೆ ನಂಬರ್‌ಗಳವಾರು, ವಿಸ್ತೀರ್ಣವಾರು. ಖಾತೆದಾರರ ಹೆಸರುಗಳೊಂದಿಗೆ ಸಂಪೂರ್ಣ ಮಾಹಿತಿ ನೀಡುವುದು)

## ನಿವೇಶನ ಹಂಚಿಕೆ ಮಾಡುವ ಬಗ್ಗೆ

**ಶ್ರೀ ಎನ್. ನಾಗರಾಜು (ಎಂ.ಟಿ.ಬಿ) (ವಿಧಾನಸಭೆಯಿಂದ ಚುನಾಯಿತರಾದವರು) :–**

೧೮೧೦ (೨೧೯೪) ಮಾನ್ಯ ವಸತಿ, ವಕ್ಫ್ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಹೊಸಕೋಟೆ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಈ ಹಿಂದಿನ ಸರ್ಕಾರದ ಅವಧಿಯಲ್ಲಿ ನಿವೇಶನದ ಉದ್ದೇಶಕ್ಕಾಗಿ ಮೀಸಲಿಟ್ಟಿರುವ ೨೯೨ ಎಕರೆ ೧೩ ಗುಂಟೆ ಜಮೀನಿನ ಪೈಕಿ

ಎಷ್ಟು ಎಕರೆ ಜಮೀನನ್ನು ಅಭಿವೃದ್ಧಿಪಡಿಸಿ ನಿವೇಶನಗಳನ್ನಾಗಿ ವಿಂಗಡಿಸಲಾಗಿದೆ ; ಅಭಿವೃದ್ಧಿಪಡಿಸಬೇಕಾಗಿರುವ ಜಮೀನಿನ ವಿಸ್ತೀರ್ಣವೆಷ್ಟು ; (ಗ್ರಾಮವಾರು ವಿವರ ನೀಡುವುದು)

(ಆ) ಹಾಗಿದ್ದಲ್ಲಿ, ಅಭಿವೃದ್ಧಿಪಡಿಸಿರುವ ನಿವೇಶನಗಳನ್ನು ಮಂಜೂರು ಮಾಡಲು ಎಷ್ಟು ಫಲಾನುಭವಿಗಳು ಅರ್ಜಿ ಸಲ್ಲಿಸಿದ್ದಾರೆ. ಈ ಪೈಕಿ ಎಷ್ಟು ಫಲಾನುಭವಿಗಳಿಗೆ ನಿವೇಶನಗಳನ್ನು ಹಂಚಿಕೆ ಮಾಡಲಾಗಿದೆ ; (ಗ್ರಾಮವಾರು, ಫಲಾನುಭವಿಗಳ ಪಟ್ಟಿಯೊಂದಿಗೆ ವಿವರ ನೀಡುವುದು)

(ಇ) ಹಾಗಿದ್ದಲ್ಲಿ, ಅಭಿವೃದ್ಧಿಪಡಿಸಲು ಬಾಕಿ ಇರುವ ಜಮೀನನ್ನು ಅಭಿವೃದ್ಧಿಪಡಿಸಿ ನಿವೇಶನಗಳನ್ನಾಗಿ ವಿಂಗಡಿಸಿ ಯಾವಾಗ ಹಂಚಿಕೆ ಮಾಡಲಾಗುವುದು ? (ವಿವರ ನೀಡುವುದು)

## ಲಿಂಗಸಗೂರು ತಾಲ್ಲೂಕಿಗೆ ಹೊಸದಾಗಿ ಪಶು ಆಸ್ಪತ್ರೆಗಳನ್ನು ಮಂಜೂರು ಮಾಡುವ ಕುರಿತು

**ಶ್ರೀ ಶರಣಗೌಡ ಬಯ್ಯಾಪುರ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೧೮೧೧ (೨೧೩೫) ಮಾನ್ಯ ಪಶುಸಂಗೋಪನೆ ಮತ್ತು ರೇಷ್ಮೆ ಸಚಿವರು ಈ ವಿಷಯವನ್ನು ದಯವಿಟ್ಟು ತಿಳಿಸುವರೆ :–

ಲಿಂಗಸಗೂರು ತಾಲ್ಲೂಕಿನ ವ್ಯಾಪ್ತಿಗೆ ಬರುವ ಗೌಡೂರು, ಪೈದೊಡ್ಡಿ, ಹಲ್ಕಾವಟಗಿ, ಹಟ್ಟಿ ಗ್ರಾಮಗಳಲ್ಲಿನ ಜಾನುವಾರುಗಳ ಹಿತದೃಷ್ಟಿಯಿಂದ ಹೊಸದಾಗಿ ಪಶು ಆಸ್ಪತ್ರೆಗಳನ್ನು ಪ್ರಾರಂಭಿಸಲು ಸರ್ಕಾರ ಕ್ರಮ ವಹಿಸುವುದೇ ?

# ರಾಜ್ಯ ಹೆದ್ದಾರಿಗಳು ಹಾಳಾಗಿರುವ ಕುರಿತು

**ಡಾ. ಸೂರಜ್ ರೇವಣ್ಣ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೧೮೧೨ (೨೦೭೯) ಮಾನ್ಯ ಲೋಕೋಪಯೋಗಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಹಾಸನ ಜಿಲ್ಲೆಯಲ್ಲಿ ಲೋಕೋಪಯೋಗಿ ಇಲಾಖಾ ವ್ಯಾಪ್ತಿಯಲ್ಲಿ ಬರುವ ರಾಜ್ಯ ಹೆದ್ದಾರಿಗಳು ಎಷ್ಟು; ರಸ್ತೆಗಳು ಹಾಳಾಗಿರುವ ಬಗ್ಗೆ ಸರ್ಕಾರದ ಗಮನಕ್ಕೆ ಬಂದಿದೆಯೇ ; ಬಂದಿದ್ದಲ್ಲಿ, ಸರ್ಕಾರ ಯಾವ ಕ್ರಮ ಕೈಗೊಂಡಿದೆ ;

(ಆ) ಹಾಸನ ಜಿಲ್ಲೆಯ ಬೇಲೂರು ತಾಲ್ಲೂಕಿನ ಬೇಲೂರು ಸಕಲೇಶಪುರ ಮಾರ್ಗದ ರಸ್ತೆ ಸಂಪೂರ್ಣ ಹಾಳಾಗಿರುವ ಬಗ್ಗೆ ಸರ್ಕಾರದ ಗಮನಕ್ಕೆ ಬಂದಿದೆಯೇ ; ಬಂದಿದ್ದಲ್ಲಿ, ಸರ್ಕಾರ ಯಾವ ಕ್ರಮ ಕೈಗೊಂಡಿದೆ ; ನೂತನ ರಸ್ತೆ ಮಾಡುವ ಬಗ್ಗೆ ಸರ್ಕಾರ ಚಿಂತಿಸಿದೆಯೇ ; ಚಿಂತಿಸಿದ್ದಲ್ಲಿ, ಸರ್ಕಾರ ಯಾವ ಕ್ರಮ ಕೈಗೊಂಡಿದೆ; ಯಾವ ಕಾಲಮಿತಿಯೊಳಗೆ ರಸ್ತೆ ಮಾಡಲಾಗುವುದು ; ರಸ್ತೆ ದುರಸ್ತಿಯಾದಲ್ಲಿ ಸರ್ಕಾರದಿಂದ ಬಿಡುಗಡೆಯಾದ ಅನುದಾನ ಎಷ್ಟು ; (ಸಂಪೂರ್ಣ ಮಾಹಿತಿ ನೀಡುವುದು)

(ಇ) ಹಾಸನ ಜಿಲ್ಲೆಯಲ್ಲಿರುವ ಲೋಕೋಪಯೋಗಿ ಇಲಾಖಾ ವ್ಯಾಪ್ತಿಯಲ್ಲಿ ಬರುವ ಪ್ರವಾಸಿ ಮಂದಿರಗಳು ಎಷ್ಟು ಮತ್ತು ಎಲ್ಲಿದೆ ; ಅದರ ನಿರ್ವಹಣೆಗೆ ಪ್ರತಿ ತಿಂಗಳು ತಗಲುತ್ತಿರುವ ವೆಚ್ಚ ಎಷ್ಟು ; ಪ್ರವಾಸಿ ಮಂದಿರದಲ್ಲಿ ಖಾಸಗಿ ವಾಹನಗಳನ್ನು ನಿಲ್ಲಿಸಿ ತಮ್ಮ ಕೆಲಸಗಳಿಗೆ ತೆರಳುತ್ತಿದ್ದು ಇದಕ್ಕೆ ಸರ್ಕಾರ ಯಾವ ಕ್ರಮ ವಹಿಸಲಾಗಿದೆ ;

(ಈ) ಹಾಸನ ಜಿಲ್ಲೆ ಬೇಲೂರು ತಾಲ್ಲೂಕು ಬಿಕ್ಕೋಡು ಹೋಬಳಿಯ ಕೋಗಿಲಮನೆ ಮಾರ್ಗ ಕೌರಿ, ಕುಶವಾರ, ತೋಳಲು ತಲುಪುವ ರಸ್ತೆ ಹಾಳಾಗಿದ್ದು ಸದರಿ ರಸ್ತೆಯನ್ನು ನೂತನ ರಸ್ತೆ ಮಾಡುವ ಬಗ್ಗೆ ಸರ್ಕಾರ ಚಿಂತಿಸಿದಿಯೇ ; ಚಿಂತಿಸಿದ್ದಲ್ಲಿ, ಸರ್ಕಾರ ಯಾವ ಕ್ರಮ ಕೈಗೊಂಡಿದೆ ; ರಸ್ತೆ ದುರಸ್ತಿ ಕಾಮಗಾರಿ ಮಾಡಿದ್ದಲ್ಲಿ, ಅದಕ್ಕೆ ಬಿಡುಗಡೆಯಾದ ಅನುದಾನ ಎಷ್ಟು ? (ಸಂಪೂರ್ಣ ಮಾಹಿತಿ ನೀಡುವುದು)

## ದೇವಸ್ಥಾನಕ್ಕೆ ಬಿಡುಗಡೆಯಾದ ಅನುದಾನ ಕುರಿತು

**ಡಾ. ಸೂರಜ್ ರೇವಣ್ಣ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೧೮೧೩ (೨೦೮೦) ಮಾನ್ಯ ಸಾರಿಗೆ ಮತ್ತು ಮುಜರಾಯಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದಲ್ಲಿ ಮುಜರಾಯಿ ಇಲಾಖಾ ವ್ಯಾಪ್ತಿಯಲ್ಲಿರುವ ದೇವಸ್ಥಾನಗಳು ಎಷ್ಟು ; ಸದರಿ ದೇವಸ್ಥಾನಗಳಿಗೆ ಸರ್ಕಾರದಿಂದ ಬಿಡುಗಡೆಯಾದ ಅನುದಾನ ಎಷ್ಟು ; (ಜಿಲ್ಲಾವಾರು ದೇವಸ್ಥಾನದ ಟ್ರಸ್ಟ್ ಅಧ್ಯಕ್ಷರು ಮತ್ತು ಪ್ರಧಾನ ಕಾರ್ಯದರ್ಶಿಗಳ ಹೆಸರು ದೂರವಾಣಿ ಸಂಖ್ಯೆ, ಕಛೇರಿ ದೂರವಾಣಿ ಸಂಖ್ಯೆ ಸಹಿತ ಮಾಹಿತಿ ನೀಡುವುದು)

(ಆ) ರಾಜ್ಯದಲ್ಲಿ ಮುಜರಾಯಿ ಇಲಾಖೆ ದೇವಸ್ಥಾನದ ಅರ್ಚಕರಿಗೆ ನೀಡುತ್ತಿರುವ ತಿಂಗಳ ವೇತನ ಎಷ್ಟು ; ರಾಜ್ಯದಲ್ಲಿ ಅರ್ಚಕರಿಗೆ ತಿಂಗಳ ವೇತನ ಹೆಚ್ಚಿಸುವ ಬಗ್ಗೆ ಸರ್ಕಾರ ಚಿಂತಿಸಿದೆಯೇ ; (ಸಂಪೂರ್ಣ ಮಾಹಿತಿ ನೀಡುವುದು)

(ಇ) ಹಾಸನ ಜಿಲ್ಲೆಯಲ್ಲಿ ಮುಜರಾಯಿ ದೇವಸ್ಥಾನಗಳು ಎಷ್ಟು; ಈ ದೇವಸ್ಥಾನಗಳಿಂದ ಸರ್ಕಾರಕ್ಕೆ ಬಂದ ಆದಾಯ ಎಷ್ಟು; ಮುಜರಾಯಿ ಇಲಾಖೆ ವ್ಯಾಪ್ತಿಯಲ್ಲಿ ಯಾವ ಯಾವ ದೇವಸ್ಥಾನಗಳ ಕಾಮಗಾರಿ ನಡೆಯುತ್ತಿದೆ ; (ಹೋಬಳಿವಾರು ಮಾಹಿತಿ ನೀಡುವುದು)

(ಈ) ಸದರಿ ಕಾಮಗಾರಿ ನಡೆಯುತ್ತಿರುವ ದೇವಸ್ಥಾನಗಳ ಕಾಮಗಾರಿಯು ಯಾವ ಹಂತದಲ್ಲಿದೆ ; ಸ್ಥಳೀಯರಿಂದ ಸಂಗ್ರಹವಾದ ಮೊತ್ತ ಎಷ್ಟು ; ಯಾವ ಕಾಲಮಿತಿಯೊಳಗೆ ಕಾಮಗಾರಿ ಸಂಪೂರ್ಣ ಮಾಡಲಾಗುವುದು ? (ಸಂಪೂರ್ಣ ಮಾಹಿತಿ ನೀಡುವುದು)

## ಪ್ರಧಾನಮಂತ್ರಿ ಆವಸ್ ಯೋಜನೆಯಡಿ ನಿರ್ಮಾಣವಾದ ಮನೆಗಳ ಕುರಿತು

**ಡಾ. ಸೂರಜ್ ರೇವಣ್ಣ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೧೮೧೪ (೨೦೮೧) ಮಾನ್ಯ ವಸತಿ, ವಕ್ಫ್ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಕಳೆದ ೨ ವರ್ಷಗಳಲ್ಲಿ ಹಾಸನ ಮತ್ತು ಚಿಕ್ಕಮಗಳೂರು ಭಾಗದಲ್ಲಿ ಪ್ರಧಾನಮಂತ್ರಿ ಆವಾಸ್ ಯೋಜನೆಯಡಿ ಎಷ್ಟು ಮನೆಗಳನ್ನು ನಿರ್ಮಿಸಲಾಗಿದೆ ; ಎಷ್ಟು ಮನೆಗಳು ಪೂರ್ಣವಾಗಿದೆ ; ಅದರ ಸದುಪಯೋಗ ಪಡೆದುಕೊಂಡ ಫಲಾನುಭವಿಗಳ ಸಂಖ್ಯೆ ಎಷ್ಟು ; ತಾಲ್ಲೂಕುವಾರು ಹೆಸರು, ಗ್ರಾಮ ಸದುಪಯೋಗ ಪಡೆದುಕೊಂಡವರ ದೂರವಾಣಿ ಸಂಖ್ಯೆ ಸಹಿತ ಮಾಹಿತಿ ನೀಡುವುದು)

(ಆ) ಕಾಮಗಾರಿ ಪ್ರಗತಿಯಲ್ಲಿರುವ ಮನೆಗಳು ಎಷ್ಟು: ಕಾಮಗಾರಿಯು ಯಾವ ಹಂತದಲ್ಲಿದೆ ; ಯಾವ ಕಾಲಮಿತಿಯೊಳಗೆ ಕಾಮಗಾರಿ ಪೂರ್ಣಗೊಳಿಸಲಾಗುವುದು ; (ಸಂಪೂರ್ಣ ಮಾಹಿತಿ ನೀಡುವುದು)

(ಇ) ಸದರಿ ಜಿಲ್ಲೆಯಲ್ಲಿ ಪ್ರಧಾನಮಂತ್ರಿ ಆವಾಸ್ ಯೋಜನೆ ಅಡಿಯಲ್ಲಿ ರಾಜ್ಯ ಸರ್ಕಾರ ಮತ್ತು ಕೇಂದ್ರ ಸರ್ಕಾರ ಬಿಡುಗಡೆ ಮಾಡಿದ ಅನುದಾನ ಎಷ್ಟು ; ಬಳಕೆಯಾದ ಅನುದಾನ ಎಷ್ಟು; ಉಳಿಕೆಯಾಗಿರುವ ಅನುದಾನ ಎಷ್ಟು : (ಸಂಪೂರ್ಣ ಮಾಹಿತಿ ತಾಲ್ಲೂಕುವಾರು ನೀಡುವುದು)

(ಈ) ಹಾಸನ ಜಿಲ್ಲೆಯಲ್ಲಿ ಮುಂದಿನ ದಿನಗಳಲ್ಲಿ ಮನೆಗಳನ್ನು ನಿರ್ಮಿಸಲು ಸರ್ಕಾರ ಯಾವ ಯೋಜನೆಯನ್ನು ರೂಪಿಸಲು ಗುರಿಯನ್ನಿಟ್ಟುಕೊಂಡಿದೆ ? (ಸಂಪೂರ್ಣ ಮಾಹಿತಿ ನೀಡುವುದು)

## ಪೌತಿ ಖಾತೆ ಮತ್ತು ೧ ಟು ೫ ಪ್ರಕರಣಗಳ ಕುರಿತು

**ಡಾ. ಸೂರಜ್ ರೇವಣ್ಣ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೧೮೧೫ (೨೦೮೨) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದಲ್ಲಿ ಒಟ್ಟು ಪೌತಿ ಖಾತೆಗಳು ಪೌತಿಯ ನಂತರ ಖಾತೆ ಬದಲಾಗದೆ ಉಳಿದಿರುವ ಖಾತೆಗಳು ಎಷ್ಟು; ಪೌತಿ ಆಂದೋಲನದಲ್ಲಿ ಎಷ್ಟು ಪೌತಿ ಖಾತೆಗಳನ್ನು ಮಾಡಲಾಗಿದೆ; ಉಳಿದಿರುವ ಖಾತೆಗಳನ್ನು ಯಾವ ಕಾಲಮಿತಿಯೊಳಗೆ ಮಾಡಲಾಗುವುದು ; (ಸಂಪೂರ್ಣ ಮಾಹಿತಿ ಜಿಲ್ಲಾವಾರು ನೀಡುವುದು)

(ಆ) ಕಳೆದ ೨ ವರ್ಷಗಳಲ್ಲಿ ಹಾಸನ ಜಿಲ್ಲೆಯಲ್ಲಿ ಎಷ್ಟು ಪೌತಿ ಖಾತೆಗಳು ಮಾಡಲಾಗಿದೆ: ಪ್ರಸ್ತುತ ಪೌತಿ ಖಾತೆಗಳನ್ನು ನಿರ್ವಹಿಸಲು ಸರ್ಕಾರಿ ಅಧಿಕಾರಿಗಳಿಗೆ ಟಾರ್ಗೇಟ್ ನೀಡಲಾಗಿದೆಯೇ ; ಹಾಸನ ಜಿಲ್ಲೆಯಲ್ಲಿ ಎಷ್ಟು ಪೌತಿ ಖಾತೆಗಳು ಬಾಕಿ ಉಳಿದಿವೆ ; (ಸಂಪೂರ್ಣ ಮಾಹಿತಿ ತಾಲ್ಲೂಕುವಾರು ನೀಡುವುದು)

(ಇ) ಸದರಿ ಜಿಲ್ಲೆಯಲ್ಲಿ ಪೌತಿ ಖಾತೆಗಳು ವಿಳಂಬವಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಬಂದಿದ್ದಲ್ಲ, ಸರ್ಕಾರ ಯಾವ ಕ್ರಮ ಕೈಗೊಂಡಿದೆ ; ವಿಳಂಬವಾಗುತ್ತಿರುದಕ್ಕೆ ಸೂಕ್ತ ಕಾರಣವೇನು ; (ಸಂಪೂರ್ಣ ಮಾಹಿತಿ ನೀಡುವುದು)

(ಈ) ಹಾಸನ ಜಿಲ್ಲೆಯಲ್ಲಿ ಕಳೆದ ೧ ವರ್ಷದಲ್ಲಿ ಒಟ್ಟು ೧ ಟು ೫ ಆಗದೆ ಉಳಿದಿರುವ ಪ್ರಕರಣಗಳು ಎಷ್ಟು ; ೧ ಟು ೫ ವಿಳಂಬವಾಗುತ್ತಿರುವುದಕ್ಕೆ ಕಾರಣವೇನು ; ಯಾವ ಕಾಲಮಿತಿಯೊಳಗೆ ೧ ಟು ೫ ಜಿಲ್ಲೆಯಲ್ಲಿ ಪೂರ್ಣಗೊಳಿಸಲಾಗುವುದು ; ೧ ಟು ೫ ಮಾಡಲು ಅಧಿಕಾರಿಗಳಿಗೆ ಟಾರ್ಗೇಟ್ ನೀಡಲಾಗಿದೆಯೇ ; (ಹೋಬಳಿವಾರು ಮಾಹಿತಿ ನೀಡುವುದು)

(ಉ) ಹಾಸನ ಜಿಲ್ಲೆಯಲ್ಲಿ ಮೂಲ ಪ್ರತಿ ತಾಲ್ಲೂಕು ಕಛೇರಿಯಲ್ಲಿ ಇಲ್ಲದೆ ಮಿಸ್ಸಿಂಗ್ ರೇಕಾರ್ಡ್ ಮುಖಾಂತರ ೧ ಟು ೫ ಮಾಡಿರುವ ಪ್ರಕರಣಗಳು ಎಷ್ಟು ; ಎಷ್ಟು ಪ್ರಕರಣಗಳು ಪ್ರಸ್ತುತ ಪ್ರಗತಿಯಲ್ಲಿದೆ ; ಯಾವ ಕಾಲಮಿತಿಯೊಳಗೆ ಪೂರ್ಣಗೊಳಿಸಲಾಗುವುದು ? (ಹೋಬಳಿವಾರು, ಹೆಸರು, ಗ್ರಾಮ ಸರ್ವೆ ನಂ. ಸಹಿತ ಮಾಹಿತಿ ನೀಡುವುದು)

## ರಾಯಚೂರು ಜಿಲ್ಲೆಯ ಲೋಕೋಪಯೋಗಿ ಇಲಾಖೆಗೆ ಬರುವ ರಸ್ತೆಗಳ ಕುರಿತು

**ಶ್ರೀ ಎ. ವಸಂತ ಕುಮಾರ್ (ವಿಧಾನಸಭೆಯಿಂದ ಚುನಾಯಿತರಾದವರು) :–**

೧೮೧೬ (೨೧೩೬) ಮಾನ್ಯ ಲೋಕೋಪಯೋಗಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಯಚೂರು ಜಿಲ್ಲೆಯಲ್ಲಿ PWD ವ್ಯಾಪ್ತಿಗೆ ಬರುವ ಒಟ್ಟು ರಸ್ತೆಗಳ ಉದ್ದ ಎಷ್ಟು ಕಿ.ಮಿ ಇದೆ ;

(ಆ) ಕಳೆದ ಮೂರು ವರ್ಷಗಳಲ್ಲಿ ರಸ್ತೆ ಅಭಿವೃದ್ಧಿಗೆ ಮಂಜೂರಾದ ಮತ್ತು ಖರ್ಚಾದ ಅನುದಾನ ಎಷ್ಟು ; (ತಾಲ್ಲೂಕುವಾರು ವಿವರ ನೀಡುವುದು)

(ಇ) ಹೊಸ ಸೇತುವೆ ಮತ್ತು ಬ್ಯಾರೇಜ್ ನಿರ್ಮಾಣಕ್ಕಾಗಿ ಮಂಜೂರಾದ ಯೋಜನೆಗಳ ವಿವರ ನೀಡುವುದು ;

(ಈ) ರಾಯಚೂರು ಜಿಲ್ಲೆಯಲ್ಲಿ PWD ವ್ಯಾಪ್ತಿಗೆ ಬರುವ ಸರ್ಕಾರಿ ಕಛೇರಿ/ಶಾಲೆ/ಆಸ್ಪತ್ರೆ/ಕಟ್ಟಡಗಳ ಸ್ಥಿತಿ ಹೇಗಿದೆ; ಜೀರ್ಣೋದ್ಧಾರಕ್ಕೆ ಮಂಜೂರಾದ ಅನುದಾನ ಮತ್ತು ಕಾಮಗಾರಿಗಳ ಪ್ರಗತಿಯ ತಾಲ್ಲೂಕುವಾರು ವಿವರ ನೀಡುವುದು ?

## ಬಳ್ಳಾರಿ ಮತ್ತು ವಿಜಯನಗರ ಜಿಲ್ಲೆಗಳಲ್ಲಿ ಇನಾಂ ರದ್ದತಿ ಅರ್ಜಿಗಳ ಕುರಿತು

**ಶ್ರೀ ವೈ.ಎಂ. ಸತೀಶ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೧೮೧೭ (೨೮೯೫) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಬಳ್ಳಾರಿ ಮತ್ತು ವಿಜಯನಗರ ಜಿಲ್ಲೆಗಳಲ್ಲಿ ಪಹಣಿ ಕಾಲಂರಲ್ಲಿ ಇನಾಂ ಇರುವ ಪಹಣಿಗಳ ಸಂಖ್ಯೆ ಎಷ್ಟು ಮತ್ತು ವಿಸ್ತೀರ್ಣ ಎಷ್ಟು ;

(ಆ) ಇನಾಂ ರದ್ದತಿ ಮಾಡಲು ಸರ್ಕಾರದಿಂದ ಅರ್ಜಿಗಳನ್ನು ನೀಡಲು ಮತ್ತೊಮ್ಮೆ ಅಧಿಸೂಚನೆ ಹೊರಡಿಸಲು ಯಾವ ಕ್ರಮ ಕೈಗೊಳ್ಳಲಾಗುವುದು ;

(ಇ) ಈ ಹಿಂದೆ ಪಹಣಿ ಕಾಲಂ ೬ ರಲ್ಲಿ ಇನಾಂ ರದ್ದು ಮಾಡಲು ಆದೇಶವಾಗಿದ್ದರೂ ಇಂದೀಕರಣವಾಗದೇ ಬಾಕಿ ಉಳಿದ ಪ್ರಕರಣಗಳಲ್ಲಿ ಇಂದೀಕರಣಗೊಳಿಸಲು ಸರ್ಕಾರದಿಂದ ಯಾವ ಕ್ರಮ ಕೈಗೊಳ್ಳಲಾಗುವುದು?

## ಮಾಜಿ ಸೈನಿಕ/ಸೈನಿಕರಿಗೆ ಭೂ ಮಂಜೂರಾತಿ ಕುರಿತು

**ಶ್ರೀ ಮಧು ಜಿ. ಮಾದೇಗೌಡ (ಪದವೀಧರರ ಕ್ಷೇತ್ರ) :–**

೧೮೧೮ (೨೦೧೦) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಕರ್ನಾಟಕ ಸರ್ಕಾರದಿಂದ ಮಾಜಿ ಸೈನಿಕರಿಗೆ ಪ್ರಸ್ತುತ ನೀಡುತ್ತಿರುವ ಸೌಲಭ್ಯಗಳೇನು ;

(ಆ) ಮಂಡ್ಯ, ಮೈಸೂರು, ಹಾಸನ ಮತ್ತು ಚಾಮರಾಜನಗರ ಜಿಲ್ಲೆಗಳಲ್ಲಿ ಎಷ್ಟು ಮಂದಿ ಸೈನಿಕ/ ಮಾಜಿ ಸೈನಿಕರು ಭೂ ಮಂಜೂರಾತಿಗಾಗಿ ಸರ್ಕಾರಕ್ಕೆ ಅರ್ಜಿ ಸಲ್ಲಿಸಿದ್ದಾರೆ ; ಈ ಪೈಕಿ ವಿಲೇವಾರಿ ಮಾಡಿರುವ ಮತ್ತು ಬಾಕಿ ಉಳಿದಿರುವ ಅರ್ಜಿಗಳ ಸಂಖ್ಯೆ ಎಷ್ಟು ; (ಜಿಲ್ಲಾವಾರು ವಿವರ ನೀಡುವುದು)

(ಇ) ಮಾಜಿ ಸೈನಿಕರಿಗೆ ಭೂ ಮಂಜೂರಾತಿ ಮಾಡಿ ಹಿಂಪಡೆದಿರುವ ಯಾವುದಾದರೂ ಪ್ರಕರಣಗಳಿವೆಯೇ ; ಇದ್ದಲ್ಲಿ, ಎಷ್ಟು ಮಂದಿ ಮಾಜಿ ಸೈನಿಕರಿಗೆ ಮಂಜೂರು ಮಾಡಲಾದ ಭೂಮಿಯನ್ನು ಹಿಂದಕ್ಕೆ ಪಡೆಯಲಾಗಿದೆ ; ಇದರ ಒಟ್ಟು ವಿಸ್ತೀರ್ಣ ಎಷ್ಟು: ಹಿಂಪಡೆಯಲು ಕಾರಣಗಳೇನು ; (ಜಿಲ್ಲಾವಾರು ಸಂಪೂರ್ಣ ಮಾಹಿತಿ ನೀಡುವುದು)

(ಈ) ಸದರಿ ಜಿಲ್ಲೆಗಳಲ್ಲಿ ಭೂ ಮಂಜೂರಾತಿ ಮಾಡಲು "ಭೂ ಲಭ್ಯತಾ ಪಟ್ಟಿಯಂತೆ" ಇರುವ ಜಮೀನು ಎಷ್ಟು ; ಮಾಜಿ ಸೈನಿಕರಿಗೆ ಭೂ ಮಂಜೂರು ಮಾಡಲು ಸಾಧ್ಯವಿಲ್ಲದಿದ್ದಲ್ಲಿ, ಬೇರಾವ ಸೌಲಭ್ಯಗಳನ್ನು ನೀಡಲು ಸರ್ಕಾರ ಉದ್ದೇಶಿಸಿದೆ ;

(ಉ) ವ್ಯವಸಾಯ ಉದ್ದೇಶಕ್ಕಾಗಿ ಭೂ ಮಂಜೂರಾತಿ ಮಾಡಲು ಜಮೀನು ಲಭ್ಯವಿಲ್ಲದ ಕಾರಣ ಎಷ್ಟು ಮಂದಿ ಅರ್ಜಿದಾರರಿಗೆ ಹಿಂಬರಹ ನೀಡಿ ವಿಲೇಗೊಳಿಸಲಾಗಿದೆ ; ಹಾಗೂ ಎಷ್ಟು ಮಂದಿ ನಿವೇಶನಕ್ಕಾಗಿ ಅರ್ಜಿ ಸಲ್ಲಿಸಿದ್ದಾರೆ ; (ಜಿಲ್ಲಾವಾರು ಮಾಹಿತಿ ನೀಡುವುದು)

(ಊ) ಮೇಲ್ಕಾಣಿಸಿದ ಜಿಲ್ಲೆಗಳಲ್ಲಿರುವ ಮಾಜಿ ಸೈನಿಕರ ಸಂಖ್ಯೆ ಎಷ್ಟು ; ಸೇನೆಯಲ್ಲಿ ಪ್ರಸ್ತುತ ಕರ್ತವ್ಯ ನಿರ್ವಹಿಸುತ್ತಿರುವವರ ಸಂಖ್ಯೆ ಎಷ್ಟು ? (ಜಿಲ್ಲಾವಾರು ಮಾಹಿತಿ ನೀಡುವುದು)

## ರಾಷ್ಟ್ರೀಯ ಹೆದ್ದಾರಿಗಳಲ್ಲಿನ ಅಪಘಾತಗಳ ಕುರಿತು

**ಶ್ರೀ ಮಧು ಜಿ. ಮಾದೇಗೌಡ (ಪದವೀಧರರ ಕ್ಷೇತ್ರ) :–**

೧೮೮೯ (೨೦೧೧) ಮಾನ್ಯ ಲೋಕೋಪಯೋಗಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಮಂಡ್ಯ, ಮೈಸೂರು, ಹಾಸನ ಮತ್ತು ಚಾಮರಾಜನಗರ ಜಿಲ್ಲಾ ವ್ಯಾಪ್ತಿಯಲ್ಲಿ ಹಾದುಹೋಗಿರುವ ರಾಷ್ಟ್ರೀಯ ಹೆದ್ದಾರಿ ವಲಯ

(NH) ಹಾಗೂ ಭಾರತೀಯ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರ (NHAI) ಕಾರ್ಯವ್ಯಾಪ್ತಿಯಲ್ಲಿರುವ ಹೆದ್ದಾರಿಗಳು ಯಾವುವು ;

(ಆ) ಕಳೆದ ಮೂರು ವರ್ಷಗಳಲ್ಲಿ ಮೇಲ್ಕಾಣಿಸಿದ ಜಿಲ್ಲೆಗಳ ವ್ಯಾಪ್ತಿಯ ಹೆದ್ದಾರಿಗಳಲ್ಲಿ ಸಂಭವಿಸಿರುವ ಅಪಘಾತಗಳ ಸಂಖ್ಯೆ ಗಾಯಗೊಂಡವರ ಹಾಗೂ ಮೃತರ ಸಂಖ್ಯೆ ಎಷ್ಟು ; (ವರ್ಷವಾರು, NH & NHAI ಹೆದ್ದಾರಿವಾರು ಮಾಹಿತಿ ನೀಡುವುದು)

(ಇ) ಈ ರಾಷ್ಟ್ರೀಯ ಹೆದ್ದಾರಿಗಳಲ್ಲಿ ಸಂಭವಿಸಿರುವ ಅಪಘಾತಗಳಿಗೆ ಕಾರಣಗಳೇನು ;

(ಈ) ಸದರಿ ಜಿಲ್ಲೆಗಳ NH & NHAI ಹೆದ್ದಾರಿಗಳಲ್ಲಿ ಗುರುತಿಸಲಾಗಿರುವ ಬ್ಲಾಕ್ ಸ್ಪಾಟ್ (blackspot) ಸ್ಥಳಗಳ ಒಟ್ಟು ಸಂಖ್ಯೆ ಎಷ್ಟು ; ಅವು ಯಾವುವು ;

(ಉ) ಅಪಘಾತಗಳನ್ನು ತಡೆಗಟ್ಟಲು ಸರ್ಕಾರ ತೆಗೆದುಕೊಂಡಿರುವ ದೀರ್ಘಾವಧಿ ಕ್ರಮಗಳೇನು ? (ಸಂಪೂರ್ಣ ಮಾಹಿತಿ ನೀಡುವುದು)

## ರಾಜ್ಯದಲ್ಲಿ 'ಇ–ಪೋಡಿ ಆಂದೋಲನ' ಹಾಗೂ ಭೂ ದಾಖಲೆಗಳ ಡಿಜಿಟಲೀಕರಣದ ಪ್ರಗತಿ ಕುರಿತು

**ಶ್ರೀ ಸಿ. ಎನ್. ಮಂಜೇಗೌಡ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೧೮೨೦ (೨೧೦೨) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದಲ್ಲಿ 'ನನ್ನ ಆಸ್ತಿ' ಯೋಜನೆಯಡಿ ಹಮ್ಮಿಕೊಳ್ಳಲಾಗಿರುವ 'ಇ–ಪೋಡಿ ಆಂದೋಲನ' ದ ಮೂಲಕ ಇದುವರೆಗೆ ಒಟ್ಟು

ಎಷ್ಟು ಪೋಡಿ ಪ್ರಕರಣಗಳನ್ನು ಗುರುತಿಸಲಾಗಿದೆ ಮತ್ತು ಅದರಲ್ಲಿ ಎಷ್ಟು ಪ್ರಕರಣಗಳನ್ನು ಇತ್ಯರ್ಥಪಡಿಸಲಾಗಿದೆ ; (ಜಿಲ್ಲಾವಾರು ಮಾಹಿತಿ ನೀಡುವುದು)

(ಆ) ಆಧಾರ್ ಜೋಡಣೆ ಕುರಿತು ವರದಿಗಳ ಪ್ರಕಾರ ೫೦ ಲಕ್ಷಕ್ಕೂ ಹೆಚ್ಚು ಪೋಡಿ ಪ್ರಕರಣಗಳು ಆಧಾರ್ ಜೋಡಣೆಯಿಂದ ಗುರುತಿಸಲ್ಪಟ್ಟಿವೆ ಎಂದು ತಿಳಿದುಬಂದಿದ್ದು ಈ ಪ್ರಕ್ರಿಯೆಯಿಂದ ರೈತರಿಗೆ ಆಗಿರುವ ಅನುಕೂಲಗಳೇನು ಮತ್ತು ಬಾಕಿ ಇರುವ ಪ್ರಕರಣಗಳನ್ನು ಎಷ್ಟು ಕಾಲಮಿತಿಯಲ್ಲಿ ಪೂರ್ಣಗೊಳಿಸಲಾಗುವುದು ;

(ಇ) ಈಗಾಗಲೇ ೬೭ ಕೋಟಿಗೂ ಅಧಿಕ ಪುಟಗಳ ಭೂ ದಾಖಲೆಗಳು ಡಿಜಿಟಲೀಕರಣಗೊಂಡಿವೆ ಎಂದು ಹೇಳಲಾಗುತ್ತಿದೆ ; ಈ ಡಿಜಿಟಲ್ ದಾಖಲೆಗಳ ಸುರಕ್ಷತೆಗಾಗಿ ಮತ್ತು ನಕಲಿ ದಾಖಲೆ ಸೃಷ್ಟಿ ತಡೆಯಲು ಸರ್ಕಾರ ಕೈಗೊಂಡಿರುವ ತಾಂತ್ರಿಕ ಕ್ರಮಗಳೇನು ;

(ಈ) ಸರ್ಕಾರಿ ಜಮೀನುಗಳ ರಕ್ಷಣೆಗಾಗಿ ಜಾರಿಗೆ ತಂದಿರುವ 'ಲ್ಯಾಂಡ್ ಬೀಟ್' ತಂತ್ರಜ್ಞಾನದಡಿ ಇದುವರೆಗೆ ಎಷ್ಟು ಎಕರೆ ಸರ್ಕಾರಿ ಜಮೀನನ್ನು ಸರ್ವೆ ಮಾಡಿ ರಕ್ಷಿಸಲಾಗಿದೆ ;

(ಉ) ಮೊದಲ ಬಾರಿಗೆ ಡ್ರೋನ್ ತಂತ್ರಜ್ಞಾನದ ಮೂಲಕ ಮರು–ಸರ್ವೆ ಕಾರ್ಯ ನಡೆಯುತ್ತಿದ್ದು, ಪ್ರಸ್ತುತ ಯಾವ ಜಿಲ್ಲೆಗಳಲ್ಲಿ ಈ ಕಾರ್ಯ ಪೂರ್ಣಗೊಂಡಿದೆ ಮತ್ತು ಇದರಿಂದ ಸಾರ್ವಜನಿಕರಿಗೆ ದೊರೆಯುವ ಪ್ರಯೋಜನಗಳೇನು ?

# ಸಾರಿಗೆ ಇಲಾಖೆಯ ಭ್ರಾಷ್ಟಾಚಾರ ಮತ್ತು ಎಫ್‌ಸಿ (FC) ನವೀಕರಣ ಅಕ್ರಮಗಳ ಕುರಿತು

**ಶ್ರೀ ಸಿ. ಎನ್. ಮಂಜೇಗೌಡ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೧೮೨೧ (೨೧೦೩) ಮಾನ್ಯ ಸಾರಿಗೆ ಮತ್ತು ಮುಜರಾಯಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದ ಸಾರಿಗೆ ಇಲಾಖೆಯಲ್ಲಿ ಹೊರರಾಜ್ಯದ ಸುಮಾರು ೧೦ ಸಾವಿರ ವಾಹನಗಳಿಗೆ ನಿಯಮಬಾಹಿರವಾಗಿ ಅರ್ಹತಾ ಪ್ರಮಾಣ ಪತ್ರ (FC) ನವೀಕರಿಸಿಕೊಟ್ಟಿರುವ ವಿಷಯವು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ಗುಜರಾತ್, ಮಹಾರಾಷ್ಟ್ರ ಮತ್ತು ಕೇರಳ ರಾಜ್ಯಗಳ ವಾಹನಗಳನ್ನು ಭೌತಿಕವಾಗಿ ಪರಿಶೀಲಿಸಿದೆಯೇ ; ಕೇವಲ ದಾಖಲೆಗಳ ಮೂಲಕ ನವೀಕರಣ ಮಾಡಿರುವುದು ನಿಜವೇ ; ಈ ಅಕ್ರಮದಲ್ಲಿ ಭಾಗಿಯಾಗಿರುವ ಮೋಟಾರು ವಾಹನ ನಿರೀಕ್ಷಕರುಗಳ (IMV) ವಿರುದ್ಧ ಸರ್ಕಾರ ಕೈಗೊಂಡಿರುವ ಶಿಸ್ತು ಕ್ರಮಗಳೇನು ;

(ಇ) ಈ ಹಗರಣಕ್ಕೆ ಸಂಬಂಧಿಸಿದಂತೆ ಈಗಾಗಲೇ ಅಮಾನತ್ತುಗೊಂಡಿರುವ ಹಿರಿಯ ಮೋಟಾರು ವಾಹನ ನಿರೀಕ್ಷಕರ ವಿರುದ್ಧ ಕ್ರಿಮಿನಲ್ ಮೊಕದ್ದಮೆ ದಾಖಲಿಸಲಾಗಿದೆಯೇ ; ಇಲ್ಲದಿದ್ದಲ್ಲಿ, ವಿಳಂಬಕ್ಕೆ ಕಾರಣವೇನು ;

(ಈ) ಇಂತಹ ಅಕ್ರಮಗಳನ್ನು ತಡೆಗಟ್ಟಲು ಸಾರಿಗೆ ಇಲಾಖೆಯ 'ಇ–ಡಿಸ್ಟ್ರಿಕ್ಟ್' (e-District) ಪೋರ್ಟಲ್ ಅಥವಾ ತಾಂತ್ರಿಕ ವ್ಯವಸ್ಥೆಯಲ್ಲಿ ಸರ್ಕಾರ ತರಲು ಉದ್ದೇಶಿಸಿರುವ ಸುಧಾರಣೆಗಳೇನು ?

# ವಾಹನ ಮಾಲಿನ್ಯ ಪ್ರಮಾಣಪತ್ರದ ಹಾಲೋಗ್ರಾಮ್ ಕೊರತೆಯ ಕುರಿತು

**ಶ್ರೀ ಸಿ.ಎನ್. ಮಂಜೇಗೌಡ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೧೮೨೨ (೨೧೦೪) ಮಾನ್ಯ ಸಾರಿಗೆ ಮತ್ತು ಮುಜರಾಯಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದಲ್ಲಿ ವಾಹನಗಳ ಮಾಲಿನ್ಯ ತಪಾಸಣೆ ನಡೆಸಿ ನೀಡುವ ಪ್ರಮಾಣಪತ್ರಕ್ಕೆ ಬಳಸುವ 'ಹಾಲೋಗ್ರಾಮ್' (Hologram) ಸ್ಟಿಕ್ಕರ್‌ಗಳ ತೀವ್ರ ಕೊರತೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ಹಾಲೋಗ್ರಾಮ್ ಇಲ್ಲದ ಪ್ರಮಾಣಪತ್ರಗಳನ್ನು ಗ್ರಾಹಕರು ಮತ್ತು ಅಧಿಕಾರಿಗಳು ಅಧಿಕೃತ ಎಂದು ಒಪ್ಪದ ಕಾರಣ ವಾಹನ ಮಾಲೀಕರು ಎದುರಿಸುತ್ತಿರುವ ಸಮಸ್ಯೆಗಳನ್ನು ನಿವಾರಿಸಲು ಸರ್ಕಾರ ಕೈಗೊಂಡ ಕ್ರಮವೇನು ;

(ಇ) ಹಾಲೋಗ್ರಾಮ್ ಪೂರೈಕೆಗಾಗಿ ಕಳೆದ ಒಂದೂವರೆ ತಿಂಗಳಿನಿಂದ ಟೆಂಡರ್ ಪ್ರಕ್ರಿಯೆ ವಿಳಂಬವಾಗಲು ಕಾರಣವೇನು ; ಇದರಿಂದಾಗಿ ಮಾಲಿನ್ಯ ತಪಾಸಣಾ ಕೇಂದ್ರಗಳ ಮಾಲೀಕರಿಗೆ ಆಗುತ್ತಿರುವ ಆರ್ಥಿಕ ನಷ್ಟಕ್ಕೆ ಜವಾಬ್ದಾರರು ಯಾರು ;

(ಈ) ಹೊಸದಾಗಿ ರೂ. ೩೬ ಲಕ್ಷ ವೆಚ್ಚದಲ್ಲಿ ಹಾಲೋಗ್ರಾಮ್ ಪೂರೈಸಲು ಕರೆಯಲಾದ ಟೆಂಡರ್ ಪ್ರಕ್ರಿಯೆ ಪ್ರಸ್ತುತ ಯಾವ ಹಂತದಲ್ಲಿದೆ ಮತ್ತು ಯಾವಾಗ ಪೂರ್ಣ ಪ್ರಮಾಣದಲ್ಲಿ ಸ್ಟಿಕ್ಕರ್‌ಗಳು ಲಭ್ಯವಾಗಲಿವೆ ?

# ಕರ್ನಾಟಕ ರಾಜ್ಯದಲ್ಲಿ ಲೋಕೋಪಯೋಗಿ ಇಲಾಖೆಯ (PWD) ರಸ್ತೆಗಳ ಇಕ್ಕಲಗಳನ್ನು "ಸುರಕ್ಷಿತ ವಲಯ" (Road Safety Corridor) ಎಂದು ಘೋಷಿಸುವ ಕುರಿತು

**ಶ್ರೀ ಮಂಜುನಾಥ್ ಭಂಡಾರಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೧೮೨೩ (೨೧೧೦) ಮಾನ್ಯ ಲೋಕೋಪಯೋಗಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದ ವಿವಿಧ ರೀತಿಯ ರಸ್ತೆಗಳಾದ ರಾಜ್ಯ ಹೆದ್ದಾರಿ, ಜಿಲ್ಲಾ ಮುಖ್ಯ ರಸ್ತೆ, ಇತರೆ ಜಿಲ್ಲಾ ರಸ್ತೆ ಮುಂತಾದ ರಸ್ತೆಗಳ ಬದಿಯಲ್ಲಿ ಸುರಕ್ಷಿತ ವಲಯ ಘೋಷಣೆ ಮಾಡಿರುವುದೇ ; ಇದ್ದಲ್ಲಿ ಅದರ ಮಾರ್ಗಸೂಚಿಗಳು ಹಾಗೂ ಜಾರಿಯ ವಿವರವೇನು ; ಘೋಷಣೆ ಮಾಡದಿದ್ದರೆ ಅದಕ್ಕೆ ಕಾರಣವೇನು ;

(ಆ) ಲೋಕೋಪಯೋಗಿ ಇಲಾಖೆಯ ವಿವಿಧ ರಸ್ತೆಗಳ ಬದಿಯಲ್ಲಿ ಇರುವ ಅಪಾಯಕಾರಿ ಮರಗಳು, ಹಳೆಯ/ಅಪಾಯಕಾರಿ ಕಟ್ಟಡಗಳು, ವಿದ್ಯುತ್ ಕಂಬಗಳು, ಜಾಹೀರಾತು ಫಲಕಗಳು ಹಾಗೂ ಇತರೆ ಅಡ್ಡಿಪಡಿಗಳು ತೆರವುಗೊಳಿಸಲು ಕೈಗೊಂಡಿರುವ ಕ್ರಮಗಳೇನು ; ಈ ಕಾರ್ಯಾಚರಣೆಗಾಗಿ ಯಾವ ಯಾವ ಇಲಾಖೆಗಳೊಂದಿಗೆ ಸಮನ್ವಯ ಸಾಧಿಸಲಾಗುತ್ತಿದೆ ;

(ಇ) ಅಪಾಯಕಾರಿ ಮರಗಳು, ಕಟ್ಟಡಗಳು, ವಿದ್ಯುತ್ ಕಂಬಗಳು ಇತ್ಯಾದಿಗಳನ್ನು ತೆರವುಗೊಳಿಸುವ ವೆಚ್ಚವನ್ನು ಯಾರು ಭರಿಸುತ್ತಾರೆ ; (PWD/ವಿದ್ಯುತ್ ಇಲಾಖೆ/ಸ್ಥಳೀಯ ಸಂಸ್ಥೆ/ಖಾಸಗಿ ಜಾಗದ ಮಾಲೀಕರು) ಈ ಕುರಿತು ಸರ್ಕಾರದ ನಿಯಮಗಳು ಮತ್ತು ಮಾರ್ಗಸೂಚಿಗಳೇನು ;

(ಈ) ಕಳೆದ ೩ ವರ್ಷಗಳಲ್ಲಿ ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಯಲ್ಲಿ ರಸ್ತೆ ಬದಿಯ ಮರಗಳು ಹಾಗೂ ಇತರೆ ಅಪಾಯಕಾರಿ ಪರಿಸ್ಥಿತಿಗಳನ್ನು ನಿವಾರಿಸಲು ಕೈಗೊಂಡಿರುವ ಕ್ರಮಗಳ ವಿವರವೇನು ;

(ಉ) ರಸ್ತೆ ಸುರಕ್ಷತಾ ಕ್ರಮಗಳಿಗೆ ವಾರ್ಷಿಕವಾಗಿ ಎಷ್ಟು ಮೊತ್ತವನ್ನು ನಿಗದಿಪಡಿಸಲಾಗಿದೆ ; ಅದರಲ್ಲಿ ಕಳೆದ ಮೂರು ವರ್ಷಗಳಲ್ಲಿ ಎಷ್ಟು ಮೊತ್ತ ವೆಚ್ಚವಾಗಿದೆ ; ಅವುಗಳ ವಿವರವೇನು ?

## ಕರ್ನಾಟಕ ರಾಜ್ಯದಲ್ಲಿ ಸರ್ಕಾರಿ/ಕಂದಾಯ ಜಮೀನುಗಳ ಅತಿಕ್ರಮಣ ತೆರವುಗೊಳಿಸುವ ಕುರಿತು

**ಶ್ರೀ ಮಂಜುನಾಥ್ ಭಂಡಾರಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೧೮೨೪ (೨೧೧೨) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದಲ್ಲಿ ಕಂದಾಯ ಜಮೀನುಗಳ ಅತಿಕ್ರಮಣ ಗುರುತಿಸಲು ಮತ್ತು ತೆರವುಗೊಳಿಸುವ ಬಗ್ಗೆ ರಚಿಸಲಾದ ಸಮಿತಿಗಳು ಎಷ್ಟು; ಸಮಿತಿಗಳಿಂದ ನೀಡಲಾದ ಶಿಫಾರಸ್ಸುಗಳು ಎಷ್ಟು; ಅವುಗಳಲ್ಲಿ ಎಷ್ಟು ಶಿಫಾರಸ್ಸುಗಳನ್ನು ಸರ್ಕಾರ ಅನುಷ್ಠಾನಗೊಳಿಸಿದೆ ; ಉಳಿದ ಶಿಫಾರಸ್ಸುಗಳನ್ನು ಅನುಷ್ಠಾನಗೊಳಿಸದಿದ್ದರೆ ಅದಕ್ಕೆ ಕಾರಣವೇನು ;

(ಆ) ಕಳೆದ ಮೂರು ವರ್ಷಗಳಲ್ಲಿ ಪ್ರಸ್ತುತ ಜಾರಿಯಲ್ಲಿ ಇರುವ ಕಂದಾಯ ನಿಯಮಗಳನ್ವಯ ಸಕ್ಷಮ ಪ್ರಾಧಿಕಾರಿಗಳು ಎಷ್ಟು ಸರ್ಕಾರಿ ಜಮೀನಿನ ಅತಿಕ್ರಮಣವನ್ನು ಜಿಲ್ಲಾವಾರು ತೆರವುಗೊಳಿಸಿದ್ದಾರೆ ; ಇಂದಿಗೂ ಬಾಕಿ ಇರುವ ಅತಿಕ್ರಮಣ ಪ್ರಕರಣಗಳ ಸಂಖ್ಯೆ ಎಷ್ಟು; ಅವುಗಳನ್ನು ತೆರವುಗೊಳಿಸಲು ಸರ್ಕಾರವು ಯಾವುದೇ ಕಾಲಪರಿಧಿ ನಿಗದಿಪಡಿಸಿರುವುದೇ ; ಇದ್ದಲ್ಲಿ ಅದರ ವಿವರವೇನು ;

(ಇ) ಸಕ್ರಮಕ್ಕಾಗಿ ಸಲ್ಲಿಸಲಾದ ಅರ್ಜಿ ತಿರಸ್ಕೃತವಾದ ನಂತರ, ಸದರಿ ಜಮೀನಿನಲ್ಲಿ ಕಾಂಪೌಂಡ್ ನಿರ್ಮಾಣ, ತಂತಿಬೇಲಿ ಹಾಕುವುದು, ಕಟ್ಟಡ ನಿರ್ಮಾಣ, ಕೃಷಿ ಚಟುವಟಿಕೆ, ಸಿಸಿಟಿವಿ ಅಳವಡಿಕೆ, ವಿದ್ಯುಚ್ಛಕ್ತಿ ಸಂಪರ್ಕ, ಕೊಳವೆಬಾವಿ ಕೊರೆಸುವುದು ಮುಂತಾದ ಯಾವುದೇ ಅಭಿವೃದ್ಧಿ ಕಾರ್ಯಗಳನ್ನು ಕೈಗೊಳ್ಳಲು ಕಾನೂನುಬದ್ಧ ಅವಕಾಶವಿದೆಯೇ ; ಇಲ್ಲದಿದ್ದಲ್ಲಿ, ಇಂತಹ ಕೃತ್ಯಗಳು ಕಾನೂನುಬಾಹಿರವೆಂದು ಪರಿಗಣಿಸಲ್ಪಡುತ್ತವೆಯೇ ;

(ಈ) ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗಳಲ್ಲಿ ಇಂತಹ ದೂರು ಸ್ವೀಕರಿಸಿದ ಪ್ರಕರಣಗಳೆಷ್ಟು ; ಅವುಗಳಲ್ಲಿ ಎಷ್ಟು ಪ್ರಕರಣಗಳಲ್ಲಿ ಕಾನೂನು ಕ್ರಮ ಕೈಕೊಳ್ಳಲಾಗಿದೆ ; ಕ್ರಮ ಕೈಗೊಳ್ಳದಿದ್ದರೆ ಅದಕ್ಕೆ ಕಾರಣವೇನು ; ಇಂತಹ ಅತಿಕ್ರಮಣ ಹಾಗೂ ಕಾನೂನುಬಾಹಿರ ಅಭಿವೃದ್ಧಿ ಚಟುವಟಿಕೆಗಳನ್ನು ತಡೆಯಲು ಸರ್ಕಾರವು ಮುಂದಿನ ಯಾವ ಅವಧಿಯೊಳಗೆ ಸಮಗ್ರ ಕ್ರಮ ಕೈಗೊಳ್ಳಲಿದೆ ?

## ರಾಜ್ಯದಲ್ಲಿ ಕಂದಾಯ ದಾಖಲೆಗಳ ಇಂದೀಕರಣ ಮತ್ತು ಜಮೀನುಗಳ ಹಂಚಿಕೆ ಕುರಿತು

**ಶ್ರೀ ಮಂಜುನಾಥ್ ಭಂಡಾರಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೧೮೨೫ (೨೧೧೩) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಕರ್ನಾಟಕ ರಾಜ್ಯದಲ್ಲಿ ಕೃಷಿಯೇತರ ಉದ್ದೇಶಕ್ಕೆ ಭೂ ಪರಿವರ್ತನೆಗೊಂಡ ಜಮೀನುಗಳನ್ನು ಮತ್ತು ರಸ್ತೆ, ನಾಗಬನ, ಕಾಲು ದಾರಿ, ನೀರು ದಾರಿ ಇತ್ಯಾದಿ ಪರಂಬೋಕು ವಿವರಗಳನ್ನು ಪಹಣಿ ದಾಖಲೆಗಳಲ್ಲಿ ಇಂದೀಕರಿಸಿ ಭೂಬಳಕೆ ಬದಲಾಯಿಸಿ

ಸ್ಥಳೀಯ ಸಂಸ್ಥೆಗಳ ಆಸ್ತಿ/ತೆರಿಗೆ ವಹಿ ಹಾಗೂ ದಾಖಲಾತಿಗಳಿಗೆ ವರ್ಗಾವಣೆಯ ಪ್ರಕ್ರಿಯೆಗಳೇನು ಮತ್ತು ನಿಯಮಗಳಾವುವು ; ಇಲಾಖೆಗಳ ನಡುವೆ ಸಮನ್ವಯದ ಕೊರತೆಯನ್ನು ನಿವಾರಿಸಲು ಕೈಗೊಂಡ ಕ್ರಮಗಳೇನು ;

(ಆ) ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗಳಲ್ಲಿ ವಿವಿಧ ಯೋಜನೆಯಡಿ ಹಾಗೂ ಭೂ ಸುಧಾರಣೆ ಕಾಯ್ದೆಯಡಿ ಮಂಜೂರಾದ ಆದರೆ ಮಂಜೂರಿದಾರರು ಅಥವಾ ಅವರ ವಾರಸುದಾರರ ಸ್ವಾಧೀನದಲ್ಲಿರದ ಜಮೀನುಗಳ ಸಂಖ್ಯೆ ಮತ್ತು ವಿಸ್ತೀರ್ಣವೆಷ್ಟು ; ಅವು ಅನಧಿಕೃತವಾಗಿ ಬೇರೆಯವರ ಸ್ವಾಧೀನದಲ್ಲಿದ್ದು ಕಂದಾಯ ನಿಯಮಗಳಂತೆ ಅವುಗಳು ನಿಜವಾಗಿ ಯಾರಿಗೆ ಸೇರಬೇಕಾಗಿದೆ, ಈ ಬಗ್ಗೆ ಯಾವಾಗ ಕ್ರಮವಹಿಸಲಾಗುವುದು ;

(ಇ) ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗಳಲ್ಲಿ ೧೯೫೦ ರಿಂದ ಇಲ್ಲಿಯವರೆಗೆ ಯಾವ ಯಾವ (ಡಿಪ್ರೆಸ್ಡ್ ಕಮ್ಯೂನಿಟಿ) ನಿಮ್ನ ಸಮುದಾಯಗಳಿಗೆ ಎಷ್ಟು ಸಂಖ್ಯೆಯಲ್ಲಿ ಎಷ್ಟು ವಿಸ್ತೀರ್ಣದ ಜಮೀನು ವಿತರಿಸಲಾಗಿದೆ; ಹಕ್ಕುಪತ್ರದಲ್ಲಿರುವ ಷರತ್ತುಗಳೇನು ; ಅವು ಪ್ರಸ್ತುತ ಯಾರ ಸ್ವಾಧೀನದಲ್ಲಿವೆ, ಈ ಜಮೀನುಗಳನ್ನು ಭಾಗಶಃ ವಸತಿ/ವಾಣಿಜ್ಯ ಉದ್ದೇಶಗಳಿಗೆ ಭೂಪರಿವರ್ತನೆ ಮಾಡಲು ಇರುವ ತೊಡಕುಗಳೇನು ;

(ಈ) ಕಂದಾಯ ಇಲಾಖೆಯಿಂದ ಸರ್ಕಾರಿ ಜಾಗಗಳನ್ನು ಮನೆ ನಿವೇಶನ, ಅಕ್ರಮ–ಸಕ್ರಮ ಮುಂತಾದ ಉದ್ದೇಶಗಳಿಗೆ ತ್ವರಿತವಾಗಿ ಹಂಚಿಕೆಯಾಗುತ್ತಿದ್ದರೂ ಸಾರ್ವಜನಿಕ ಉದ್ದೇಶಗಳಿಗೆ ಅಗತ್ಯವಿರುವ ಜಮೀನುಗಳ ಹಂಚಿಕೆಯಲ್ಲಿ ಕುಂಟುನೆಪ/ಆಕ್ಷೇಪಣೆಗಳ ಆಧಾರದಲ್ಲಿ ವಿಳಂಬವಾಗುತ್ತಿರುವುದಕ್ಕೆ ಕಾರಣಗಳೇನು ; ಈ ಕುರಿತು ಸೂಕ್ತ ಮಾರ್ಗಸೂಚಿಗಳನ್ನು ಯಾವಾಗ ರಚಿಸಲಾಗುವುದು ;

(ಉ) ಇಲ್ಲಿಯವರೆಗೆ ವಿವಿಧ ಉದ್ದೇಶಗಳಿಗೆ ಹಂಚಿಕೆಯಾದ ಸರ್ಕಾರಿ ಜಮೀನೆಷ್ಟು; ಅದರಲ್ಲಿ ಮಂಜೂರು ಮಾಡಿದ ಉದ್ದೇಶಕ್ಕೆ ಬಳಕೆ ಮಾಡದ ಪ್ರಕರಣಗಳೆಷ್ಟು; ಈ ಪ್ರಕರಣಗಳಲ್ಲಿ ಮರುಸ್ವಾಧೀನ ಕ್ರಮ ಕೈಗೊಂಡಿದೆಯೇ ನಿರ್ದಿಷ್ಟ ಅವಧಿಯಲ್ಲಿ ಬಳಕೆ ಮಾಡದಿದ್ದರೆ ಮರುಸ್ವಾಧೀನ ಮಾಡಲು ಸರ್ಕಾರದಿಂದ ಕೈಗೊಂಡಿರುವ ಕ್ರಮಗಳೇನು ?

## ರಾಜ್ಯದಲ್ಲಿ Coastal Regulation Zone (CRZ) ವಲಯಕ್ಕೆ ಒಳಪಡುವ ಸರ್ವೆ ನಂಬರಿನ ಜಮೀನುಗಳಲ್ಲಿ ಮೀನು ಸಾಕಾಣಿಕಾ ಘಟಕಗಳನ್ನು ಸ್ಥಾಪಿಸುವ ಕುರಿತು

**ಶ್ರೀ ಮಂಜುನಾಥ್ ಭಂಡಾರಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೧೮೨೬ (೨೧೧೧) ಮಾನ್ಯ ಮೀನುಗಾರಿಕೆ, ಬಂದರು ಮತ್ತು ಒಳನಾಡು ಜಲಸಾರಿಗೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಕರಾವಳಿ CRZ ಪ್ರದೇಶಗಳಲ್ಲಿ ಮೀನುಗಾರಿಕೆ ಸಂಬಂಧಿತ ಚಟುವಟಿಕೆಗಳನ್ನು ಪ್ರಾರಂಭಿಸಲು ಪ್ರಸ್ತುತ ಜಾರಿಯಲ್ಲಿರುವ ನಿಯಮಗಳು ಮತ್ತು ಮಾರ್ಗಸೂಚಿಗಳೇನು ; CRZ ವಲಯದಲ್ಲಿ ಮೀನು ಸಾಕಾಣಿಕಾ ಮತ್ತು ಸಂಸ್ಕರಣಾ ಘಟಕಗಳನ್ನು ಸ್ಥಾಪಿಸಲು ಇರುವ ಪ್ರಮಾಣೀಕೃತ ಕಾರ್ಯವಿಧಾನಗಳೇನು ;

(ಆ) ಮೀನು ಸಾಕಾಣಿಕಾ ಘಟಕಗಳನ್ನು ಸ್ಥಾಪಿಸಲು ಕಡ್ಡಾಯವಾಗಿ ಯಾವ ಯಾವ ಇಲಾಖೆಗಳ/ಪ್ರಾಧಿಕಾರಗಳ ಅನುಮತಿ ಪಡೆಯಬೇಕು ; ಪ್ರಕ್ರಿಯೆಯ ಪ್ರಮಾಣೀಕೃತ (ಎಸ್ ಓ ಪಿ) ಕಾರ್ಯವಿಧಾನಗಳೇನು ;

(ಇ) ಕಳೆದ ೩ ವರ್ಷಗಳಲ್ಲಿ ಪ್ರಸ್ತುತ ಕರಾವಳಿ ಜಿಲ್ಲೆಗಳಾದ ದಕ್ಷಿಣ ಕನ್ನಡ, ಉಡುಪಿ ಮತ್ತು ಉತ್ತರ ಕನ್ನಡ ಜಿಲ್ಲೆಗಳಲ್ಲಿ ಎಷ್ಟು ಮೀನು ಸಾಕಾಣಿಕಾ ಘಟಕಗಳಿಗೆ ಅನುಮತಿ ನೀಡಲಾಗಿದೆ ; CRZ ನಿಯಮ ಉಲ್ಲಂಘಿಸಿ ಸ್ಥಾಪಿಸಲಾದ ಮೀನು ಸಾಕಾಣಿಕಾ ಘಟಕಗಳ ಸಂಖ್ಯೆ ಎಷ್ಟು; ಅವುಗಳ ವಿರುದ್ಧ ಕೈಗೊಂಡಿರುವ ಕ್ರಮಗಳೇನು ?

(ಈ) CRZ ವಲಯದಲ್ಲಿ ಪರಿಸರ ಸಂರಕ್ಷಣೆ ಹಾಗೂ ಸ್ಥಳೀಯ ಮೀನುಗಾರರ ಹಿತಾಸಕ್ತಿ ಕಾಪಾಡಲು ವಿವಿಧ ಇಲಾಖೆಗಳ ಸಮನ್ವಯದ ಮೂಲಕ ಕೈಗೊಂಡಿರುವ ನಿಯಂತ್ರಣ ಹಾಗೂ ಮೇಲ್ವಿಚಾರಣೆಯ ಕ್ರಮಗಳೇನು ?

## ಆರ್.ಟಿ.ಓ ಕಛೇರಿಗಳಿಂದ ಕೈಗೊಂಡಿರುವ ಕ್ರಮದ ಬಗ್ಗೆ

**ಶ್ರೀ ಎಂ. ನಾಗರಾಜು (ವಿಧಾನಸಭೆಯಿಂದ ಚುನಾಯಿತರಾದವರು) :–**

೧೮೨೭ (೨೦೫೮) ಮಾನ್ಯ ಸಾರಿಗೆ ಮತ್ತು ಮುಜರಾಯಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದಲ್ಲಿ ಎಷ್ಟು ಪ್ರಾದೇಶಿಕ ಸಾರಿಗೆ ಕಛೇರಿಗಳು ಮತ್ತು ಆರ್.ಟಿ.ಓ ಚೆಕ್ ಪೋಸ್ಟ್‌ಗಳು ಇವೆ ; ಇವು ಯಾವ ಯಾವ ಜಿಲ್ಲೆಗಳಲ್ಲಿ ಇವೆ ;

(ಆ) ಕಳೆದ ಮೂರು ವರ್ಷಗಳಲ್ಲಿ ಎಷ್ಟು ಚೆಕ್ ಪೋಸ್ಟ್ ಗಳು ಕಾರ್ಯನಿರ್ವಹಿಸುತ್ತಿದೆ ಮತ್ತು ಎಷ್ಟು ನಿಷ್ಕ್ರಿಯವಾಗಿವೆ ; (ಮಾಹಿತಿ ನೀಡುವುದು)

(ಇ) ರಾಜ್ಯದಲ್ಲಿ ಅನೇಕ ಹೊರ ರಾಜ್ಯದ (ತೆಲಂಗಾಣ, ಆಂಧ್ರ ಪ್ರದೇಶ, ತಮಿಳುನಾಡು, ಕೇರಳ, ಇತ್ಯಾದಿ) ದ್ವಿಚಕ್ರ ಮತ್ತು ನಾಲ್ಕು ಚಕ್ರ

ವಾಹನಗಳು ಕರ್ನಾಟಕದಲ್ಲಿ ಶಾಶ್ವತವಾಗಿ ಬಳಕೆಯಾಗುತ್ತಿದ್ದರೂ, ಕರ್ನಾಟಕದಲ್ಲಿ ಮರುನೋಂದಣಿ ಮಾಡದೇ ಮತ್ತು ಮೋಟಾರು ವಾಹನ ತೆರಿಗೆ ಪಾವತಿಸದೇ ಸಂಚರಿಸುತ್ತಿರುವ ಎಷ್ಟು ಪ್ರಕರಣಗಳು ಬೆಳಕಿಗೆ ಬಂದಿವೆ ; ಈ ಪ್ರಕರಣಗಳ ಕುರಿತು ಆರ್.ಟಿ.ಓ. ಕೈಗೊಂಡಿರುವ ಕ್ರಮವೇನು ;

(ಈ) ರಾಜ್ಯದ ಗಡಿಭಾಗದ ಚೆಕ್ ಪೋಸ್ಟ್‌ಗಳಲ್ಲಿ ಡಿಜಿಟಲ್ ಸ್ಕ್ಯಾನಿಂಗ್ ಮತ್ತು ವಾಹನಗಳ ಡೇಟಾಬೇಸ್‌ಗಳನ್ನು ಸಂಯೋಜಿಸುವ ವ್ಯವಸ್ಥೆ ಇದೆಯೇ ; ಟ್ರಾಫಿಕ್ ಪೊಲೀಸ್ ಮತ್ತು ಆರ್.ಟಿ.ಓ ನಡುವೆ ಡೇಟಾ ಹಂಚಿಕೆ ವ್ಯವಸ್ಥೆ ಪೂರ್ಣ ಪ್ರಮಾಣದಲ್ಲಿ ಜಾರಿಯಲ್ಲಿದೆಯೇ ?

## ಭೂ ದಾಖಲೆ ಮತ್ತು ಸರ್ವೆ ಯೋಜನೆ ಕುರಿತು

**ಶ್ರೀ ಎಂ. ನಾಗರಾಜು (ವಿಧಾನಸಭೆಯಿಂದ ಚುನಾಯಿತರಾದವರು) :–**

೧೮೨೮ (೨೦೬೦) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಕಳೆದ ೦೩ ವರ್ಷಗಳಲ್ಲಿ ರಾಜ್ಯದಲ್ಲಿ ಭೂ ದಾಖಲೆಯಲ್ಲಿ ನಡೆದಿರುವ ಅನಿಯಮಿತತೆಗಳ ಕುರಿತ ಪ್ರಕರಣಗಳು ಬೆಳಕಿಗೆ ಬಂದಿವೆಯೇ ; ಬಂದಿದ್ದಲ್ಲಿ, ಈ ಕುರಿತು ಸರ್ಕಾರ ಯಾವ ಕ್ರಮ ಕೈಗೊಂಡಿದೆ ; ಇದರಲ್ಲಿ ಯಾವ ಯಾವ ಅಧಿಕಾರಿಗಳು ಭಾಗಿಯಾಗಿದ್ದಾರೆ ಮತ್ತು ಈ ಅಧಿಕಾರಿಗಳ ವಿರುದ್ಧ ಸರ್ಕಾರದಿಂದ ಯಾವ ಕ್ರಮಗಳನ್ನು ಕೈಗೊಳ್ಳಲಾಗಿದೆ ;

(ಆ) ೨೦೨೫–೨೬ನೇ ಸಾಲಿನಲ್ಲಿ ಬೆಳಗಾವಿ, ಬೀದರ್ ಹಾಗೂ ಕಲಬುರಗಿ ಜಿಲ್ಲೆಗಳಲ್ಲಿ ಭೂ ದಾಖಲೆ ತಿದ್ದುಪಡಿ ಬಾಕಿ ಪ್ರಕರಣಗಳ ಸಂಖ್ಯೆ ಎಷ್ಟು ;

(ಇ) ಉತ್ತರ ಕರ್ನಾಟಕಕ್ಕೆ ವಿಶೇಷ ಭೂ ಸರ್ವೆ ಯೋಜನೆ ಘೋಷಿಸುವ ಯೋಜನೆ ಇದೆಯೇ ?

## ರೇಷ್ಮೆ ಘಟಕಗಳ ಬಗ್ಗೆ

**ಶ್ರೀ ಎಂ. ನಾಗರಾಜು (ವಿಧಾನಸಭೆಯಿಂದ ಚುನಾಯಿತರಾದವರು) :–**

೧೮೨೯ (೨೦೬೧) ಮಾನ್ಯ ಪಶುಸಂಗೋಪನೆ ಮತ್ತು ರೇಷ್ಮೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದಲ್ಲಿ ರೇಷ್ಮೆ ಕಾರ್ಖಾನೆ ಭೂಮಿಯಲ್ಲಿ ಕ್ರೀಡಾಂಗಣ ನಿರ್ಮಾಣದ ವಿರುದ್ಧ ಕರ್ನಾಟಕ ರೇಷ್ಮೆ ಉದ್ಯಮಗಳ ನಿಗಮ ನಿಯಮಿತ, ಟಿ.ನರಸಿಪುರದಲ್ಲಿ ಸಾವಿರಕ್ಕಿಂತ ಹೆಚ್ಚು ಕಾರ್ಮಿಕರು ನಡೆಸುತ್ತಿರುವ ಪ್ರತಿಭಟನೆ ಮತ್ತು ಇಲ್ಲಿಯ ೧೯೧೨ ಘಟಕಗಳ ಮುಚ್ಚುವಿಕೆಯನ್ನು ತಡೆಗಟ್ಟಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು ;

(ಆ) ಮೈಸೂರು ರೇಷ್ಮೆ ಸೀರೆಗಳ ಕೊರತೆಯನ್ನು ತಡೆಗಟ್ಟಲು ಮೈಸೂರು, ಚನ್ನಪಟ್ಟಣ ಮತ್ತು ಟಿ.ನರಸಿಪುರ ರೇಷ್ಮೆ ಘಟಕಗಳಲ್ಲಿ ಕಾರ್ಯಾಚರಣೆಯನ್ನು ತಕ್ಷಣ ಪುನಃಸ್ಥಾಪಿಸಲು ಸರ್ಕಾರದ ಯೋಜನೆಗಳು ಏನು ;

(ಇ) ರೈತರ ಲಾಭದ ಪ್ರಮಾಣವನ್ನು ಕುಗ್ಗಿಸುತ್ತಿರುವ ಹಿಪ್ಪು ನೇರಳೆ ಕೃಷಿಯ (Mulbery Cultivation) ವೆಚ್ಚವನ್ನು (ಸುಮಾರು ೫೦೦ ರೂ./ಕೆ.ಜಿ) ಕಡಿಮೆ ಮಾಡಲು ಸರ್ಕಾರ ಯಾವ ಕ್ರಮಗಳನ್ನು ತೆಗೆದುಕೊಳ್ಳುತ್ತಿದೆ ? (ಮಾಹಿತಿ ನೀಡುವುದು)

## ಒಳನಾಡು ಜಲಸಾರಿಗೆ ಕ್ಷೇತ್ರದಲ್ಲಿ ಕೈಗೊಂಡಿರುವ ಕ್ರಮದ ಬಗ್ಗೆ

**ಶ್ರೀ ಎಂ. ನಾಗರಾಜು (ವಿಧಾನಸಭೆಯಿಂದ ಚುನಾಯಿತರಾದವರು) :–**

೧೮೩೦ (೨೦೬೨) ಮಾನ್ಯ ಮೀನುಗಾರಿಕೆ, ಬಂದರು ಮತ್ತು ಒಳನಾಡು ಜಲಸಾರಿಗೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದ ದಕ್ಷಿಣ ಕನ್ನಡ, ಉಡುಪಿ ಮತ್ತು ಉತ್ತರ ಕನ್ನಡ ಜಿಲ್ಲೆಗಳ ೧೩ ಮೀನುಗಾರಿಕಾ ಬಂದುರಗಳಲ್ಲಿ ಹೂಳೆತ್ತುವಿಕೆ ಯೋಜನೆಯ ಪ್ರಸ್ತುತ ಹಂತವೇನು ; ಈ ಯೋಜನೆಗೆ ಎಷ್ಟು ಅನುದಾನ ಮೀಸಲಿಡಲಾಗಿತ್ತು ಮತ್ತು ಎಷ್ಟು ಅನುದಾನ ಬಿಡುಗಡೆ ಮಾಡಲಾಗಿದೆ ;

(ಆ) ಕರಾವಳಿ ಪ್ರದೇಶದಲ್ಲಿ ಒಳನಾಡು ನೀರಿನ ನಿರ್ವಹಣೆ ಮತ್ತು ಸಾರಿಗೆಯನ್ನು ಸುಧಾರಿಸಲು "ಪಶ್ಚಿಮ ವಾಹಿನಿ" ಯೋಜನೆಗೆ ಇಲಾಖೆಯು ಹೆಚ್ಚುವರಿ ಅನುದಾನವನ್ನು ಈ ಆಯವ್ಯಯದಲ್ಲಿ ಕೋರಿದೆಯೇ ;

(ಇ) ನೇತ್ರಾವತಿ ಮತ್ತು ಗೂರುಪಾರ್ ಹಿನ್ನೀರಿನಲ್ಲಿ ೧೭ ನಿಲ್ದಾಣಗಳನ್ನು ಒಳಗೊಂಡ ೩೦ ಕಿ.ಮೀ. ಉದ್ದದ ಮತ್ತು ಸುಮಾರು ೨೫೦೦ ಕೋಟಿ ರೂ. ವೆಚ್ಚದಲ್ಲಿ ನಿರ್ಮಿಸಲು ಯೋಜಿಸಿರುವ ರಾಜ್ಯದ ಮೊದಲ ವಾಟರ್ ಮೆಟ್ರೋ ಯೋಜನೆಯು ಪ್ರಸ್ತುತ ಹಂತವೇನು ? (ಮಾಹಿತಿ ನೀಡುವುದು)

## ಕಡಲ ತೀರ ಅಭಿವೃದ್ಧಿ ಕುರಿತು

**ಶ್ರೀ ಕೆ. ಪ್ರತಾಪ್‌ಸಿಂಹ ನಾಯಕ್ (ವಿಧಾನಸಭೆಯಿಂದ ಚುನಾಯಿತರಾದವರು) :–**

೧೮೩೧ (೨೦೭೬) ಮಾನ್ಯ ಮೀನುಗಾರಿಕೆ, ಬಂದರು ಮತ್ತು ಒಳನಾಡು ಜಲಸಾರಿಗೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :

(ಅ) ದಕ್ಷಿಣ ಕನ್ನಡ, ಉಡುಪಿ ಹಾಗೂ ಉತ್ತರ ಕನ್ನಡ ಜಿಲ್ಲಾ ವ್ಯಾಪ್ತಿಯಲ್ಲಿ ರಾಜ್ಯವು ಸುಮಾರು ೩೨೦ ಕಿ.ಮೀ ಕಡಲ ತೀರ ಪ್ರದೇಶವನ್ನು ಹೊಂದಿದೆ ; ಕಡಲ ತೀರ ಅಭಿವೃದ್ಧಿ ನಿಟ್ಟಿನಲ್ಲಿ ಮಾಸ್ಟರ್ ಪ್ಲ್ಯಾನ್ ಇನ್ನೂ ಅನುಷ್ಠಾನ ಆಗಿಲ್ಲದೇ ಇರುವುದರಿಂದ

ಈ ಪ್ರದೇಶದಲ್ಲಿ ಅಭಿವೃದ್ಧಿ ಮರೀಚಿಕೆಯಾಗಿಯೇ ಉಳಿದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ಬಂದಿದ್ದಲ್ಲಿ, ಕಡಲ ತೀರ ಅಭಿವೃದ್ಧಿ ನಿಟ್ಟಿನಲ್ಲಿ ಮಾಸ್ಟರ್ ಪ್ಲ್ಯಾನ್ ಅನುಷ್ಠಾನ ಮಾಡುವ ಯೋಜನೆ ಪ್ರಸ್ತುತ ಯಾವ ಹಂತದಲ್ಲಿದೆ ;

(ಇ) ವಿದೇಶಿ ಐಶಾರಾಮಿ ಹಡಗುಗಳು ಆಗಮಿಸುವ ರಾಜ್ಯದ ಏಕೈಕ ಬಂದರು ನವಮಂಗಳೂರು ಬಂದರು ಪ್ರಾಧಿಕಾರವಾಗಿದೆ, ಇಲ್ಲಿ ಸಾಕಷ್ಟು ಮೂಲಭೂತ ಸೌಲಭ್ಯಗಳ ಕೊರತೆ ಇದ್ದು ಅವಶ್ಯ ಸೌಲಭ್ಯಗಳನ್ನು ಕಲ್ಪಿಸುವ ನಿಟ್ಟಿನಲ್ಲಿ ಸರ್ಕಾರ ಇದುವರೆಗೆ ಯಾವುದೇ ಕ್ರಮವಹಿಸದೇ ಇರಲು ಕಾರಣವೇನು ;

(ಈ) ಯಾವ ಕಾಲಮಿತಿಯೊಳಗೆ ಕಡಲ ತೀರ ಅಭಿವೃದ್ಧಿ ನಿಟ್ಟಿನಲ್ಲಿ ಮಾಸ್ಟರ್ ಪ್ಲಾನ್ ಅನ್ನು ಸಂಪೂರ್ಣವಾಗಿ ಅನುಷ್ಠಾನಕ್ಕೆ ತರಲಾಗುವುದು ಹಾಗೂ ಮೂಲಭೂತ ಸೌಲಭ್ಯಗಳ ಕೊರತೆ ನೀಗಿಸಲು ಅಗತ್ಯ ಕ್ರಮ ಕೈಗೊಳ್ಳಲಾಗುವುದು ?

## ಕೃಷಿ ಜಮೀನನ್ನು ತುಂಡು ಭೂಮಿಗಳನ್ನಾಗಿ ಮಾಡಿ ಹೊಸ ಲೇಔಟ್ ನಿರ್ಮಾಣ ಮಾಡಿರುವ ಬಗ್ಗೆ

**ಶ್ರೀ ಕೆ. ಪ್ರತಾಪ್ ಸಿಂಹ ನಾಯಕ್ (ವಿಧಾನಸಭೆಯಿಂದ ಚುನಾಯಿತರಾದವರು) :–**

೧೮೩೨ (೨೦೭೭) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದಲ್ಲಿ ಹೊಸ ಲೇಔಟ್‌ಗಳನ್ನು ನಿರ್ಮಿಸುವ ಉದ್ದೇಶದಿಂದ ಕೃಷಿ ಜಮೀನನ್ನು ಉದ್ದೇಶಪೂರ್ವಕವಾಗಿ ತುಂಡು ಭೂಮಿಗಳನ್ನಾಗಿ ಮಾಡಿ ಮಾರಾಟ ಮಾಡುತ್ತಿರುವುದಕ್ಕೆ ಇನ್ನೂ ಸಂಪೂರ್ಣವಾಗಿ ಕಡಿವಾಣ ಇಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ಬಂದಿದ್ದಲ್ಲಿ, ರಾಜ್ಯದಲ್ಲಿ ಕೃಷಿ ಜಮೀನನ್ನು ಉದ್ದೇಶ ಪೂರ್ವಕವಾಗಿ ತುಂಡು ಭೂಮಿಗಳನ್ನಾಗಿ ಮಾಡಿ ಹೊಸ ಲೇಔಟ್‌ಗಳನ್ನು ನಿರ್ಮಿಸಿ ಮಾರಾಟ ಮಾಡಲಾಗಿರುವ ಎಷ್ಟು ಲೇಔಟ್‌ಗಳನ್ನು ಈಗಾಗಲೇ ಗುರುತಿಸಲಾಗಿದೆ ; ಸದರಿ ಲೇಔಟ್‌ಗಳಲ್ಲಿ ರಚನೆಯಾಗಿರುವ ನಿವೇಶನ ಸಂಖ್ಯೆ ಎಷ್ಟು ; (ಜಿಲ್ಲಾವಾರು, ತಾಲ್ಲೂಕುವಾರು ಸಂಪೂರ್ಣ ವಿವರ ನೀಡುವುದು)

(ಇ) ಸದರಿ ಲೇಔಟ್‌ಗಳಲ್ಲಿ ಈಗಾಗಲೇ ರಚನೆಯಾಗಿ ಮಾರಾಟವಾಗಿರುವ ಲಕ್ಷಾಂತರ ನಿವೇಶನಗಳ ಮಾನ್ಯತೆಗೆ ಸಂಬಂಧಿಸಿದಂತೆ ಸರ್ಕಾರದ ನಿಲುವೇನು ; (ಈ ಸಂಬಂಧ ಈಗಾಗಲೇ ಹೊರಡಿಸಿರುವ ಎಲ್ಲಾ ಆದೇಶಗಳ ಪ್ರತಿ ಒದಗಿಸುವುದು)

(ಈ) ಕೃಷಿ ಭೂಮಿಯನ್ನು ಪಿತ್ರಾರ್ಜಿತವಾಗಿ ಅಥವಾ ಅನುವಂಶಿಕವಾಗಿ ಸ್ವೀಕರಿಸಿದ ಹಕ್ಕು ಒಳಗೊಂಡ ಜಮೀನಿನ ವಿಭಾಗಕ್ಕೆ ೧೧ಇ ನಕ್ಷೆ ಕೋರಿ ಸಲ್ಲಿಕೆಯಾಗಿರುವ ಅರ್ಜಿಗಳ ಇತ್ಯರ್ಥಕ್ಕೆ ಪ್ರಸ್ತುತ ಅನುಸರಿಸುತ್ತಿರುವ ನಿಯಮ ಮತ್ತು ಮಾನದಂಡಗಳೇನು ? (ಈ ಸಂಬಂಧ ಹೊರಡಿಸಿರುವ ಎಲ್ಲಾ ಆದೇಶಗಳ ಪ್ರತಿ ಒದಗಿಸುವುದು)

## ಭೂ ಸುರಕ್ಷಾ ಯೋಜನೆ ಬಗ್ಗೆ

**ಶ್ರೀ ಕೆ. ಪ್ರತಾಪ್ ಸಿಂಹ ನಾಯಕ್ (ವಿಧಾನಸಭೆಯಿಂದ ಚುನಾಯಿತರಾದವರು) :–**

೧೮೩೩ (೨೦೭೮) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಭೂ ದಾಖಲೆಗಳನ್ನು ಪಡೆಯಲು ಜನರು ಕಂದಾಯ ಕಛೇರಿಗಳಿಗೆ ಅಲೆಯುವುದನ್ನು ತಪ್ಪಿಸಲು ರಾಜ್ಯದಲ್ಲಿ ಜಾರಿಗೆ ತಂದಿರುವ 'ಭೂ ಸುರಕ್ಷಾ ಯೋಜನೆ' ಸಂಪೂರ್ಣವಾಗಿ ಅನುಷ್ಠಾನಗೊಂಡಿದೆಯೇ ;

(ಆ) ಅನುಷ್ಠಾನಗೊಂಡಿದ್ದಲ್ಲಿ, 'ಭೂ ಸುರಕ್ಷಾ ಮತ್ತು ಕಂದಾಯ ದಾಖಲೆಗಳ ಗ್ರಂಥಾಲಯ ಯೋಜನೆ' ಯಲ್ಲಿ ರಾಜ್ಯದ ೨೩೬ ತಾಲ್ಲೂಕುಗಳಲ್ಲಿನ ಎಲ್ಲಾ ದಾಖಲೆಗಳನ್ನು ಈಗಾಗಲೇ ಸ್ಕ್ಯಾನ್ ಮಾಡಿ ಸಂಪೂರ್ಣವಾಗಿ ಡಿಜಿಟಲೀಕರಣ ಮಾಡಲಾಗಿದೆಯೇ ; (ಜಿಲ್ಲಾವಾರು, ತಾಲ್ಲೂಕುವಾರು ಪ್ರಗತಿಯ ಸಂಪೂರ್ಣ ವಿವರ ನೀಡುವುದು)

(ಇ) ಆನ್‌ಲೈನ್ ಅಟಲ್‌ಜೀ ಕೇಂದ್ರ ಹಾಗೂ ಗ್ರಾಮ ಪಂಚಾಯಿತಿಗಳಲ್ಲಿರುವ ಬಾಪೂಜಿ ಕೇಂದ್ರಗಳಲ್ಲಿ ದೃಢೀಕರಿಸಿದ ಭೂ ದಾಖಲೆಗಳನ್ನು ಪಡೆಯುವ ಅವಕಾಶವನ್ನು ಈಗಾಗಲೇ ಸಂಪೂರ್ಣವಾಗಿ ಜಾರಿಗೆ ತರಲಾಗಿದೆಯೇ ;

(ಈ) ಇಲ್ಲದಿದ್ದಲ್ಲಿ, ಯಾವ ಕಾಲಮಿತಿಯೊಳಗೆ, ರಾಜ್ಯದಲ್ಲಿ ಜನರು ಸಮೀಪದ ಅಟಲ್‌ಜೀ ಕೇಂದ್ರ, ನಾಡಕಛೇರಿಯಲ್ಲಿ ಅಥವಾ ಮನೆಯಲ್ಲೇ ಕುಳಿತು ಆನ್‌ಲೈನ್‌ನಲ್ಲಿ ಭೂ ದಾಖಲೆಗಳ ದೃಢೀಕರಿಸದ ಪ್ರತಿ ಪಡೆಯುವ ವ್ಯವಸ್ಥೆ ಕಲ್ಪಿಸಲಾಗುವುದು ?

## ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಭೂ ಪರಿವರ್ತನೆ ಸಮಸ್ಯೆ ಬಗ್ಗೆ

**ಶ್ರೀ ಕೆ. ಪ್ರತಾಪ್ ಸಿಂಹ ನಾಯಕ್ (ವಿಧಾನಸಭೆಯಿಂದ ಚುನಾಯಿತರಾದವರು) :–**

೧೮೩೪ (೨೦೭೪) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಭೂ ಪರಿವರ್ತನೆ ಮಾಡುವಾಗ ಸರ್ಕಾರಿ ರಸ್ತೆ ಸಂಪರ್ಕ ಇಲ್ಲದಿದ್ದ ಪಕ್ಷದಲ್ಲಿ ಜಮೀನು ಭೂ ಪರಿವರ್ತನೆ ಮಾಡಬಾರದು ಮತ್ತು ಭೂ ಪರಿವರ್ತನೆಗೊಳಿಸುವ ಅಲಿನೇಷನ್ ಪೂರ್ವ ನಕ್ಷೆಯಲ್ಲಿ ಸರ್ಕಾರಿ ಸಂಪರ್ಕ ರಸ್ತೆಯನ್ನು ತೋರಿಸಬೇಕು ಮತ್ತು ಯಾವುದೇ ಖಾಸಗಿ ಸಂಪರ್ಕ ರಸ್ತೆಯ ಬಗ್ಗೆ ತೋರಿಸಬಾರದು ಎಂಬ ಆದೇಶದಿಂದಾಗಿ ಸಾಕಷ್ಟು ಅರ್ಜಿದಾರರಿಗೆ ತೊಂದರೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ಬಂದಿದ್ದಲ್ಲಿ, ಜಮೀನಿನ ಒಂದು ಭಾಗದಲ್ಲಿ ಭೂ ಪರಿವರ್ತನೆಗೊಳಿಸುವ ಸಂದರ್ಭದಲ್ಲಿ ಸರ್ಕಾರಿ ರಸ್ತೆಯ ವ್ಯವಸ್ಥೆ ಇಲ್ಲದ ಜಮೀನಾಗಿದ್ದಲ್ಲಿ ಅರ್ಜಿದಾರರಿಗೆ ಅವರ ಜಮೀನು ಪರಿವರ್ತಿಸುವ ಅವಕಾಶವೇ ಇಲ್ಲದಂತಾಗಿ ಜಮೀನ್ನಿಗೆ ಸಂಪರ್ಕ ರಸ್ತೆ ಕಾಣಿಸದ ಪಕ್ಷದಲ್ಲಿ ಅವರು ಭೂ ಪರಿವರ್ತನೆಯಿಂದ ವಂಚಿತರಾಗುವ ಸಮಸ್ಯೆ ಅಧಿಕವಾಗಿರುವುದರಿಂದ ಇದನ್ನು ಪರಿಹರಿಸಲು ಸರ್ಕಾರ ಏನು ಕ್ರಮ ವಹಿಸಿದೆ ;

(ಇ) ದಕ್ಷಿಣ ಕನ್ನಡ ಜಿಲ್ಲೆಯ ಭೌಗೋಳಿಕ ಅಧ್ಯಯನ ಮತ್ತು ಜನಜೀವನ ವ್ಯವಸ್ಥೆಯನ್ನು ಪರಿಗಣಿಸಿ, ಭೂ ಪರಿವರ್ತನೆ ಮಾಡುವಾಗ ಸರ್ಕಾರಿ ರಸ್ತೆ ಸಂಪರ್ಕ ಇಲ್ಲದಿದ್ದ ಪಕ್ಷದಲ್ಲಿ ಹೊರಡಿಸಿರುವ ಆದೇಶವನ್ನು ಮರು ಪರಿಶೀಲಿಸಿ ಜನರಿಗೆ ಆಗುತ್ತಿದ್ದ ತೊಂದರೆಯನ್ನು ನಿವಾರಿಸಲು ಸರ್ಕಾರ ಸೂಕ್ತ ಹಾಗೂ ಅಗತ್ಯ ಕ್ರಮ ವಹಿಸುವುದೇ ?

## ಕಲಬುರಗಿ ಮತ್ತು ಯಾದಗಿರಿ ಜಿಲ್ಲೆಗಳಲ್ಲಿರುವ ರೈತರಿಗೆ ಪಶುಸಂಗೋಪನೆ ಇಲಾಖೆಯಿಂದ ಸಹಾಯಧನದ ಬಗ್ಗೆ

**ಶ್ರೀ ಬಿ.ಜಿ. ಪಾಟೀಲ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೧೮೩೫ (೨೧೧೮) ಮಾನ್ಯ ಪಶುಸಂಗೋಪನೆ ಮತ್ತು ರೇಷ್ಮೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಕಲಬುರಗಿ ಮತ್ತು ಯಾದಗಿರಿ ಜಿಲ್ಲೆಗಳಲ್ಲಿ ಎಷ್ಟು ರೈತರಿಗೆ ಹಸು, ಕುರಿ, ಮೇಕೆ ಹಾಗೂ ಕೋಳಿ ಸಾಕಾಣಿಕೆಗೆ ಅನುದಾನದ/ ಸಹಾಯಧನ ನೀಡಲಾಗಿದೆ ;

(ಆ) ಸದರಿ ಜಿಲ್ಲೆಗಳಲ್ಲಿ ಪಶುಸಂಗೋಪನಾ ಇಲಾಖೆಯು ಫಲಾನುಭವಿಗಳ ಆಯ್ಕೆಗೆ ಸಮಿತಿಯನ್ನು ರಚಿಸಲಾಗಿದೆಯೇ ; ರಚಿಸಿದ್ದಲ್ಲಿ, ಸದಸ್ಯರ ವಿವರ ಮತ್ತು ಸಮಿತಿಯ ಸಭೆಯ ವಿವರ ನೀಡುವುದು ;

(ಇ) ಕಳೆದ ೨ ವರ್ಷಗಳಲ್ಲಿ ಸದರಿ ಜಿಲ್ಲೆಗಳಲ್ಲಿ ಪಶುಸಂಗೋಪನಾ ಇಲಾಖೆಯವತಿಯಿಂದ ಹೈನುಗಾರಿಕೆ ಯೋಜನೆ ಅಡಿಯಲ್ಲಿ ಎಷ್ಟು ಮಹಿಳೆಯರಿಗೆ ಸಹಾಯಧನ ವಿತರಿಸಲಾಗಿದೆ ?

## ಕಲ್ಯಾಣ ಕರ್ನಾಟಕ ಸಾರಿಗೆ ನಿಗಮದಲ್ಲಿ ಕಾರ್ಯಾಚರಣೆಯಲ್ಲಿರುವ ಬಸ್ಸುಗಳ ಕುರಿತು

**ಶ್ರೀ ಬಿ.ಜಿ. ಪಾಟೀಲ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೧೮೩೬ (೨೧೧೯) ಮಾನ್ಯ ಸಾರಿಗೆ ಮತ್ತು ಮುಜರಾಯಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಕಲ್ಯಾಣ ಕರ್ನಾಟಕ ರಸ್ತೆ ಸಾರಿಗೆ ನಿಗಮದಲ್ಲಿ ಪ್ರಸ್ತುತ ಕಾರ್ಯಾಚರಣೆಯಲ್ಲಿರುವ ಬಸ್ಸುಗಳ ಸಂಖ್ಯೆ ಎಷ್ಟು ಹಾಗೂ ದೂರದ ಊರುಗಳಿಗೆ ಸಾರ್ವಜನಿಕರು ಪ್ರಯಾಣಿಸಲು ಸ್ಲೀಪರ್ ಬಸ್ಸುಗಳ ಸಂಖ್ಯೆ ಎಷ್ಟು ; ಸ್ಲೀಪರ್ ಬಸ್ಸುಗಳ ಕಾರ್ಯಾಚರಣೆಯ ಸಂಖ್ಯೆಯನ್ನು ಹೆಚ್ಚಳ ಮಾಡಲು ಸರ್ಕಾರ ಯಾವ ಕ್ರಮ ಕೈಗೊಳ್ಳುವುದು ; (ವಿವರ ನೀಡುವುದು)

(ಆ) ಕಲ್ಯಾಣ ಕರ್ನಾಟಕ ರಸ್ತೆ ಸಾರಿಗೆ ನಿಗಮದ ಬಸ್ಸುಗಳಿಗಿಂತ ಖಾಸಗಿ ಬಸ್ಸುಗಳು ಹೆಚ್ಚು ಕಾರ್ಯಾಚರಣೆ ಮಾಡುತ್ತಿರುವುದು ನಿಗಮದ ವೈಫಲ್ಯವಲ್ಲವೇ ; ಈ ವೈಫಲ್ಯಕ್ಕೆ ಕಾರಣವೇನು ;

(ಇ) ಕಲ್ಯಾಣ ಕರ್ನಾಟಕ ಭಾಗಕ್ಕೆ ಹೆಚ್ಚಿನ ಸ್ಲೀಪರ್ ಬಸ್ಸುಗಳನ್ನು ಮಂಜೂರು ಮಾಡಲು ಸರ್ಕಾರಕ್ಕೆ ಇರುವ ತೊಂದರೆಗಳೇನು ; (ವಿವರ ನೀಡುವುದು)

(ಈ) ೨೦೨೪–೨೫ನೇ ಸಾಲಿನಲ್ಲಿ ಎಷ್ಟು ಹೊಸ ಬಸ್ಸುಗಳನ್ನು ಖರೀದಿ ಮಾಡಲಾಗಿದೆ ; ಇವುಗಳಲ್ಲಿ ಡೀಸೆಲ್ ಮತ್ತು ಇವಿ ಬಸ್ಸುಗಳೆಷ್ಟು ? (ವಿವರ ನೀಡುವುದು)

## ಕಲಬುರಗಿ ಮತ್ತು ಯಾದಗಿರಿ ಜಿಲ್ಲೆಗಳಲ್ಲಿ ಗ್ರಾಮ ಪಂಚಾಯಿತಿಗಳಿಗೆ ಹಾಗೂ ಇತರೆ ಸಾರ್ವಜನಿಕ ಉದ್ದೇಶಗಳಿಗಾಗಿ ಜಮೀನು ಮಂಜೂರಾದ ಬಗ್ಗೆ

**ಶ್ರೀ ಬಿ.ಜಿ. ಪಾಟೀಲ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೧೮೩೭ (೨೧೨೦) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಕಲಬುರಗಿ ಮತ್ತು ಯಾದಗಿರಿ ಜಿಲ್ಲೆಗಳಲ್ಲಿರುವ ಗ್ರಾಮ ಪಂಚಾಯಿತಿಗಳ ಕಛೇರಿ ಹಾಗೂ ಇನ್ನಿತರ ವಿವಿಧ ಸಾರ್ವಜನಿಕ ಉದ್ದೇಶಕ್ಕಾಗಿ ಜಮೀನು ಮಂಜೂರಾತಿ ಕೋರಿ ಕಂದಾಯ ಇಲಾಖೆಗೆ ಯಾವುದಾದರು ಪ್ರಸ್ತಾವನೆಗಳ ಪೈಕಿ ಜಮೀನು ಮಂಜೂರಾತಿಗೊಳಿಸಲು ಬಾಕಿ ಇರುವ ಹಾಗೂ ತಿರಸ್ಕರಿಸಿರುವ ಪ್ರಸ್ತಾವನೆಗಳು ಎಷ್ಟು ; ಅವು ಯಾವುವು ; (ವಿವರ ನೀಡುವುದು)

(ಆ) ಗ್ರಾಮ ಪಂಚಾಯಿತಿಗಳಿಗೆ ಸಾರ್ವಜನಿಕ ಉದ್ದೇಶಕ್ಕಾಗಿ ಮಂಜೂರಾದ ಜಮೀನು, ಒತ್ತುವರಿ ಮಾಡಿಕೊಂಡಿರುವ ಪ್ರಕರಣಗಳ ಸಂಖ್ಯೆ ಎಷ್ಟು ; (ಸಂಕ್ಷಿಪ್ತ ವಿವರ ನೀಡುವುದು)

(ಇ) ಯಾವ ಉದ್ದೇಶಕ್ಕಾಗಿ ಜಮೀನು ಮಂಜೂರು ಮಾಡಲಾಗಿದೆಯೋ ಅದೇ ಉದ್ದೇಶಕ್ಕೆ ಬಳಸಿಕೊಳ್ಳುವುದನ್ನು ಖಚಿತ ಪಡಿಸಲು ಅನುಸರಿಸುವ ಕ್ರಮಗಳಾವುವು ?

## ಬಾಗಲಕೋಟೆ ಜಿಲ್ಲೆಯಲ್ಲಿ ಅಕ್ರಮವಾಗಿ ಮೀನುಗಾರಿಕೆ ಮಾಡುತ್ತಿರುವವರನ್ನು ತಡೆಗಟ್ಟುವ ಕುರಿತು

**ಶ್ರೀ ಪಿ.ಹೆಚ್.ಪೂಜಾರ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೧೮೩೮ (೨೦೬೩) ಮಾನ್ಯ ಮೀನುಗಾರಿಕೆ, ಬಂದರು ಮತ್ತು ಒಳನಾಡು ಜಲಸಾರಿಗೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಆಲಮಟ್ಟಿ ಜಲಾಶಯದ ಹಿನ್ನೀರಿನಲ್ಲಿ ಆಂಧ್ರ ಪ್ರದೇಶ ಮತ್ತು ಹೊಸಪೇಟೆಯ ಮೀನುಗಾರರು ತಾವುಗಳು ಸ್ಥಳೀಯವಾಗಿ ವಾಸಿಸುತ್ತಿದ್ದೇವೆಂದು ಸಕ್ಷಮ ಪ್ರಾಧಿಕಾರಗಳಿಂದ ವಾಸಸ್ಥಳದ ಖೊಟ್ಟಿ ದಾಖಲೆಗಳನ್ನು ಪಡೆದುಕೊಂಡು ಅಕ್ರಮವಾಗಿ ಮೀನುಗಾರಿಕೆ ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ಬಂದಿದ್ದರೆ, ಈ ನಿಟ್ಟಿನಲ್ಲಿ ಅಕ್ರಮವಾಗಿ ಮೀನುಗಾರಿಕೆ ತಡೆಗಟ್ಟಲು ಕೈಗೊಂಡಿರುವ ಕ್ರಮಗಳೇನು ; ಅಕ್ರಮವಾಗಿ/ಕಾನೂನುಬಾಹಿರವಾಗಿ ದಾಖಲೆಗಳನ್ನು ನೀಡುತ್ತಿರುವ ಅಧಿಕಾರಿಗಳ ಮೇಲೆ ಕೈಗೊಂಡಿರುವ ಕ್ರಮಗಳೇನು ;

(ಇ) ಸದರಿ ಪ್ರದೇಶದಲ್ಲಿ ಮೀನುಗಾರಿಕೆಯಿಂದ ಕೋಟ್ಯಾಂತರ ರೂಪಾಯಿ ವ್ಯವಹಾರ ನಡೆದಿದ್ದು ಕಡಿಮೆ ರಾಯಧನ ಸಂಗ್ರಹವಾಗುತ್ತಿದೆ ಎಂಬ ಅಂಶ ಸರ್ಕಾರದ ಗಮನಕ್ಕೆ ಬಂದಿದೆಯೇ, ಬಂದಿದ್ದರೆ, ರಾಯಧನ ಸಂಗ್ರಹ ಹೆಚ್ಚಳವಾಗಲು ಪ್ರತಿ ಕೆಜಿ ಆಧಾರದ ಮೇಲೆ ರಾಯಧನ ನಿಗದಿ ಮಾಡುವಂತೆ ಸರ್ಕಾರವು ಕಾನೂನು ಜಾರಿಗೆ ತರುವುದೇ ; ತರುವುದಾದರೇ ಯಾವ ಕಾಲಮಿತಿಯಲ್ಲಿ ತರಲಾಗುವುದು ;

(ಈ) ಸದರಿ ಪ್ರದೇಶದಲ್ಲಿ ೨೦೨೩-೨೪ ರಿಂದ ೨೦೨೫-೨೦೨೬ನೇ ಸಾಲಿಗೆ ಸದರಿ ಪ್ರದೇಶದಲ್ಲಿನ ಮೀನುಗಾರಿಕೆಯಿಂದ ಸಂಗ್ರಹವಾಗಿರುವ ರಾಯಧನ ಎಷ್ಟು ? (ವರ್ಷವಾರು ಪ್ರತ್ಯೇಕವಾಗಿ ವಿವರ ನೀಡುವುದು)

## ಬಾಗಲಕೋಟೆ ಜಿಲ್ಲೆಯಲ್ಲಿ ಮಳೆಯ ಕಾರಣದಿಂದ ಹಾಳಾಗಿರುವ ರಸ್ತೆ ಬಗ್ಗೆ

**ಶ್ರೀ ಪಿ.ಹೆಚ್.ಪೂಜಾರ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೧೮೩೯ (೨೦೬೫) ಮಾನ್ಯ ಲೋಕೋಪಯೋಗಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಬಾಗಲಕೋಟೆ ಜಿಲ್ಲೆಯಲ್ಲಿ ೨೦೨೪–೨೫ ಹಾಗೂ ೨೦೨೫–೨೬ನೇ ಸಾಲಿನ ವರ್ಷದ ಮಳೆಗಾಲದಲ್ಲಿ ವಿಪರೀತವಾಗಿ ಮಳೆ ಸುರಿದು ಬಹುತೇಕ ರಸ್ತೆಗಳು ಹಾಳಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಬಂದಿದ್ದಲ್ಲಿ, ಸದರಿ ರಸ್ತೆಗಳ ದುರಸ್ತಿಗೆ ಸರ್ಕಾರ ಅಂದಾಜಿಸಿರುವ ಮೊತ್ತವೆಷ್ಟು ; (ತಾಲ್ಲೂಕುವಾರು ವಿವರವಾದ ಮಾಹಿತಿ ನೀಡುವುದು)

(ಆ) ಸದರಿ ಸಾಲಿನಲ್ಲಿ ಮಳೆ ಸುರಿದು ಹಾಳಾಗಿರುವ ರಸ್ತೆ ಅಭಿವೃದ್ಧಿಗಾಗಿ ಸರ್ಕಾರ ಕೈಗೊಂಡಿರುವ ಕಾಮಗಾರಿಗಳು ಯಾವುವು ; (ತಾಲ್ಲೂಕುವಾರು ವಿವರವಾದ ಮಾಹಿತಿ ನೀಡುವುದು)

(ಇ) ಪೂರ್ಣಗೊಂಡಿರುವ ಕಾಮಗಾರಿಗಳು ಹಾಗೂ ಬಾಕಿ ಉಳಿದಿರುವ ಕಾಮಗಾರಿಗಳು ಎಷ್ಟು ; ಬಾಕಿ ಉಳಿದಿರುವ ಕಾಮಗಾರಿಗಳನ್ನು ಯಾವ ಕಾಲಮಿತಿಯೊಳಗೆ ಪೂರ್ಣಗೊಳಿಸಲಾಗುವುದು ? (ಸಂಪೂರ್ಣ ಮಾಹಿತಿ ನೀಡುವುದು)

## ರಾಜ್ಯದಲ್ಲಿ ಹಾಗೂ ಅವಳಿ ಜಿಲ್ಲೆಗಳಲ್ಲಿ ಪೈಕಿ ಪಹಣಿಗಳ ತಿದ್ದುಪಡಿ ಮಾಡದೇ ಸಾರ್ವಜನಿಕರು ಅನುಭವಿಸುತ್ತಿರುವ ಸಮಸ್ಯೆಗಳ ಕುರಿತು

**ಶ್ರೀ ಪಿ.ಹೆಚ್.ಪೂಜಾರ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೧೮೪೦ (೨೦೬೬) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದಲ್ಲಿರುವ ಪೈಕಿ ಪಹಣಿಗಳ ಸಂಖ್ಯೆ ಎಷ್ಟು ; (ಜಿಲ್ಲಾವಾರು ಹಾಗೂ ತಾಲ್ಲೂಕುವಾರು ಮಾಹಿತಿ ನೀಡುವುದು)

(ಆ) ಬಾಗಲಕೋಟೆ ಮತ್ತು ವಿಜಯಪುರ ಜಿಲ್ಲೆಯಲ್ಲಿ ಇರುವ ಪೈಕಿ ಪಹಣಿಗಳ ಸಂಖ್ಯೆ ಎಷ್ಟು ; (ತಾಲ್ಲೂಕುವಾರು ಹಾಗೂ ಗ್ರಾಮಾಂತರವಾರು ಮಾಹಿತಿ ನೀಡುವುದು)

(ಇ) ಪೈಕಿ ಪಹಣಿಗಳನ್ನು ಆಕಾರ್ ಬಂದ್‌ನೊಂದಿಗೆ ಹೊಂದಿಸಿ ಪಹಣಿ ತಿದ್ದುಪಡಿ ಮಾಡದೇ ಇರುವುದರಿಂದ ಸಾರ್ವಜನಿಕರು ಅನುಭವಿಸುತ್ತಿರುವ ಸಮಸ್ಯೆಗಳು ಸರ್ಕಾರದ ಗಮನಕ್ಕೆ ಬಂದಿದೆಯೇ ; ಬಂದಿದ್ದರೆ, ಸರ್ಕಾರವು ಕೈಗೊಂಡಿರುವ ಕ್ರಮಗಳೇನು ; (ವಿವರವಾಗಿ ತಿಳಿಸುವುದು)

(ಈ) ಬಾಕಿ ಇರುವ ಪೈಕಿ ಪಹಣಿಗಳನ್ನು ಆಕಾರ್ ಬಂದ್‌ನೊಂದಿಗೆ ಹೊಂದಿಕೆ ಮಾಡಿ ಯಾವ ಕಾಲಮಿತಿಯೊಳಗೆ ಪಹಣಿಗಳನ್ನು ತಿದ್ದುಪಡಿ ಮಾಡಲಾಗುವುದು ? (ವಿವರವಾದ ಮಾಹಿತಿ ಒದಗಿಸುವುದು)

## ಸಾರಿಗೆ ಸಂಸ್ಥೆಯ ನೌಕರರಿಗೆ ೩೮ ತಿಂಗಳ ಹಿಂಬಾಕಿ ವೇತನ ನೀಡದೇ ಇರುವ ಬಗ್ಗೆ

**ಶ್ರೀ ಪಿ.ಹೆಚ್. ಪೂಜಾರ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೧೮೪೧ (೨೦೬೭) ಮಾನ್ಯ ಸಾರಿಗೆ ಮತ್ತು ಮುಜರಾಯಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಶಕ್ತಿ ಯೋಜನೆ ಜಾರಿಯಾದ ದಿನದಿಂದ ಇಲ್ಲಿಯವರೆಗೆ ಸರ್ಕಾರದಿಂದ ಸಾರಿಗೆ ಸಂಸ್ಥೆಯ ನಾಲ್ಕು ನಿಗಮಗಳಿಗೆ ಬಿಡುಗಡೆಯಾದ ಹಣವೆಷ್ಟು ; ಬಿಡುಗಡೆಗೆ ಬಾಕಿ ಇರುವ ಹಣವೆಷ್ಟು ; (ಮಾಹಿತಿಯನ್ನು ನಿಗಮವಾರು ಪ್ರತ್ಯೇಕವಾಗಿ ನೀಡುವುದು)

(ಆ) ಸರ್ಕಾರದಿಂದ ಸರಿಯಾದ ಸಮಯಕ್ಕೆ ಸಂಸ್ಥೆಗೆ ಹಣ ಬಾರದೆ ಇರುವುದರಿಂದ ಸಾರಿಗೆ ಸಂಸ್ಥೆಯ ದಿನನಿತ್ಯದ ಕಾರ್ಯ ಚಟುವಟಿಕೆಗಳಿಗೆ ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಬಂದಿದ್ದಲ್ಲಿ, ಸದರಿ ಸಮಸ್ಯೆಯನ್ನು ಪರಿಹರಿಸಲು ಕೈಗೊಂಡಿರುವ ಕ್ರಮಗಳೇನು ;

(ಇ) ಸಾರಿಗೆ ಸಂಸ್ಥೆಯ ನೌಕರರಿಗೆ ೩೮ ತಿಂಗಳುಗಳ ಹಿಂಬಾಕಿ ವೇತನ ನೀಡದೆ ಇರುವ ವಿಷಯ ಸರ್ಕಾರದ ಗಮನಕ್ಕೆ ಬಂದಿದೆಯೇ ; ಬಂದಿದ್ದಲ್ಲಿ, ಹಿಂಬಾಕಿ ವೇತನವನ್ನು ಬಿಡುಗಡೆ ಮಾಡಲು ಕೈಗೊಂಡಿರುವ ಕ್ರಮಗಳೇನು ; (ವಿವರವಾಗಿ ತಿಳಿಸುವುದು)

(ಈ) ಸಾರಿಗೆ ಸಂಸ್ಥೆಯು ನೌಕರರಿಗೆ ಸಕಾಲದಲ್ಲಿ ವೇತನ ಪರಿಷ್ಕರಣೆಯಾಗದೇ ಇರುವ ವಿಷಯ ಸರ್ಕಾರದ ಗಮನಕ್ಕೆ ಬಂದಿದೆಯೇ ; ಬಂದಿದ್ದಲ್ಲಿ, ವೇತನ ಪರಿಷ್ಕರಣೆ ಮಾಡಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು ?

## ಧಾರವಾಡ ಜಿಲ್ಲೆಗೆ ಲೋಕೋಪಯೋಗಿ ಇಲಾಖೆಯಡಿ ಕೈಗೊಂಡಿರುವ ಕಾಮಗಾರಿಗಳ ಬಗ್ಗೆ

**ಶ್ರೀ ಪ್ರದೀಪ್ ಶೆಟ್ಟರ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೧೮೪೨ (೨೧೪೦) ಮಾನ್ಯ ಲೋಕೋಪಯೋಗಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಧಾರವಾಡ ನಗರ ಪ್ರದೇಶದಲ್ಲಿ ಲೋಕೋಪಯೋಗಿ ಇಲಾಖೆಯಡಿ ಕೈಗೊಂಡಿರುವ ಕಾಮಗಾರಿಗಳ ಸಂಖ್ಯೆ ಎಷ್ಟು ಹಾಗೂ ಸದರಿ ಕಾಮಗಾರಿಗಳಿಗೆ ಬಿಡುಗಡೆಯಾಗಿರುವ ಅನುದಾನ ಎಷ್ಟು: (ವಿಧಾನಸಭಾ ಕ್ಷೇತ್ರವಾರು ಸಂಕ್ಷಿಪ್ತ ಮಾಹಿತಿ ನೀಡುವುದು)

(ಆ) ಕಳೆದ ಮೂರು ವರ್ಷದಿಂದ ಹುಬ್ಬಳ್ಳಿ ಸೆಂಟ್ರಲ್ ವಿಧಾನಸಭಾ ಕ್ಷೇತ್ರಕ್ಕೆ ಸದರಿ ಇಲಾಖೆಯಡಿ ಮಹಾನಗರ ಪಾಲಿಕೆಯಲ್ಲಿ

ಕೈಗೊಂಡಿರುವ ಕಾಮಗಾರಿಗಳು ಯಾವುವು ಹಾಗೂ ಸದರಿ ಕಾಮಗಾರಿಗಳಡಿ ಮಂಜೂರು ಮಾಡಲಾಗಿರುವ ಅನುದಾನ ಎಷ್ಟು ?

## ಇನಾಂ ದತ್ತಾತ್ರೇಯ ದೇವಸ್ಥಾನಗಳ ಆಸ್ತಿಗಳನ್ನು ಅಕ್ರಮವಾಗಿ ಪರಭಾರೆ ಮಾಡಿರುವ ಬಗ್ಗೆ

**ಶ್ರೀ ಸಿ.ಟಿ.ರವಿ (ವಿಧಾನಸಭೆಯಿಂದ ಚುನಾಯಿತರಾದವರು) :–**

೧೮೪೩ (೨೦೧೭) ಮಾನ್ಯ ಸಾರಿಗೆ ಮತ್ತು ಮುಜರಾಯಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಚಿಕ್ಕಮಗಳೂರು ಜಿಲ್ಲೆ, ಚಿಕ್ಕಮಗಳೂರು ತಾಲ್ಲೂಕು, ಇನಾಂ ದತ್ತಾತ್ರೇಯ ಪೀಠಕ್ಕೆ ಸಂಬಂಧಿಸಿದ ಆಸ್ತಿಗಳನ್ನು ಅಕ್ರಮವಾಗಿ ಪರಭಾರೆ ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ಯಾವ ಯಾವ ಆಸ್ತಿಗಳು ಇದುವರೆಗೂ ಪರಭಾರೆ ಆಗಿದೆ ಹಾಗೂ ಯಾರು ಈ ಆಸ್ತಿಗಳ ಪರಭಾರೆ ಮಾಡಿದ್ದಾರೆ :

(ಇ) ದತ್ತಾತ್ರೇಯ ಪೀಠಕ್ಕೆ ಸಂಬಂಧಿಸಿದ ಆಸ್ತಿಗಳನ್ನು ಸಂರಕ್ಷಿಸಲು ಸರ್ಕಾರ ಯಾವ ಕ್ರಮ ಕೈಗೊಂಡಿದೆ ; ಅಕ್ರಮವಾಗಿ ಪರಭಾರೆಯಾಗಿರುವ ಆಸ್ತಿಗಳನ್ನು ಸರ್ಕಾರದ ವಶಕ್ಕೆ ಪಡೆಯಲು ಸರ್ಕಾರ ಕ್ರಮ ಕೈಗೊಂಡಿದೆಯೇ ; (ವಿವರ ಒದಗಿಸುವುದು)

(ಈ) ಕಳೆದ ೩ ವರ್ಷಗಳಲ್ಲಿ ಇನಾಂ ದತ್ತಾತ್ರೇಯ ಪೀಠಕ್ಕೆ ಹುಂಡಿ ಹಾಗೂ ಇತರೆ ಮೂಲಗಳಿಂದ ಸಂಗ್ರಹವಾಗಿರುವ ಹಣ ಹಾಗೂ ಇತರೆ ವಸ್ತುಗಳು ಎಷ್ಟು ; ಇದರಲ್ಲಿ ಎಷ್ಟು ಹಣವನ್ನು ಯಾವ ಯಾವ ಕಾರಣಕ್ಕಾಗಿ ಉಪಯೋಗಿಸಲಾಗಿದೆ ; ಬಾಕಿ ಇರುವ ಹಣ ಹಾಗೂ ಇತರೆ ವಸ್ತುಗಳು ಎಷ್ಟು ಹಾಗೂ ಇದನ್ನು ಎಲ್ಲಿ ಸಂರಕ್ಷಿಸಿಡಲಾಗಿದೆ ? (ವಿವರ ಒದಗಿಸುವುದು)

## ರಾಜ್ಯದಲ್ಲಿನ ಮದರಸಾಗಳಲ್ಲಿ ಬೋಧನೆ ಮಾಡುತ್ತಿರುವ ಪಠ್ಯಕ್ರಮವನ್ನು ಪರಿಶೀಲಿಸುವ ಬಗ್ಗೆ

**ಶ್ರೀ ಸಿ.ಟಿ.ರವಿ (ವಿಧಾನಸಭೆಯಿಂದ ಚುನಾಯಿತರಾದವರು) :–**

೧೮೪೪ (೨೦೧೮) ಮಾನ್ಯ ವಸತಿ, ವಕ್ಫ್ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದಲ್ಲಿ ಒಟ್ಟು ಎಷ್ಟು ಮದರಸಾಗಳು ಇವೆ ; ಇಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳ ಸಂಖ್ಯೆ ಎಷ್ಟು ; (ಜಿಲ್ಲಾವಾರು ವಿವರ ನೀಡುವುದು)

(ಆ) ಮದರಸಾಗಳನ್ನು ನಡೆಸಲು ಸರ್ಕಾರ ಅನುಮತಿ ನೀಡಿದೆಯೇ ; ಈ ಮದರಸಾಗಳು ನೋಂದಣಿ ಆಗಿದೆಯೇ ; ಹಾಗದಿದ್ದಲ್ಲಿ, ಮದರಸಾಗಳನ್ನು ನೋಂದಣಿ ಮಾಡುವ ಕುರಿತು ಸರ್ಕಾರ ಕ್ರಮ ಕೈಗೊಳ್ಳುವುದೇ ;

(ಇ) ಮದರಸಾಗಳಲ್ಲಿ ಯಾವ ರೀತಿಯ ಶಿಕ್ಷಣ ನೀಡಲಾಗುತ್ತಿದೆ ; ಬೋಧಿಸುತ್ತಿರುವ ಪಠ್ಯಕ್ರಮವೇನು ;

(ಈ) ಮದರಸಾಗಳಲ್ಲಿ ಯಾವ ರೀತಿಯ ಶಿಕ್ಷಣ ನೀಡಲಾಗುತ್ತಿದೆ ಎಂಬ ಕುರಿತು ಸರ್ಕಾರ ಪರಿಶೀಲನೆ ನಡಸಿದೆಯೇ ; ಇದರ ಅಗತ್ಯತೆಯನ್ನು ಸರ್ಕಾರ ಮನಗಂಡಿದೆಯೇ ; ಹಾಗಿದ್ದಲ್ಲಿ, ಪರಿಶೀಲನೆ ನಡೆಸುವ ಕುರಿತು ಸರ್ಕಾರ ಕ್ರಮ ಕೈಗೊಳ್ಳುವುದೇ ;

(ಉ) ಮದರಸಾಗಳು ಹಾಗೂ ಮದರಸಾಗಳಲ್ಲಿ ನೀಡುತ್ತಿರುವ ಶಿಕ್ಷಣದ ಕುರಿತು ಕ್ರಮ ಕೈಗೊಳ್ಳುವ ಬಗ್ಗೆ ಸರ್ಕಾರದ ನಿಲುವೇನು ?

## ಇ–ಸ್ವತ್ತು ವಿತರಣೆ ಆರಂಭವಾದ ಮೇಲೆ ಆಸ್ತಿ ನೋಂದಣಿ ಕುಂಠಿತವಾಗಿರುವ ಬಗ್ಗೆ

**ಶ್ರೀ ಸಿ.ಟಿ.ರವಿ (ವಿಧಾನಸಭೆಯಿಂದ ಚುನಾಯಿತರಾದವರು) :–**

೧೮೪೫ (೨೦೧೯) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯಾದ್ಯಂತ ನಗರ, ಪಟ್ಟಣ, ಗ್ರಾಮೀಣ ಸ್ಥಳೀಯ ಸಂಸ್ಥೆಗಳ ವ್ಯಾಪ್ತಿಯ ಆಸ್ತಿಗಳಿಗೆ ಇ–ಸ್ವತ್ತು ವಿತರಿಸಲು ನಿರ್ಧರಿಸಿದ ಉದ್ದೇಶವೇನು ; ಈ ಪ್ರಕ್ರಿಯೆ ಯಾವ ಹಂತದಲ್ಲಿದೆ ; ಈವರೆಗೆ ಸಾಧಿಸಿರುವ ಪ್ರಗತಿ ಎಷ್ಟು ;

(ಆ) ಇ–ಸ್ವತ್ತು ೨.೦ ತಂತ್ರಾಂಶದಲ್ಲಿ ತಾಂತ್ರಿಕ ದೋಷಗಳು ಕಾಣಿಸಿಕೊಂಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಇ) ತಂತ್ರಾಂಶದಲ್ಲಿ ತಾಂತ್ರಿಕ ದೋಷಗಳು, ಸರ್ವರ್ ಡೌನ್ ಕಾರಣ ಆಸ್ತಿ ಮಾಲೀಕರಿಗೆ ತೊಂದರೆಯುಂಟಾಗಿ ಆಸ್ತಿ ನೋಂದಣಿ ವಹಿವಾಟು ಕುಸಿತಗೊಂಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ವಹಿವಾಟು ಕುಸಿತದಿಂದ ಆಗಿರುವ ನಷ್ಟ ಎಷ್ಟು ;

(ಈ) ಸಮಸ್ಯೆ ಪರಿಹಾರಕ್ಕೆ ಸರ್ಕಾರ ಯಾವ ಕ್ರಮ ಕೈಗೊಂಡಿದೆ ?

## ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮದಿಂದ ಪಡೆದಿರುವ ಸಾಲದ ಮರುಪಾವತಿ ಬಗ್ಗೆ

**ಶ್ರೀ ಸಿ.ಟಿ.ರವಿ (ವಿಧಾನಸಭೆಯಿಂದ ಚುನಾಯಿತರಾದವರು) :–**

೧೮೪೬ (೨೦೨೦) ಮಾನ್ಯ ವಸತಿ, ವಕ್ಫ್ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಅಲ್ಪಸಂಖ್ಯಾತ ಅಭಿವೃದ್ಧಿ ನಿಗಮದಿಂದ ಎಷ್ಟು ಜನ ಸಾಲ ಪಡೆದಿದ್ದಾರೆ ; ಸಾಲದ ಒಟ್ಟು ಮೊತ್ತ ಮತ್ತು ಬಡ್ಡಿ ಎಷ್ಟು; (ಫಲಾನುಭವಿಗಳ ಪಟ್ಟಿಯನ್ನು ಜಿಲ್ಲಾವಾರು ನೀಡುವುದು)

(ಆ) ಈ ಪೈಕಿ ಎಷ್ಟು ಸಾಲ ಮರುಪಾವತಿ ಆಗಿದೆ ; ಒಟ್ಟು ಮೊತ್ತ ಎಷ್ಟು ; (ಜಿಲ್ಲಾವಾರು ವಿವರ ನೀಡುವುದು)

(ಇ) ಕಳೆದ ೩ ವರ್ಷದಿಂದ ಎಷ್ಟು ಜನರಿಗೆ ನಿಗಮದ ವತಿಯಿಂದ ಸಾಲ ನೀಡಲಾಗಿದೆ ; ಈ ಪೈಕಿ ಎಷ್ಟು ಸಾಲ ಮರುಪಾವತಿ ಆಗಿದೆ ; (ಜಿಲ್ಲಾವಾರು ಫಲಾನುಭವಿಗಳ ವಿವರ ನೀಡುವುದು)

(ಈ) ಸಾಲದ ಬಡ್ಡಿ ಮನ್ನಾ ಮಾಡಲು ಮತ್ತು ಸಾಲವನ್ನು ಮನ್ನಾ ಮಾಡಲು ಸರ್ಕಾರ ನಿರ್ಧರಿಸಿದೆಯೇ ; ಸರ್ಕಾರದ ನಿರ್ಧಾರಕ್ಕೆ ಕಾರಣಗಳೇನು ;

(ಉ) ಈವರೆಗೆ ಎಷ್ಟು ಜನರ ಸಾಲ ಮತ್ತು ಸಾಲದ ಬಡ್ಡಿ ಮನ್ನಾ ಮಾಡಲಾಗಿದೆ ; ಒಟ್ಟು ಮೊತ್ತ ಎಷ್ಟು ? (ಜಿಲ್ಲಾವಾರು ವಿವರ ನೀಡುವುದು)

## ಬಗರ್ ಹುಕುಂ ಅಡಿ ಸಲ್ಲಿಕೆ ಆಗಿರುವ ಅರ್ಜಿಗಳನ್ನು ವಿಲೇವಾರಿ ಮಾಡುವ ಬಗ್ಗೆ

**ಶ್ರೀ ಸಿ.ಟಿ. ರವಿ (ವಿಧಾನಸಭೆಯಿಂದ ಚುನಾಯಿತರಾದವರು) :–**

೧೮೪೭ (೨೦೨೧) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯಾದ್ಯಂತ ಬಗರ್ ಹುಕುಂ ಅಡಿ ಸಲ್ಲಿಕೆಯಾಗಿರುವ ಅರ್ಜಿಗಳೆಷ್ಟು ; ಬಾಕಿ ಇರುವ ಒಟ್ಟು ಅರ್ಜಿಗಳೆಷ್ಟು ; (ಜಿಲ್ಲಾವಾರು ವಿವರ ನೀಡುವುದು)

(ಆ) ಕಳೆದ ೨ ವರ್ಷದಿಂದ ಸಲ್ಲಿಕೆಯಾಗಿರುವ ಅರ್ಜಿಗಳೆಷ್ಟು ; ಈ ಪೈಕಿ ಇತ್ಯರ್ಥ ಮಾಡಿರುವ, ತಿರಸ್ಕರಿಸಿರುವ ಮತ್ತು ಬಾಕಿ ಇರುವ ಅರ್ಜಿಗಳೆಷ್ಟು ; (ಜಿಲ್ಲಾವಾರು ವಿವರ ಒದಗಿಸುವುದು)

(ಇ) ಬಗರ್‌ಹುಕುಂ ಅಡಿ ಸಲ್ಲಿಕೆಯಾಗಿರುವ ಅರ್ಜಿಗಳ ಇತ್ಯರ್ಥಕ್ಕೆ ಅನುಸರಿಸುತ್ತಿರುವ ಮಾನದಂಡಗಳೇನು ; ಅರ್ಜಿದಾರ ಮೃತಪಟ್ಟಲ್ಲಿ ಯಾವ ರೀತಿ ಕ್ರಮ ಕೈಗೊಳ್ಳಲಾಗುವುದು ;

(ಈ) ಅರ್ಹ ಅರ್ಜಿಗಳಿಗೆ ಹಂಚಿಕೆ ಮಾಡಲು ಅಗತ್ಯ ಭೂಮಿ ಲಭ್ಯವಿದೆಯೇ ; ಹಾಗಿದ್ದಲ್ಲಿ, ಅರ್ಹ ಅರ್ಜಿದಾರರಿಗೆ ಭೂಮಿ ಹಂಚಿಕೆ ಮಾಡಲು ಇರುವ ಮಾರ್ಗೋಪಾಯಗಳೇನು ;

(ಉ) ಬಾಕಿ ಇರುವ ಅರ್ಜಿಗಳ ವಿಲೇವಾರಿಗೆ ಸರ್ಕಾರ ಸೂಚನೆ ನೀಡಿದ ನಂತರ ೨೦೨೬, ಫೆಬ್ರವರಿ ಅಂತ್ಯದವರೆಗೆ ಎಷ್ಟು ಅರ್ಜಿಗಳು ಇತ್ಯರ್ಥ ಆಗಿದೆ ? (ಜಿಲ್ಲಾವಾರು ವಿವರ ನೀಡುವುದು)

## ಕರ್ನಾಟಕ ರಾಜ್ಯ ಸಾರಿಗೆ ಇಲಾಖೆಯ ನಿಗಮಗಳು ಮತ್ತು ಸಂಸ್ಥೆಗಳ ಕುರಿತು

**ಶ್ರೀ ರಮೇಶ್ ಬಾಬು (ನಾಮನಿರ್ದೇಶನ ಹೊಂದಿದವರು) :–**

೧೮೪೮ (೨೦೦೨) ಮಾನ್ಯ ಸಾರಿಗೆ ಮತ್ತು ಮುಜರಾಯಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಕರ್ನಾಟಕ ರಾಜ್ಯ ಸಾರಿಗೆ ಇಲಾಖೆ ತನ್ನ ವ್ಯಾಪ್ತಿಯಲ್ಲಿ ಯಾವ ಯಾವ ಸಂಸ್ಥೆಗಳನ್ನು ಹೊಂದಿರುತ್ತದೆ ; ಪ್ರತಿ ಸಂಸ್ಥೆಗಳ ವಾರ್ಷಿಕ ರಾಜ್ಯಸ್ವ ಸಂಗ್ರಹಣೆ ಎಷ್ಟು ; (ಕಳೆದ ಐದು ವರ್ಷಗಳ ಮಾಹಿತಿಯನ್ನು ಒದಗಿಸುವುದು)

(ಆ) ಸಾರಿಗೆ ಇಲಾಖೆಯ ಅಡಿಯಲ್ಲಿ ಬರುವ ಡಿ. ದೇವರಾಜ್ ಅರಸ್ ಟರ್ಮಿನಲ್ ಲಿಮಿಟೆಡ್ ಯಾವ ಯಾವ ಆಸ್ತಿಗಳನ್ನು ಹೊಂದಿರುತ್ತದೆ ; ಇದರ ಕಾರ್ಯ ವ್ಯಾಪ್ತಿ ಎಷ್ಟು ಮತ್ತು ಮೂಲ ಉದ್ದೇಶ ಏನು ; ಹಣ ದುರುಪಯೋಗದ ಆರೋಪದ ಮೇಲೆ ಅಧಿಕಾರಿಗಳ ಮೇಲೆ ಎಷ್ಟು ಪ್ರಕರಣಗಳು ಬಾಕಿ ಇರುತ್ತವೆ ಮತ್ತು ವಿಚಾರಣೆ ಯಾವ ಹಂತದಲ್ಲಿ ಇರುತ್ತದೆ ; (ಮಾಹಿತಿ ಒದಗಿಸುವುದು)

(ಇ) ಸಾರಿಗೆ ಇಲಾಖೆಯ ನಿಗಮಗಳ ಹೊಂದಿರುವ ಡಿಪೋಗಳು ಎಷ್ಟು ; (ಪ್ರತಿ ನಿಗಮದ ಅಂಕಿ–ಅಂಶಗಳನ್ನು ಒದಗಿಸುವುದು)

(ಈ) ಸಾರಿಗೆ ಇಲಾಖೆಯ ನಿಗಮಗಳ ಹೊಂದಿರುವ ಬಸ್ಸುಗಳ ಸಂಖ್ಯೆ ಎಷ್ಟು ; ಇವುಗಳಲ್ಲಿ ಚಾಲನೆಯಲ್ಲಿರುವ ಹಾಗೂ

ನಿಷ್ಕ್ರಿಯಗೊಂಡಿರುವ ಬಸ್ಸುಗಳು ಎಷ್ಟು ; ಹೊಸದಾಗಿ ಖರೀದಿ ಮಾಡಲಾದ ಬಸ್ಸುಗಳು ಎಷ್ಟು ; (ಪ್ರತಿ ನಿಗಮಗಳ ಬಸ್ಸುಗಳ ವಿವರಗಳನ್ನು ಒದಗಿಸುವುದು)

(ಉ) ಸಾರಿಗೆ ಇಲಾಖೆಯ ಪ್ರತಿ ನಿಗಮವು ವಾರ್ಷಿಕವಾಗಿ ಗಳಿಸುತ್ತಿರುವ ಆದಾಯವೆಷ್ಟು ; ಖರ್ಚು ಎಷ್ಟು ; (ಕಳೆದ ಮೂರು ವರ್ಷಗಳ ಅಂಕಿ–ಅಂಶಗಳನ್ನು ನಿಗಮವಾರು ನೀಡುವುದು)

(ಊ) ಸಾರಿಗೆ ಇಲಾಖೆಯು ಪ್ರತಿ ವರ್ಷ ಗಳಿಸುತ್ತಿರುವ ಇತರೆ ಆದಾಯವೆಷ್ಟು ; (ಕಳೆದ ಮೂರು ವರ್ಷಗಳ ಅಂಕಿ–ಅಂಶಗಳನ್ನು ನಿಗಮವಾರು ನೀಡುವುದು)

(ಋ) ಸಾರಿಗೆ ಇಲಾಖೆಯು ಪ್ರತಿ ವರ್ಷ ಆದಾಯ ಮತ್ತು ವೆಚ್ಚಗಳನ್ನು ಯಾವ ಪ್ರಮಾಣದಲ್ಲಿ ಹಂಚಿಕೆ ಮಾಡುತ್ತಿದೆ ? (ಕಳೆದ ಮೂರು ವರ್ಷಗಳ ಆದಾಯ ಮತ್ತು ವೆಚ್ಚದ ಹಂಚಿಕೆಯ ವಿವರಗಳನ್ನು ಒದಗಿಸುವುದು)

## ಕರ್ನಾಟಕ ಗೃಹ ಮಂಡಳಿಯ ಕುರಿತು

**ಶ್ರೀ ರಮೇಶ್ ಬಾಬು (ನಾಮನಿರ್ದೇಶನ ಹೊಂದಿದವರು) :–**

೧೮೪೯ (೨೦೦೪) ಮಾನ್ಯ ವಸತಿ, ವಕ್ಫ್ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಕರ್ನಾಟಕ ಗೃಹ ಮಂಡಳಿಯು ತುಮಕೂರು ಜಿಲ್ಲೆಯಲ್ಲಿ ಇದುವರೆಗೆ ಎಷ್ಟು ಬಡಾವಣೆಗಳನ್ನು ನಿರ್ಮಿಸಿರುತ್ತದೆ ; ಈ ಬಡಾವಣೆಗಳಲ್ಲಿ ರಚಿಸಿರುವ ನಿವೇಶನಗಳು ಎಷ್ಟು ; ಹಂಚಿಕೆಯಾಗಿರುವ ನಿವೇಶನಗಳು ಎಷ್ಟು ; ಹಂಚಿಕೆಯಾಗದೆ ಉಳಿದಿರುವ ನಿವೇಶನಗಳು ಎಷ್ಟು ; ಇವುಗಳ ಮೂಲ ನಿವೇಶನಗಳು ಎಷ್ಟು ; (ತಾಲ್ಲೂಕುವಾರು ಹಂಚಿಕೆ ಆಗದೆ ಉಳಿದಿರುವ ನಿವೇಶನಗಳ ಸಹಿತ ವಿವರಗಳನ್ನು ಒದಗಿಸುವುದು)

(ಆ) ತುಮಕೂರು ಜಿಲ್ಲೆಯಲ್ಲಿ ಕರ್ನಾಟಕ ಗೃಹ ಮಂಡಳಿಯು ನಿರ್ಮಿಸಿರುವ ಬಡಾವಣೆಗಳಲ್ಲಿ ಎಷ್ಟು ನಾಗರೀಕ ನಿವೇಶನಗಳು ಇರುತ್ತದೆ ; ಇವುಗಳಲ್ಲಿ ಹಂಚಿಕೆಯಾಗಿರುವ ನಿವೇಶನಗಳು ಹಾಗೂ ಹಂಚಿಕೆ ಆಗದೆ ಉಳಿದಿರುವ ನಿವೇಶನಗಳು ಎಷ್ಟು ; (ಪೂರ್ಣ ವಿವರಗಳನ್ನು ಒದಗಿಸುವುದು)

(ಇ) ತುಮಕೂರು ಜಿಲ್ಲೆಯಲ್ಲಿ ಕರ್ನಾಟಕ ಗೃಹ ಮಂಡಳಿಯ ಎಷ್ಟು ವಸತಿ ಯೋಜನೆಗಳು ಚಾಲನೆಯಲ್ಲಿ ಇರುತ್ತವೆ ; ಇವುಗಳ ವಿಸ್ತೀರ್ಣ ಎಷ್ಟು ; ಉದ್ದೇಶಿತ ನಿವೇಶನಗಳ ಸಂಖ್ಯೆ ಎಷ್ಟು ; ಇವುಗಳಲ್ಲಿ ಕರ್ನಾಟಕ ಗೃಹ ಮಂಡಳಿ ನೇರವಾಗಿ ಅಭಿವೃದ್ಧಿಪಡಿಸುತ್ತಿರುವ ಬಡಾವಣೆಗಳು ಎಷ್ಟು ; ಖಾಸಗಿ ಸಹಭಾಗಿತ್ವದಲ್ಲಿ ಅಭಿವೃದ್ಧಿಪಡಿಸುತ್ತಿರುವ ಬಡಾವಣೆಗಳು ಎಷ್ಟು ; (ಪೂರ್ಣ ವಿವರಗಳನ್ನು ಒದಗಿಸುವುದು)

(ಈ) ತುಮಕೂರು ಜಿಲ್ಲೆ ಕರ್ನಾಟಕ ಗೃಹ ಮಂಡಳಿಯ ಬಡಾವಣೆಗಳು ಎಷ್ಟು ವಾಣಿಜ್ಯ ನಿವೇಶನಗಳನ್ನು ಹೊಂದಲಾಗಿರುತ್ತದೆ ; ಇವುಗಳಲ್ಲಿ ಎಷ್ಟು ವಾಣಿಜ್ಯ ನಿವೇಶನಗಳು ವಿಲೇವಾರಿಯಾಗಿರುತ್ತದೆ ; ವಿಲೇವಾರಿಗೆ ಬಾಕಿ ಇರುವ ವಾಣಿಜ್ಯ ನಿವೇಶನಗಳು ಎಷ್ಟು ; (ಪೂರ್ಣ ವಿವರಗಳನ್ನು ಒದಗಿಸುವುದು)

(ಉ) ತುಮಕೂರು ಜಿಲ್ಲೆಯಲ್ಲಿ ಕರ್ನಾಟಕ ಗೃಹ ಮಂಡಳಿಯಿಂದ ವಿಶೇಷ ಪ್ರಕರಣದ ಅಡಿಯಲ್ಲಿ ಅಥವಾ ವಿವೇಚನಾ ಕೋಟಾ ಅಡಿಯಲ್ಲಿ ಎಷ್ಟು ನಿವೇಶನಗಳನ್ನು ಹಂಚಿಕೆ ಮಾಡಲಾಗಿದೆ ? (ಮಾಡಿದ್ದಲ್ಲಿ, ಫಲಾನುಭವಿಗಳ ಸಹಿತವಾಗಿ ವಿವರಗಳನ್ನು ಒದಗಿಸುವುದು)

# ತುಮಕೂರು ಜಿಲ್ಲೆ ಪಶುಸಂಗೋಪನಾ ಇಲಾಖೆಯಲ್ಲಿರುವ ಪಶು ವೈದ್ಯಾಧಿಕಾರಿಗಳು ಹಾಗೂ ಸಿಬ್ಬಂದಿ ಕುರಿತು

**ಶ್ರೀ ರಮೇಶ್ ಬಾಬು (ನಾಮನಿರ್ದೇಶನ ಹೊಂದಿದವರು) :–**

೧೮೫೦ (೨೦೦೫) ಮಾನ್ಯ ಪಶುಸಂಗೋಪನೆ ಮತ್ತು ರೇಷ್ಮೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ತುಮಕೂರು ಜಿಲ್ಲೆಯಲ್ಲಿರುವ ಒಟ್ಟು ಪಶು ವೈದ್ಯಕೀಯ ಸಂಸ್ಥೆಗಳು ಎಷ್ಟು ; ಅವುಗಳಲ್ಲಿ ಜಿಲ್ಲಾ ಕೋಳಿ ಸಾಕಾಣಿಕ ತರಬೇತಿ ಕೇಂದ್ರಗಳು ಎಷ್ಟು ; ಪಶು ಆಸ್ಪತ್ರೆಗಳು ಎಷ್ಟು ; ಹೋಬಳಿ ಮಟ್ಟದ ಪಶು ಆಸ್ಪತ್ರೆಗಳು ಎಷ್ಟು ; ಪಶು ಚಿಕಿತ್ಸಾಲಯಗಳು ಎಷ್ಟು ; ಪ್ರಾಥಮಿಕ ಪಶು ಚಿಕಿತ್ಸಾ ಶಾಲೆಗಳು ಎಷ್ಟು ; (ತಾಲ್ಲೂಕುವಾರು ವಿವರಗಳನ್ನು ಒದಗಿಸುವುದು)

(ಆ) ತುಮಕೂರು ಜಿಲ್ಲಾ ಪಶು ಸಂಗೋಪನಾ ಇಲಾಖೆಯಲ್ಲಿ ಇರುವ ಒಟ್ಟು ಸಿಬ್ಬಂದಿ ಎಷ್ಟು ; ಇವರಲ್ಲಿ ಪಶುವೈದ್ಯಾಧಿಕಾರಿಗಳು ಎಷ್ಟು ; ಜಾನುವಾರು ಅಭಿವೃದ್ಧಿ ಅಧಿಕಾರಿಗಳು ಎಷ್ಟು ; ಹಿರಿಯ ಪಶು ವೈದ್ಯಕೀಯ ಪರೀಕ್ಷಕರು ಎಷ್ಟು ; ಪಶು ವೈದ್ಯಕೀಯ ಪರೀಕ್ಷಕರು ಎಷ್ಟು ; ವಾಹನ ಚಾಲಕರು ಮತ್ತು ಡಿ ದರ್ಜೆ ನೌಕರರು ಎಷ್ಟು; ಇವರಲ್ಲಿ ಎಷ್ಟು ನೌಕರರು ಗುತ್ತಿಗೆ ಆಧಾರದ ಮೇಲೆ ಕಾರ್ಯ ನಿರ್ವಹಿಸುತ್ತಿದ್ದಾರೆ ; (ತಾಲ್ಲೂಕುವಾರು ವಿವರಗಳನ್ನು ಒದಗಿಸುವುದು)

(ಇ) ತುಮಕೂರು ಜಿಲ್ಲೆ ಪಶು ವೈದ್ಯಕೀಯ ಇಲಾಖೆಯಲ್ಲಿ ಇರುವ ಪಶು ವೈದ್ಯರು ಮತ್ತು ಇತರೆ ನೌಕರರು ಸ್ಥಳೀಯವಾಗಿ ವಾಸ ಮಾಡುತ್ತಿದ್ದಾರೆಯೇ ; ಎಷ್ಟು ಮಂದಿ ನಿಯೋಜಿತ ಸ್ಥಳದಲ್ಲಿ ವಾಸ ಮಾಡುತ್ತಿರುವುದಿಲ್ಲ ; ಮಾಡದೆ ಇದ್ದಲ್ಲಿ, ಕಾರಣವೇನು ; (ವಿವರಗಳನ್ನು ಒದಗಿಸುವುದು)

(ಈ) ತುಮಕೂರು ಜಿಲ್ಲೆಯಲ್ಲಿ ಜಾನುವಾರು ಗಣತಿಯನ್ನು ಯಾವಾಗ ನಡೆಸಲಾಗಿರುತ್ತದೆ ; (ಜಾನುವಾರು ಗಣತಿಯ ವರದಿಯ ಪ್ರತಿಯನ್ನು ಒದಗಿಸುವುದು)

(ಉ) ತುಮಕೂರು ಜಿಲ್ಲೆ ಚಿಕ್ಕನಾಯಕನಹಳ್ಳಿ ತಾಲ್ಲೂಕಿನ ಪಶು ಸಂಗೋಪನಾ ಇಲಾಖೆಯಲ್ಲಿ ಸರ್ಕಾರದ ಯಾವ ಯಾವ ಯೋಜನೆಗಳನ್ನು ರೈತರಿಗೆ ನೀಡಲಾಗಿದೆ ; (ಕಳೆದ ಮೂರು ವರ್ಷಗಳ ಫಲಾನುಭವಿಗಳ ಮಾಹಿತಿಯನ್ನು ಒದಗಿಸತಕ್ಕದ್ದು)

(ಊ) ತುಮಕೂರು ಜಿಲ್ಲೆ ಚಿಕ್ಕನಾಯಕನಹಳ್ಳಿ ತಾಲ್ಲೂಕಿನ ಹಸು ಸಾಕಾಣಿಕೆ, ಕುರಿ ಮತ್ತು ಮೇಕೆ ಸಾಕಾಣಿಕೆ ಫಲಾನುಭವಿಗಳು ಎಷ್ಟು ; ಯಾವ ಯಾವ ಯೋಜನೆಯಲ್ಲಿ ಯಾವಾಗ ಯಾವ ರೀತಿಯಲ್ಲಿ ಫಲಾನುಭವಿಗಳನ್ನು ಆಯ್ಕೆ ಮಾಡಲಾಗಿರುತ್ತದೆ ? (ಫಲಾನುಭವಿಗಳ ಹೆಸರು ಸಹಿತವಾಗಿ ವಿವರಗಳನ್ನು ಒದಗಿಸುವುದು)

## ಮೀನು ಸಾಕಾಣಿಕೆ ಯೋಜನೆಗಳ ಕುರಿತು

**ಶ್ರೀ ರಮೇಶ್ ಬಾಬು (ನಾಮನಿರ್ದೇಶನ ಹೊಂದಿದವರು) :–**

೧೮೫೧ (೨೦೦೬) ಮಾನ್ಯ ಮೀನುಗಾರಿಕೆ, ಬಂದರು ಮತ್ತು ಒಳನಾಡು ಜಲಸಾರಿಗೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಕೇಂದ್ರ ಸರ್ಕಾರದ ಪ್ರಧಾನ ಮಂತ್ರಿ ಮತ್ಸ್ಯ ಸಂಪದ ಯೋಜನೆಗೆ ಪ್ರತಿ ವರ್ಷ ಬರುತ್ತಿರುವ ಅನುದಾನ/ಸಹಾಯಧನ ಎಷ್ಟು ; ಈ ಯೋಜನೆಯಲ್ಲಿ ಕರ್ನಾಟಕ ರಾಜ್ಯದ ಎಷ್ಟು ಮೀನುಗಾರರಿಗೆ/ ಫಲಾನುಭವಿಗಳಿಗೆ ಕೇಂದ್ರ ಸರ್ಕಾರದ ಅನುದಾನ ದೊರೆತಿರುತ್ತದೆ ಮತ್ತು ಅದರ ಒಟ್ಟು ಮೊತ್ತವೆಷ್ಟು ;

(ಆ) ಕರ್ನಾಟಕದಲ್ಲಿ ನೀಲಿ ಕ್ರಾಂತಿ ಮೀನುಗಾರಿಕೆ ಯೋಜನೆ ಜಾರಿಯಲ್ಲಿ ಇರುತ್ತದೆಯೇ ; ಇದ್ದಲ್ಲಿ, ಇದರಲ್ಲಿ ಕೇಂದ್ರ ಸರ್ಕಾರ ಮತ್ತು ರಾಜ್ಯ ಸರ್ಕಾರದ ಪಾಲು ಎಷ್ಟು ; ಕಳೆದ ಮೂರು ವರ್ಷಗಳಲ್ಲಿ ನೀಲಿ ಕ್ರಾಂತಿ ಮೀನುಗಾರಿಕೆಗೆ ರಾಜ್ಯದಲ್ಲಿ ಎಷ್ಟು ಹಣ ವೆಚ್ಚ ಮಾಡಲಾಗಿರುತ್ತದೆ ; ಈ ಯೋಜನೆಗೆ ಹಂಚಿಕೆಯಾದ ಅನುದಾನ ಎಷ್ಟು ; ಬಿಡುಗಡೆಯಾದ ಅನುದಾನ ಎಷ್ಟು; ವೆಚ್ಚವಾಗಿರುವ ಅನುದಾನ ಎಷ್ಟು ;

(ಇ) ಕೇಂದ್ರ ಸರ್ಕಾರವು ಮೀನುಗಾರಿಕೆ ಉತ್ತೇಜನಕ್ಕೆ ಯಾವ ಯಾವ ಯೋಜನೆಗಳಲ್ಲಿ ಅನುದಾನ ಮತ್ತು ಸಹಾಯಧನವನ್ನು ರಾಜ್ಯಕ್ಕೆ ನೀಡುತ್ತಿದೆ ; ಕಳೆದ ಮೂರು ವರ್ಷಗಳಲ್ಲಿ ಕೇಂದ್ರ ಸರ್ಕಾರದಿಂದ ಮೀನುಗಾರಿಕೆಯ ಅಭಿವೃದ್ಧಿಗೆ ಬಂದಿರುವ ಅನುದಾನ/ಸಹಾಯಧನ ಎಷ್ಟು ; (ವಿವರಗಳನ್ನು ಒದಗಿಸುವುದು)

(ಈ) ಮೀನುಗಾರರ ವಸತಿ ಯೋಜನೆಗೆ ಕೇಂದ್ರ ಸರ್ಕಾರ ಯಾವುದೇ ರೀತಿಯ ಅನುದಾನ ಅಥವಾ ಸಹಾಯಧನ ನೀಡುತ್ತಿದೆಯೇ ? (ನೀಡಿದ್ದಲ್ಲಿ, ಅದರ ವಿವರಗಳನ್ನು ಒದಗಿಸುವುದು)

## ಭೂಮಿ, ವಸತಿ ನಿವೇಶನ ಹಾಗೂ ವಾಣಿಜ್ಯ ನಿವೇಶನಗಳಿಗೆ ಗರಿಷ್ಠ ಬೆಲೆ ದೊರಕಿಸಿಕೊಡುವ ಬಗ್ಗೆ

**ಶ್ರೀಮತಿ ಭಾರತಿ ಶೆಟ್ಟಿ (ನಾಮನಿರ್ದೇಶನ ಹೊಂದಿದವರು) :–**

೧೮೫೨ (೨೧೩೮) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಅವಶ್ಯಕತೆ ಇರುವ ಭೂಮಿಯ ಮಾಲೀಕರು ಮಾರಾಟ ಮಾಡುವುದಕ್ಕಾಗಿ ಸರ್ಕಾರದ ವತಿಯಿಂದ ಯಾವುದೇ ಹಸ್ತಕ್ಷೇಪವಿಲ್ಲದೆ ನೇರ ಭೂಮಾಲೀಕ ಮತ್ತು ಖರೀದಿದಾರರ ನಡುವೆ ಬೆಲೆ ನಿಷ್ಕರ್ಷ ಮಾಡಿಕೊಳ್ಳಲು ಕಂಪ್ಯೂಟರ್ ಆನ್‌ಲೈನ್

ಪ್ಲಾಟ್‌ಫಾರ್ಮನ್ನು ಸಿದ್ಧಪಡಿಸಲು ಸರ್ಕಾರ ಪ್ರಯತ್ನ ಮಾಡಿದೆಯೇ ; ಇಲ್ಲದಿದ್ದಲ್ಲಿ, ಈ ಬಗ್ಗೆ ಸರ್ಕಾರದ ಪ್ರಯತ್ನಗಳೇನು/ಅಭಿಪ್ರಾಯಗಳೇನು ;

(ಆ) ವಸತಿ ನಿವೇಶನ, ವಾಣಿಜ್ಯ ನಿವೇಶನ, ಕೈಗಾರಿಕಾ ನಿವೇಶನ ಹಾಗೂ ಇತ್ಯಾದಿ ರೀತಿಯ ಅಗತ್ಯತೆಗಳೊಳಗೊಂಡಂತೆ ಖರೀದಿ ಪ್ರಕ್ರಿಯೆಯಲ್ಲಿ ರಿಯಲ್ ಎಸ್ಟೇಟ್ ಉದ್ಯಮಿಗಳ ಹಸ್ತಕ್ಷೇಪವಿಲ್ಲದಂತೆ ಭೂಮಾಲೀಕನಿಗೆ ಗರಿಷ್ಠ ಬೆಲೆ ದೊರಕಿಸಿಕೊಡಲು ಸರ್ಕಾರ ವಿಫಲವಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಇಲ್ಲದಿದ್ದಲ್ಲಿ, ರಿಯಲ್ ಎಸ್ಟೇಟ್ ಅಭಿವೃದ್ಧಿಯಾಗುತ್ತಿರುವುದಕ್ಕೆ ಕಾರಣಗಳೇನು ; (ಭೂಮಿಗೆ ಸಂಬಂಧಿಸಿದಂತೆ ಮಾತ್ರ)

(ಇ) ರಿಯಲ್ ಎಸ್ಟೇಟ್ ಉದ್ಯಮವೆಂದರೇನು ; ರಾಜ್ಯದಲ್ಲಿ ಇದು ಇದು ಯಾವ ರೀತಿಯಲ್ಲಿ ನಡೆದುಕೊಂಡು ಬಂದಿದೆ ; ನಿವೃತ್ತ ಹಿರಿಯ ಅಧಿಕಾರಿಗಳು, ರಾಜಕಾರಣಿಗಳು ಮತ್ತು ಕಪ್ಪು ಹಣವುಳ್ಳ ದಂಧೆಕೋರರಿಂದ ಸದರಿ ಕ್ಷೇತ್ರವನ್ನು ಮುಕ್ತಗೊಳಿಸಲು ಸರ್ಕಾರದ ಪ್ರಯತ್ನಗಳೇನು ? (ಮಾಹಿತಿ ಒದಗಿಸುವುದು)

## ಜಾಗ ದಾನ ನೀಡಿರುವ ಕುರಿತು

**ಶ್ರೀ ಎನ್. ರವಿಕುಮಾರ್ (ವಿಧಾನಸಭೆಯಿಂದ ಚುನಾಯಿತರಾದವರು) :–**

೧೮೫೩ (೨೦೨೭) ಮಾನ್ಯ ಸಾರಿಗೆ ಮತ್ತು ಮುಜರಾಯಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಬೆಂಗಳೂರು ದಕ್ಷಿಣ ತಾಲ್ಲೂಕಿನ ತಾವರೆಕೆರೆ ಹೋಬಳಿಯ ಬ್ಯಾಲಾಳು, ಚೋಳನಾಯಕನ ಹಳ್ಳಿ, ಪೆದ್ದನ ಪಾಳ್ಯ, ದೊಡ್ಡಮಾರನ ಹಳ್ಳಿ ಮತ್ತು ಕಾಡುಮಾರನಹಳ್ಳಿಯ ೧೧೯೮.೩೪ ಎಕರೆ ಜಾಗವನ್ನು ೧೧/೧೩ನೇ ಏಪ್ರಿಲ್ ೧೯೩೭ ರಂದು ಶ್ರೀರಂಗಪಟ್ಟಣ ತಾಲ್ಲೂಕು, ಶ್ರೀ ರಂಗನಾಥಸ್ವಾಮಿ ದೇವಾಲಯಕ್ಕೆ ಶ್ರೀಮತಿ ದ್ವಾರಕ ಬಾಯಿ

ವೇದಾಂತಂರವರು ದಾನವಾಗಿ ನೀಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಸದರಿ ಜಾಗವನ್ನು ಯಾವ ಕಾರಣಕ್ಕಾಗಿ ದಾನವಾಗಿ ನೀಡಲಾಗಿದೆ ; ಪ್ರಸ್ತುತ ಎಷ್ಟು ಎಕರೆ ಜಾಗ ದೇವಾಲಯದ ಹೆಸರಿನಲ್ಲಿದೆ ; ಅನಧಿಕೃತವಾಗಿ ಒತ್ತುವರಿಯಾದ ಜಾಗವೆಷ್ಟು ; (ಒತ್ತುವರಿದಾರರ ಹೆಸರಿನೊಂದಿಗೆ ಮಾಹಿತಿ ನೀಡುವುದು)

(ಆ) ದೇವಸ್ಥಾನಕ್ಕೆ ದಾನವಾಗಿ ನೀಡಿರುವ ಜಾಗವನ್ನು ಸರ್ಕಾರ ಯಾವ ಆದೇಶದ ಅನ್ವಯ ೭೯ ನಿರಾಶ್ರಿತರಿಗೆ ತಲಾ ೨.೨ ಎಕರೆ ಜಮೀನು ಮಂಜೂರು ಮಾಡಿದೆ ; ಈ ಜಮೀನನ್ನು ಸರ್ಕಾರಕ್ಕೆ ದಾನವಾಗಿ ನೀಡಲಾಗಿತ್ತೇ ; ಸರ್ಕಾರಕ್ಕೆ ದಾನ ನೀಡಿಲ್ಲವೆಂದಾಗ ಸರ್ಕಾರ ಹೇಗೆ ದೇವಸ್ಥಾನದ ಜಾಗವನ್ನು ಹಂಚಲು ಕ್ರಮ ಕೈಗೊಂಡಿದೆ ; ದೇವಸ್ಥಾನಕ್ಕೆ ದಾನ ನೀಡಿದ ಜಮೀನನ್ನು ಸ್ವಾಧೀನಪಡಿಸಿ ಇತರರಿಗೆ ಹಂಚುವಾಗ ದೇವಸ್ಥಾನಕ್ಕೆ ಎಷ್ಟು ಮೊತ್ತವನ್ನು ಪರಿಹಾರವಾಗಿ ನೀಡಿದೆ ; (ವಿವರ ನೀಡುವುದು)

(ಇ) ಧಾರ್ಮಿಕ ದತ್ತಿ ಆಯುಕ್ತರ ಅಧ್ಯಕ್ಷತೆಯಲ್ಲಿನ ೧೩ ಜನರ ಸಮಿತಿಯು ದಿನಾಂಕ : ೧೧.೧೧.೨೦೨೧ ರಿಂದ ಇದುವರೆಗೆ ಎಷ್ಟು ಸಭೆಗಳನ್ನು ನಡೆಸಿದೆ ; ಎಷ್ಟು ಅನಧಿಕೃತ ಒತ್ತುವರಿದಾರರನ್ನು ಗುರುತಿಸಿದೆ ? (ವಿವರ ನೀಡುವುದು)

## ದೇವಸ್ಥಾನಗಳು ಹೊಂದಿರುವ ಸ್ಥಿರಾಸ್ತಿಯ ಕುರಿತು

**ಶ್ರೀ ಎನ್. ರವಿಕುಮಾರ್ (ವಿಧಾನಸಭೆಯಿಂದ ಚುನಾಯಿತರಾದವರು) :–**

೧೮೫೪ (೨೦೨೮) ಮಾನ್ಯ ಸಾರಿಗೆ ಮತ್ತು ಮುಜರಾಯಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದ ದೇವಸ್ಥಾನಗಳು ಹೊಂದಿರುವ ಸ್ಥಿರಾಸ್ತಿಯ ಒಟ್ಟು ಮೌಲ್ಯವೆಷ್ಟು ; (ಜಿಲ್ಲಾವಾರು, ದೇವಸ್ಥಾನವಾರು ವಿವರ ನೀಡುವುದು)

(ಆ) ದೇವಸ್ಥಾನಗಳು ಹೊಂದಿರುವ ಸ್ಥಿರಾಸ್ತಿಯನ್ನು ಸಂಬಂಧಿಸಿದ ದೇವರ ಹೆಸರಿಗೆ ಪಹಣಿ ಮಾಡಲು ಸರ್ಕಾರ ಯಾವ ಕ್ರಮ ಕೈಗೊಂಡಿದೆ ; ಇದುವರೆಗೆ ಎಷ್ಟು ಎಕರೆ ಭೂಮಿಯನ್ನು ಸಂಬಂಧಿಸಿದ ದೇವರ ಹೆಸರಿಗೆ ಖಾತೆ/ಪಹಣಿ ಮಾಡಲಾಗಿದೆ ; (ಜಿಲ್ಲಾವಾರು ವಿವರ ನೀಡುವುದು)

(ಇ) ಸರ್ಕಾರಿ ಅನುದಾನಗಳನ್ನು ಪಡೆಯುವ ಖಾಸಗಿ ದೇವಸ್ಥಾನಗಳನ್ನು ಮುಜರಾಯಿ ಇಲಾಖೆ ತನ್ನ ವಶಕ್ಕೆ ಪಡೆಯುವುದೇ ; ಈ ಕುರಿತು ಸರ್ಕಾರದ ನಿಲುವೇನು ;

(ಈ) ರಾಜ್ಯದಲ್ಲಿರುವ ಖಾಸಗಿ ದೇವಸ್ಥಾನಗಳ ಸಂಖ್ಯೆ ಎಷ್ಟು ; ಕಳೆದ ೩ ವರ್ಷದಲ್ಲಿ ಮುಜರಾಯಿ ಇಲಾಖೆಯಿಂದ ಖಾಸಗಿ ದೇವಸ್ಥಾನಗಳಿಗೆ ನೀಡಲಾದ ಸಹಾಯ ಧನವೆಷ್ಟು ; (ಜಿಲ್ಲಾವಾರು ವಿವರ ನೀಡುವುದು)

(ಉ) ಮುಜರಾಯಿ ಇಲಾಖೆಯ ನಿಧಿಯಿಂದ ಹಿಂದುಯೇತರ ಸಂಸ್ಥೆಗಳಿಗೆ ನೀಡಿದ ಅನುದಾನ/ಧನ ಸಹಾಯ/ವೇತನದ ವಿವರಗಳನ್ನು ಆಯಾಯಾ ಜಿಲ್ಲೆಯ ಪ್ರಮುಖ ಹಿಂದು ದೇವಸ್ಥಾನಗಳಲ್ಲಿ ಫಲಕದ ಮೂಲಕ ಪ್ರಕಟಿಸಲು ಸರ್ಕಾರ ಯಾವ ಕ್ರಮ ಕೈಗೊಂಡಿದೆ ; ಈ ಮೊತ್ತವು ಹಿಂದು ಭಕ್ತರು, ಹಿಂದೂ ದೇವಳಗಳಿಗೆ ಕಾಣಿಕೆ/ಸೇವೆ/ಹರಕೆಯ ರೂಪದಲ್ಲಿ ನೀಡಿರುವುದು ಸದರಿ ಮೊತ್ತವನ್ನು ಯಾವ ರೀತಿಯಲ್ಲಿ ವೆಚ್ಚ ಮಾಡಲಾಗಿದೆ ಎಂದು ತಿಳಿಯುವುದು ಹಿಂದು ಭಕ್ತರ ಸಾಂವಿಧಾನಿಕ ಹಕ್ಕಾಗಿರುವ ಕುರಿತು ಸರ್ಕಾರದ ನಿಲುವೇನು ?

## ದೇವಸ್ಥಾನಗಳಿಗೆ ಸ್ವಾಯತ್ತತೆ ನೀಡುವ ಕುರಿತು

**ಶ್ರೀ ಎನ್. ರವಿಕುಮಾರ್ (ವಿಧಾನಸಭೆಯಿಂದ ಚುನಾಯಿತರಾದವರು) :–**

೧೮೫೫ (೨೦೨೯) ಮಾನ್ಯ ಸಾರಿಗೆ ಮತ್ತು ಮುಜರಾಯಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ದೇವಸ್ಥಾನಗಳಿಗೆ ಯಾವ ರೀತಿಯಲ್ಲಿ ಸ್ವಾಯತ್ತತೆ ನೀಡಲಾಗುತ್ತದೆ: ಸಂಪೂರ್ಣ ಸ್ವಾಯತ್ತತೆ ಎಂದರೇನು ; ಸರ್ಕಾರದ ಯಾವುದೇ ರೀತಿಯ ಹಸ್ತಕ್ಷೇಪವು ದೇವಸ್ಥಾನದ ದೈನಂದಿನ ಪೂಜೆ, ವ್ಯವಸ್ಥೆಗಳಲ್ಲಿ ಇರದಿರುವುದನ್ನು ಸ್ವಾಯತ್ತತೆ ಎಂದು ಕರೆಯಲಾಗಿದೆಯೇ ; ಈ ಕುರಿತು ಸರ್ಕಾರದ ನಿಲುವೇನು ;

(ಆ) ಕಳೆದ ೩ ವರ್ಷಗಳಲ್ಲಿ ಎಷ್ಟು ಅಧಿಸೂಚಿತ ದೇವಾಲಯಗಳ ಸ್ಥಿರಾಸ್ತಿಗಳ ಸರ್ವೆ ಕಾರ್ಯ ನಡೆಸಲಾಗಿದೆ ; (ಜಿಲ್ಲಾವಾರು ವಿವರ ನೀಡುವುದು)

(ಇ) ಒಂದು ತಿಂಗಳಿನಲ್ಲಿ ಒಂದು ತಾಲ್ಲೂಕಿನಲ್ಲಿ ಕನಿಷ್ಠ ೫ ದೇವಾಲಯಗಳ ಸ್ಥಿರಾಸ್ತಿಗಳ ದಾಖಲೀಕರಣ ಮಾಡುವಂತೆ ದಿನಾಂಕ : ೧೧.೧೨.೨೦೨೦ ರಂದು ಆದೇಶಿಸಿದ ಬಳಿಕ ಎಷ್ಟು ದೇವಾಲಯಗಳ ದಾಖಲೀಕರಣ ಮಾಡಲಾಗಿದೆ; ಇದುವರೆಗೆ ಎಷ್ಟು ದೇವಾಲಯಗಳ ಸ್ಥಿರಾಸ್ತಿಗಳ ದಾಖಲೀಕರಣ ಮಾಡಲಾಗಿದೆ ; (ಜಿಲ್ಲಾವಾರು ವಿವರ ನೀಡುವುದು)

(ಈ) ದಿನಾಂಕ : ೨೧.೧೦.೨೦೨೦ರ ಬಳಿಕ ದೇವಾಲಯಗಳ ಜಮೀನುಗಳಿಗೆ ಸಂಬಂಧಿಸಿದ ಎಷ್ಟು ಜಮೀನುಗಳ ದಾಖಲೆಗಳನ್ನು ನವೀಕರಿಸಲಾಗಿದೆ ? (ಜಿಲ್ಲಾವಾರು ಮಾಹಿತಿ ನೀಡುವುದು)

## ನೋಂದಣಿ ಶುಲ್ಕ ನಷ್ಟ ಕುರಿತು

**ಶ್ರೀ ಎನ್. ರವಿಕುಮಾರ್ (ವಿಧಾನಸಭೆಯಿಂದ ಚುನಾಯಿತರಾದವರು) :–**

೧೮೫೬ (೨೦೩೦) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಬೆಂಗಳೂರು ನಗರದ ಕಾಚರಕನ ಹಳ್ಳಿಯು ಉಪ ನೋಂದಣಾಧಿಕಾರಿ, ಹುಮನಾಬಾದ್ ಉಪ ನೋಂದಣಾಧಿಕಾರಿ. ಜೂನ್ ೨೦೧೯ ರಿಂದ ಜನವರಿ ೨೦೨೨ರ ನಡುವೆ

ಮಹದೇವಪುರ ಮತ್ತು ನೆಲಮಂಗಲದ ಉಪ ನೋಂದಣಾಧಿಕಾರಿಯವರು ಸರ್ಕಾರಕ್ಕೆ ನೋಂದಣಿ ಶುಲ್ಕ ನಷ್ಟ ಉಂಟುಮಾಡಿದ್ದು, ಈ ನಷ್ಟ ಮಾಡಿರುವ ಉಪ ನೋಂದಣಾಧಿಕಾರಿಯವರ ಮೇಲೆ ಸರ್ಕಾರ ಕೈಗೊಂಡ ಕ್ರಮಗಳೇನು ; ಸದರಿಯವರನ್ನು ಅಮಾನತ್ತುಗೊಳಿಸಲಾಗಿದೆಯೇ ; ಇಲ್ಲವಾದಲ್ಲಿ, ಯಾವಾಗ ಅಮಾನತ್ತುಗೊಳಿಸಲಾಗುವುದು ; (ವಿವರ ನೀಡುವುದು)

(ಆ) ನಷ್ಟವಾಗಿರುವ ನೋಂದಣಿ ಶುಲ್ಕವನ್ನು ಸಂಬಂಧಿತ ಉಪ ನೋಂದಣಿ ಅಧಿಕಾರಿಯಿಂದಲೇ ವಸೂಲಿ ಮಾಡಿ ಸರ್ಕಾರಕ್ಕೆ ಜಮಾ ಮಾಡಲು ಕೈಗೊಂಡ ಕ್ರಮಗಳೇನು ; ಯಾವಾಗ ವಸೂಲಿ ಮಾಡಲಾಗುವುದು ;

(ಇ) ದೇವನಹಳ್ಳಿಯ ಆಕಾಶ್ ಶೈಕ್ಷಣಿಕ ಮತ್ತು ಅಭಿವೃದ್ಧಿ ಟ್ರಸ್ಟ್‌ಗೆ ಆಸ್ತಿಯ ವರ್ಗಾವಣೆ ಸಮಯದಲ್ಲಿ ಉಪ ನೋಂದಣಾಧಿಕಾರಿಯವರು ಉದ್ದೇಶ ಪೂರ್ವಕವಾಗಿ ಮುದ್ರಾಂಕ ಶುಲ್ಕವನ್ನು ಕಡಿಮೆ ದರದಲ್ಲಿ ವಿಧಿಸಿರುವುದರಿಂದ ರೂ. ೧೦.೫೧ ಕೋಟಿ ರೂಗಳ ನೋಂದಣಿ ಶುಲ್ಕ ಸರ್ಕಾರಕ್ಕೆ ನಷ್ಟವಾಗಿದ್ದು, ಈ ಕುರಿತು ಸರ್ಕಾರದ ನಿಲುವೇನು ;

(ಈ) ಸಮರ್ಪಕ ತರಬೇತಿ ಪಡೆದಿರದ ಅನರ್ಹ ಉಪ ನೋಂದಣಾಧಿಕಾರಿಯವರನ್ನು ಇತರ ಕರ್ತವ್ಯಗಳಿಗೆ ನಿಯೋಜಿಸದೇ ಸರ್ಕಾರಕ್ಕೆ ನಷ್ಟವಾದರೂ ಅದೇ ಹುದ್ದೆಯಲ್ಲಿ ಮುಂದುವರೆಯಲು ಅವಕಾಶ ಕಲ್ಪಿಸುವ ಅನಿವಾರ್ಯತೆ ಸರ್ಕಾರಕ್ಕಿದೆಯೇ ? (ವಿವರ ನೀಡುವುದು)

## ಕೆಶಿಪ್ ವತಿಯಿಂದ ಕರೆಯಲಾದ ಟೆಂಡರ್‌ಗಳ ಕುರಿತು

**ಶ್ರೀ ಎನ್. ರವಿಕುಮಾರ್ (ವಿಧಾನಸಭೆಯಿಂದ ಚುನಾಯಿತರಾದವರು) :–**

೧೮೫೭ (೨೦೩೧) ಮಾನ್ಯ ಲೋಕೋಪಯೋಗಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಕಳೆದ ಎರಡು ವರ್ಷಗಳಲ್ಲಿ ಕೆಶಿಪ್ ವತಿಯಿಂದ ಕರೆಯಲಾದ ಟೆಂಡರ್‌ಗಳ ಸಂಖ್ಯೆ ಎಷ್ಟು ; ಎಷ್ಟು ಕಾಮಗಾರಿಗಳಿಗೆ ಟೆಂಡರ್ ಕರೆಯಲಾಗಿದೆ ; ಸದರಿ ಟೆಂಡರ್‌ಗಳ ಒಟ್ಟು ಮೊತ್ತವೆಷ್ಟು ; (ಕಾಮಗಾರಿವಾರು ಟೆಂಡರ್ ಮೊತ್ತದೊಂದಿಗೆ ವಿವರ ನೀಡುವುದು)

(ಆ) ಹೊಸಕೋಟೆ ಮಾಲೂರು ರಾಜ್ಯ ಹೆದ್ದಾರಿ–೯೫ ಮತ್ತು ೧೬೮ರ ಹೆಚ್.ಎ.ಎಂ ಕಾಮಗಾರಿ ಟೆಂಡರ್ ಪ್ರಕ್ರಿಯೆ ಪೂರ್ಣಗೊಳಿಸಿ ಕಾರ್ಯಾದೇಶ ನೀಡಲು ನಿಗದಿಪಡಿಸಿರುವ ಮಾನದಂಡಗಳೇನು ; ಯಾವ ದಿನಾಂಕದಂದು ಟೆಂಡರ್ ತೆರೆದು ಕಾರ್ಯಾದೇಶ ನೀಡಲಾಗಿದೆ ; (ವಿವರ ನೀಡುವುದು)

(ಇ) ಕಳೆದ ಎರಡು ವರ್ಷಗಳಲ್ಲಿ ಕೆಶಿಪ್ ವತಿಯಿಂದ ಕರೆಯಲಾದ ಟೆಂಡರ್‌ಗಳಲ್ಲಿ ಪಾಲ್ಗೊಂಡ ಟೆಂಡರ್‌ದಾರರ ಸಂಖ್ಯೆ ಎಷ್ಟು ; ಎಷ್ಟು ಟೆಂಡರ್‌ದಾರರಿಗೆ ಎಷ್ಟು ಮೊತ್ತದ ಟೆಂಡರ್ ದೊರೆತಿದೆ ; ಎಷ್ಟು ಟೆಂಡರ್‌ದಾರರು ಅನರ್ಹಗೊಂಡಿದ್ದಾರೆ ; ಯಾವ ಕಾರಣಕ್ಕೆ ಅನರ್ಹಗೊಂಡಿದ್ದಾರೆ ? (ಟೆಂಡರ್‌ವಾರು ವಿವರ ನೀಡುವುದು)

## ಭೂ ದಾಖಲೆಗಳು (ಆರ್‌ಟಿಸಿ / ಪಹಣಿ) ಸಮಯಕ್ಕೆ ಸರಿಯಾಗಿ ನವೀಕರಿಸದಿರುವ ಬಗ್ಗೆ

**ಶ್ರೀ ರಾಮೋಜಿಗೌಡ (ಪದವೀಧರರ ಕ್ಷೇತ್ರ) :–**

೧೮೫೮ (೨೦೮೩) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಭೂ ದಾಖಲೆಗಳನ್ನು (ಆರ್‌ಟಿಸಿ/ಪಹಣಿ) ಸಮಯಕ್ಕೆ ಸರಿಯಾಗಿ ನವೀಕರಿಸದಿರುವುದು ರೈತರಿಗೆ ಸಾಲ ಮತ್ತು ಬೆಳೆ ವಿಮೆಗಾಗಿ ತೊಂದರೆ ಉಂಟು ಮಾಡುತ್ತಿದೆಯೇ ;

(ಆ) ೧೦–೧೫ ವರ್ಷಗಳಿಗೂ ಹೆಚ್ಚು ಕಾಲ ಬಾಕಿ ಇರುವ ಭೂ ಮಾಲೀಕತ್ವದ ವಿವಾದಗಳನ್ನು ಪರಿಹರಿಸಲು ಸರ್ಕಾರ ಯಾವ ಕ್ರಮಗಳನ್ನು ತೆಗೆದುಕೊಂಡಿದೆ ;

(ಇ) ನೋಂದಾಯಿತ ಭೂ ವಹಿವಾಟಿನ ನಂತರವೂ ಎಷ್ಟು ರೈತರು ರೂಪಾಂತರ ನಮೂದುಗಳಿಗಾಗಿ ಕಾಯುತ್ತಿದ್ದಾರೆ ;

(ಈ) ಅತಿಕ್ರಮಣ ಮತ್ತು ನಕಲಿ ದಾಖಲೆಗಳನ್ನು ತಡೆಗಟ್ಟಲು ಎಲ್ಲಾ ಕೃಷಿ ಭೂಮಿಯನ್ನು ಡಿಜಿಟಲ್ ನಕ್ಷೆ ಮಾಡುವ ಯೋಜನೆ ಇದೆಯೇ ?

## ಸ್ವಾಮಿತ್ವ ಯೋಜನೆ ಬಗ್ಗೆ

**ಶ್ರೀ ರಾಮೋಜಿಗೌಡ (ಪದವೀಧರರ ಕ್ಷೇತ್ರ) :–**

೧೮೫೯ (೨೦೮೪) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಗ್ರಾಮಠಾಣಾ ಎಂದರೆ ಏನು ; ಸದರಿ ಪ್ರದೇಶದ ದಾಖಲೆಗಳನ್ನು ನಿರ್ವಹಿಸುವ ಕಾರ್ಯವನ್ನು ಮಾಡುವವರು ಯಾರು ;

(ಆ) ಗ್ರಾಮಠಾಣಾ ವ್ಯಾಪ್ತಿಯ ಆಸ್ತಿಗಳಿಗೆ ಮೂಲ ದಾಖಲೆಗಳು ಎಂದರೆ ಯಾವುವು ; ಯಾವ ಇಲಾಖೆಯು ಸದರಿ ದಾಖಲೆಗಳನ್ನು ನೀಡುವುದು ;

(ಇ) ಗ್ರಾಮಠಾಣಾ ವ್ಯಾಪ್ತಿಯ ಸ್ವತ್ತುಗಳು ಕ್ರಯ, ಅಡಮಾನ ಆಗದೆ ಪಿತ್ರಾರ್ಜಿತವಾಗಿ ಬಂದ ಸ್ವತ್ತುಗಳ ಮಾಲೀಕರು ಇ–ಖಾತಾ ಪಡೆಯಲು ಸಲ್ಲಿಸಬೇಕಾದ ದಾಖಲೆಗಳು ಯಾವುವು ; ಗ್ರಾಮಠಾಣಾ

ವ್ಯಾಪ್ತಿಯ ಸ್ವತ್ತುಗಳಿಗೆ ಸ್ವಾಮಿತ್ವ ಯೋಜನೆಯಲ್ಲಿ ಆಸ್ತಿ ಕಾರ್ಡ್ ವಿತರಿಸಲು ಇರುವ ಮಾರ್ಗಸೂಚಿಗಳು ಏನು ; (ವಿವರ ನೀಡುವುದು)

(ಈ) ಸ್ವಾಮಿತ್ವ ಯೋಜನೆಯಲ್ಲಿ ಬೆಂಗಳೂರು ನಗರ ಜಿಲ್ಲೆಯ ಎಷ್ಟು ಗ್ರಾಮಗಳ ಜನತೆಗೆ ಆಸ್ತಿ ಕಾರ್ಡ್ ವಿತರಿಸಲಾಗಿದೆ ; ವಿತರಿಸದೇ ಇದ್ದಲ್ಲಿ, ಕಾರಣಗಳೇನು ;

(ಉ) ನಗರ ಸ್ಥಳೀಯ ಸಂಸ್ಥೆಗಳ ವ್ಯಾಪ್ತಿಯಲ್ಲಿ ಸ್ವಾಮಿತ್ವ ಯೋಜನೆಯ ಜಾರಿಗೆ ಸರ್ಕಾರ ಕೈಗೊಂಡ ಕ್ರಮಗಳೇನು ; ಯಾವ ಕಾಲಮಿತಿಯಲ್ಲಿ ಆಸ್ತಿ ಕಾರ್ಡ್ ವಿತರಣೆ ಮಾಡಲಾಗುವುದು ?

## ತುಮಕೂರು ಜಿಲ್ಲೆಯಲ್ಲಿ ಆಕಸ್ಮಿಕವಾಗಿ ಮೃತಪಟ್ಟ ಜಾನುವಾರುಗಳ ಬಗ್ಗೆ

**ಶ್ರೀ ರಾಜೇಂದ್ರ ರಾಜಣ್ಣ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೧೮೬೦ (೨೦೮೯) ಮಾನ್ಯ ಪಶುಸಂಗೋಪನೆ ಮತ್ತು ರೇಷ್ಮೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ತುಮಕೂರು ಜಿಲ್ಲೆಯಲ್ಲಿ ಆಕಸ್ಮಿಕವಾಗಿ ಮೃತಪಟ್ಟ ಜಾನುವಾರುಗಳ ಸಂಖ್ಯೆ ಎಷ್ಟು ; (ಕಳೆದ ೩ ವರ್ಷಗಳ ತಾಲ್ಲೂಕುವಾರು ಸಂಪೂರ್ಣ ಮಾಹಿತಿ ನೀಡುವುದು)

(ಆ) ತುಮಕೂರು ಜಿಲ್ಲಾ ವ್ಯಾಪ್ತಿಯಲ್ಲಿ ಆಕಸ್ಮಿಕವಾಗಿ ಮೃತಪಟ್ಟ ಜಾನುವಾರುಗಳಿಗೆ ಅನುಗ್ರಹ ಯೋಜನೆಯಡಿ ನೀಡಲಾಗಿರುವ ಪರಿಹಾರದ ಮೊತ್ತ ಎಷ್ಟು ; ಬಾಕಿ ಇರುವ ಪರಿಹಾರದ ಮೊತ್ತ ಎಷ್ಟು ; (ಕಳೆದ ೩ ವರ್ಷಗಳ ತಾಲ್ಲೂಕುವಾರು ಸಂಪೂರ್ಣ ಮೊತ್ತ ನೀಡುವುದು)

(ಇ) ಈ ಜಿಲ್ಲಾ ವ್ಯಾಪ್ತಿಯಲ್ಲಿ ಆಕಸ್ಮಿಕವಾಗಿ ಮೃತಪಟ್ಟ ಜಾನುವಾರುಗಳಿಗೆ ಅನುಗ್ರಹ ಯೋಜನೆಯಡಿ ನೀಡಲಾಗುವ ಪರಿಹಾರದ ಬಾಕಿ ಮೊತ್ತವನ್ನು ಯಾವ ಕಾಲ ಮಿತಿಯೊಳಗೆ ನೀಡಲಾಗುವುದು ?

## ತುಮಕೂರು–ಶಿವಮೊಗ್ಗ ರಾಷ್ಟ್ರೀಯ ಹೆದ್ದಾರಿ ಕಾಮಗಾರಿ ಬಗ್ಗೆ

**ಶ್ರೀ ರಾಜೇಂದ್ರ ರಾಜಣ್ಣ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೧೮೬೧ (೨೯೯೧) ಮಾನ್ಯ ಲೋಕೋಪಯೋಗಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ತುಮಕೂರು ಜಿಲ್ಲೆಯಲ್ಲಿ ಹಾದು ಹೋಗಿರುವ ತುಮಕೂರು–ಶಿವಮೊಗ್ಗ ರಾಷ್ಟ್ರೀಯ ಹೆದ್ದಾರಿ ಕಾಮಗಾರಿಯ ಅಂದಾಜು ಮೊತ್ತ ಎಷ್ಟು ; ಪ್ರಸ್ತುತ ಕಾಮಗಾರಿ ಯಾವ ಹಂತದಲ್ಲಿದೆ ; (ಸಂಪೂರ್ಣ ಮಾಹಿತಿ ನೀಡುವುದು)

(ಆ) ಈ ರಾಷ್ಟ್ರೀಯ ಹೆದ್ದಾರಿ ಕಾಮಗಾರಿಯ ಭೂ ಸ್ವಾಧೀನ ಪ್ರಕ್ರಿಯೆಯು ಬಹಳ ಕುಂಠಿತಗೊಂಡಿದ್ದು ಹಾಗೂ ಗುಬ್ಬಿ–ಮಲ್ಲಸಂದ್ರ ಬಳಿ ಅವೈಜ್ಞಾನಿಕವಾಗಿ ರಸ್ತೆಯನ್ನು ನಿರ್ಮಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಇ) ಸದರಿ ರಾಷ್ಟ್ರೀಯ ಹೆದ್ದಾರಿ ಕಾಮಗಾರಿಯು ಪ್ರಾರಂಭವಾಗಿ ಸುಮಾರು ವರ್ಷ ಕಳೆದರೂ ಸಹ ಕಾಮಗಾರಿ ಪೂರ್ಣಗೊಂಡಿರುವುದಿಲ್ಲ ; ಕಾಮಗಾರಿಯನ್ನು ಯಾವ ಕಾಲಮಿತಿಯೊಳಗೆ ಪೂರ್ಣಗೊಳಿಸಲಾಗುವುದು ?

## ಅಲ್ಪಸಂಖ್ಯಾತರ ಕಾಲೋನಿಗಳಲ್ಲಿ ಮೂಲಭೂತ ಸೌಕರ್ಯ ಒದಗಿಸುವ ಬಗ್ಗೆ

**ಶ್ರೀ ಡಿ.ಟಿ.ಶ್ರೀನಿವಾಸ್ (ಡಿ.ಟಿ.ಎಸ್) (ಶಿಕ್ಷಕರ ಕ್ಷೇತ್ರ) :–**

೧೮೬೨ (೨೦೪೩) ಮಾನ್ಯ ವಸತಿ, ವಕ್ಫ್ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ೨೦೨೩–೨೪ ರಿಂದ ೨೦೨೫–೨೬ ರವರೆಗೆ ಅಲ್ಪಸಂಖ್ಯಾತರು ವಾಸಿಸುವ ಪ್ರದೇಶಗಳಲ್ಲಿ ಮೂಲಭೂತ ಅಭಿವೃದ್ಧಿ ಕಾರ್ಯಗಳನ್ನು ಕೈಗೊಳ್ಳಲು ನಿಗಧಿಪಡಿಸಿರುವ ಅನುದಾನ ಎಷ್ಟು ;

(ಆ) ಈ ಅನುದಾನದಲ್ಲಿ ಕೈಗೊಂಡಿರುವ ಕಾಮಗಾರಿಗಳ ವಿವರ ನೀಡುವುದು ; ಯಾವ ಯಾವ ಕಾಮಗಾರಿಗಳನ್ನು ತೆಗೆದುಕೊಳ್ಳಲಾಗಿದೆ ; (ಸಮುದಾಯವಾರು ವಿವರ ನೀಡುವುದು)

(ಇ) ನಗರ ಪ್ರದೇಶದಲ್ಲಿರುವ ಅಲ್ಪಸಂಖ್ಯಾತರ ಪ್ರದೇಶದಲ್ಲಿ ಕೈಗೊಂಡಿರುವ ಅಭಿವೃದ್ಧಿ ಕಾರ್ಯಗಳು ಮತ್ತು ಸ್ಥಳೀಯ ಸಂಸ್ಥೆಗಳಿಂದ ತೆಗೆದುಕೊಂಡ ಕಾಮಗಾರಿಗಳು ನಕಲಿಯಾಗುವುದನ್ನು ಸರ್ಕಾರವು ಗಮನಿಸಿರುತ್ತದೆಯೇ ; ಗಮನಿಸಿದ್ದಲ್ಲಿ, ಬಂದಿರುವ ಪ್ರಕರಣಗಳ ಸಂಖ್ಯೆ ಎಷ್ಟು ;

(ಈ) ಚಿತ್ರದುರ್ಗ, ತುಮಕೂರು, ಕೋಲಾರ ಮತ್ತು ಚಿತ್ರದುರ್ಗ ಜಿಲ್ಲೆಗಳಲ್ಲಿ ಕಾಮಗಾರಿಗಳಿಗೆ ಬಿಡುಗಡೆಯಾದ ಅನುದಾನ ಎಷ್ಟು ; ಯಾವ ಯಾವ ಕಾಮಗಾರಿಗಳಿಗೆ ಅನುದಾನ ಬಿಡುಗಡೆಯಾಗಿದೆ ; ಖರ್ಚಾಗಿರುವ ಅನುದಾನ ಎಷ್ಟು ; ಸಮುದಾಯವಾರು ಮಾಹಿತಿ ನೀಡುವುದು ?

## ರೇಷ್ಮೆ ಇಲಾಖೆಯ ಅಭಿವೃದ್ಧಿಗೆ ತೆಗೆದುಕೊಂಡಿರುವ ಕ್ರಮಗಳ ಬಗ್ಗೆ

**ಶ್ರೀ ಡಿ.ಟಿ.ಶ್ರೀನಿವಾಸ್ (ಡಿ.ಟಿ.ಎಸ್) (ಶಿಕ್ಷಕರ ಕ್ಷೇತ್ರ) :–**

೧೮೬೩ (೨೦೪೪) ಮಾನ್ಯ ಪಶುಸಂಗೋಪನೆ ಮತ್ತು ರೇಷ್ಮೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರೇಷ್ಮೆ ಇಲಾಖೆಯಲ್ಲಿ ರಾಜ್ಯದ ಜಿಲ್ಲಾ ಹಾಗೂ ತಾಲ್ಲೂಕುಗಳಲ್ಲಿರುವ ರೇಷ್ಮೆ ಅಭಿವೃದ್ಧಿಗಾಗಿ ನಿರ್ಮಾಣಗೊಂಡಿರುವ ಕಟ್ಟಡಗಳ ಸಂಖ್ಯೆ ಎಷ್ಟು ; ಇವುಗಳಲ್ಲಿ ಬಳಕೆಯಾಗದಿರುವ ಕಟ್ಟಡಗಳ ಸಂಖ್ಯೆ ಎಷ್ಟು; (ಜಿಲ್ಲಾವಾರು ಮಾಹಿತಿ ನೀಡುವುದು)

(ಆ) ಬಳಕೆಯಾಗದಿರುವ ರೇಷ್ಮೆ ಇಲಾಖೆಯ ಕಟ್ಟಡ ಮತ್ತು ಜಮೀನನ್ನು ಅವಶ್ಯಕತೆಯಿರುವ ಇತರೆ ಇಲಾಖೆಗಳಿಗೆ ವರ್ಗಾಯಿಸುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ :

(ಇ) ಇದ್ದಲ್ಲಿ, ಇದುವರೆವಿಗೂ ಯಾವ ಯಾವ ಇಲಾಖೆಗಳಿಗೆ ಕಟ್ಟಡವನ್ನು ವರ್ಗಾಯಿಸಲಾಗಿದೆ ; ವರ್ಗಾವಣೆ ಮಾಡಿರುವ ಕಟ್ಟಡದ ವಿವರ ಮತ್ತು ಜಮೀನಿನ ವಿಸ್ತೀರ್ಣದ ಮಾಹಿತಿ ನೀಡುವುದು ?

## ಮುಜರಾಯಿ ದೇವಸ್ಥಾನಗಳ ಬಗ್ಗೆ

**ಶ್ರೀ ಡಿ.ಟಿ.ಶ್ರೀನಿವಾಸ್ (ಡಿ.ಟಿ.ಎಸ್) (ಶಿಕ್ಷಕರ ಕ್ಷೇತ್ರ) :-**

೧೮೬೪ (೨೦೪೬) ಮಾನ್ಯ ಸಾರಿಗೆ ಮತ್ತು ಮುಜರಾಯಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಕರ್ನಾಟಕ ರಾಜ್ಯದ ಮುಜರಾಯಿ ಇಲಾಖೆಯ ವ್ಯಾಪ್ತಿಯಲ್ಲಿ ಬರುವ ದೇವಸ್ಥಾನಗಳ ಸಂಖ್ಯೆ ಎಷ್ಟು ; ಈ ದೇವಸ್ಥಾನಗಳು ಯಾವ ಯಾವ ವರ್ಗದಲ್ಲಿ ಬರುತ್ತದೆ ; (ಜಿಲ್ಲಾವಾರು ಮಾಹಿತಿ ನೀಡುವುದು)

(ಆ) ೨೦೨೪-೨೫ನೇ ಸಾಲಿನಲ್ಲಿ ಮುಜರಾಯಿ ಇಲಾಖೆಯು ಅಡಿಯಲ್ಲಿ ಬರುವ ದೇವಸ್ಥಾನಗಳ ಜೀರ್ಣೋದ್ಧಾರಕ್ಕೆ ಸರ್ಕಾರವು ನಿಗದಿಪಡಿಸಿರುವ ಆಯವ್ಯಯ ಹಣ ಎಷ್ಟು ; ಇದುವರೆಗೂ ಬಿಡುಗಡೆ ಮಾಡಲಾದ ಹಣ ಎಷ್ಟು ; ಖರ್ಚು ಮಾಡಲಾದ ಹಣ ಎಷ್ಟು ; ಈ ಹಣದಲ್ಲಿ ಎಲ್ಲಾ ದೇವಸ್ಥಾನಗಳ ಜೀರ್ಣೋದ್ಧಾರ ಸಾಧ್ಯವಿದೆಯೇ ;

(ಇ) ೨೦೨೪-೨೫ನೇ ಸಾಲಿನಲ್ಲಿ ಮುಜರಾಯಿ ಇಲಾಖೆಯು ದೇವಸ್ಥಾನಗಳಿಂದ ವಿವಿಧ ಕಾಣಿಕೆಗಳಿಂದ ಬಂದಿರುವ ಹಣ, ಬಂಗಾರ ವಸ್ತುಗಳು ಎಷ್ಟು ; (ದೇವಸ್ಥಾನವಾರು ಮತ್ತು ಜಿಲ್ಲಾವಾರು ಮಾಹಿತಿ ನೀಡುವುದು)

(ಈ) ೨೦೨೪-೨೫ನೇ ಸಾಲಿನ ಆಯವ್ಯಯದಲ್ಲಿ ನಿಗದಿಪಡಿಸಿರುವ ಹಣದಿಂದ ಎಲ್ಲಾ ದೇವಸ್ಥಾನಗಳ ಜೀರ್ಣೋದ್ಧಾರ ಸಾಧ್ಯವಿದೆಯೇ ;

(ಉ) ೨೦೨೫–೨೬ನೇ ಸಾಲಿನ ಆಯವ್ಯಯಕ್ಕೆ ಸಂಬಂಧಿಸಿದಂತ ಹೆಚ್ಚಿನ ಅನುದಾನವನ್ನು ನಿಗದಿಪಡಿಸಲು ಸರ್ಕಾರವು ಕೈಗೊಂಡಿರುವ ಕ್ರಮಗಳೇನು ?

## ಮೀನುಗಾರಿಕೆ ವೃತ್ತಿಯಲ್ಲಿ ತೊಡಗಿರುವ ಮೀನುಗಾರರಿಗೆ ನೀಡುತ್ತಿರುವ ಯೋಜನೆಗಳ ಕುರಿತು

**ಶ್ರೀ ಡಿ.ಟಿ.ಶ್ರೀನಿವಾಸ್ (ಡಿ.ಟಿ.ಎಸ್) (ಶಿಕ್ಷಕರ ಕ್ಷೇತ್ರ) :–**

೧೮೬೫ (೨೦೪೭) ಮಾನ್ಯ ಮೀನುಗಾರಿಕೆ, ಬಂದರು ಮತ್ತು ಒಳನಾಡು ಜಲಸಾರಿಗೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಮೀನುಗಾರಿಕೆ ವೃತ್ತಿಯಲ್ಲಿ ತೊಡಗಿರುವ ಮೀನುಗಾರರಿಗೆ ಸರ್ಕಾರ ನೀಡುತ್ತಿರುವ ಯೋಜನೆಗಳು ಯಾವುವು ; ಈ ಯೋಜನೆಗಳಿಗೆ ನಿಗಧಿಪಡಿಸಿರುವ ಘಟಕ ವೆಚ್ಚ ಎಷ್ಟು ;

(ಆ) ಕರಾವಳಿ ಪ್ರದೇಶದಲ್ಲಿ ಮೀನುಗಾರಿಕೆಯಲ್ಲಿ ತೊಡಗಿರುವ ಮೀನುಗಾರರಿಗೆ ನೀಡುತ್ತಿರುವ ರಕ್ಷಣಾ ಯೋಜನೆಗಳು ಯಾವುವು ; ಇದರಿಂದ ಪ್ರಯೋಜನ ಪಡೆದಿರುವ ಮೀನುಗಾರ ಸಂಖ್ಯೆ ಎಷ್ಟು ;

(ಇ) ಸಮುದ್ರಗಳಲ್ಲಿ ಮೀನುಗಾರಿಕೆ ಮಾಡುವ ಮೀನುಗಾರರಿಗೆ ವಿಮಾ ಸೌಲಭ್ಯವನ್ನು ನೀಡುವ ಯೋಜನೆಯ ಪ್ರಸ್ತಾಪ ಸರ್ಕಾರದ ಗಮನದಲ್ಲಿದೆಯೇ ; ಇದ್ದಲ್ಲಿ, ಅನುಷ್ಠಾನಗೊಳಿಸಲು ಸರ್ಕಾರ ಯಾವ ರೀತಿ ಕ್ರಮ ಕೈಗೊಳ್ಳುವುದು ?

## ಸಾರಿಗೆ ನಿಗಮದ ಬಸ್‌ಗಳ ಕುರಿತು

**ಶ್ರೀ ಸುನೀಲ್ ವಲ್ಯಾಪುರ್ (ವಿಧಾನಸಭೆಯಿಂದ ಚುನಾಯಿತರಾದವರು):–**

೧೮೬೬ (೨೧೦೭) ಮಾನ್ಯ ಸಾರಿಗೆ ಮತ್ತು ಮುಜರಾಯಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದಲ್ಲಿ ಕಳೆದ ೨ ವರ್ಷಗಳಲ್ಲಿ ಸಾರಿಗೆ ನಿಗಮಗಳಿಗೆ ಬಿಡುಗಡೆಯಾದ ಅನುದಾನ ಎಷ್ಟು ; ಸಾರಿಗೆ ನೌಕರರ ವೇತನ ಬಾಕಿ ಇದೆಯೇ ; ಬಾಕಿ ಇದ್ದಲ್ಲಿ, ಎಷ್ಟು ತಿಂಗಳ ವೇತನ ಬಾಕಿ ಉಳಿದಿದೆ ; ಯಾವ ಕಾಲಮಿತಿಯೊಳಗೆ ಸರ್ಕಾರ ವೇತನ ನೀಡಲಾಗುವುದು ; (ಸಂಪೂರ್ಣ ಮಾಹಿತಿ ನಿಗಮವಾರು ನೀಡುವುದು)

(ಆ) ರಾಜ್ಯದಲ್ಲಿ ಸಾರಿಗೆ ಇಲಾಖೆಯಿಂದ ಸ್ಕ್ರ್ಯಾಪ್ ಮಾಡಲಾದ ಬಸ್‌ಗಳ ಸಂಖ್ಯೆ ಎಷ್ಟು ; ಕಳೆದ ೨ ವರ್ಷಗಳಲ್ಲಿ ಖರೀದಿಸಿದ ಬಸ್‌ಗಳ ಸಂಖ್ಯೆ ಎಷ್ಟು ; (ನಿಗಮವಾರು ಮಾಹಿತಿ ನೀಡುವುದು)

(ಇ) ರಾಜ್ಯದಲ್ಲಿ ೧೦ ಲಕ್ಷ ಕಿ.ಮೀ ಚಲಾವಣೆಯಾಗಿದ್ದರು ಸಹ ಬಸ್ ಸ್ಕ್ರ್ಯಾಪ್ ಮಾಡದೇ ಹಳ್ಳಿಗಳಿಗೆ ಚಲಾವಣೆ ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಬಂದಿದ್ದಲ್ಲಿ, ಸರ್ಕಾರ ಯಾವ ಕ್ರಮ ಕೈಗೊಂಡಿದೆ ; ಸ್ಕ್ರ್ಯಾಪ್ ಮಾಡದೇ ಇರಲು ಸೂಕ್ತ ಕಾರಣವೇನು ;

(ಈ) ಸಾರಿಗೆ ವಾಹನಗಳ ಮೇಲೆ ತಂಬಾಕು ಉತ್ಪನ್ನಗಳ ಜಾಹಿರಾತುವಿನ ಬದಲಿಗೆ ಸಾರಿಗೆ ಬಸ್ ಒಳಬದಿಯಲ್ಲಿ ಸ್ವಾತಂತ್ರ್ಯ ಹೋರಾಟಗಾರರ ಮಾಹಿತಿ ಮತ್ತು ಭಾವಚಿತ್ರವನ್ನು ಲಗತ್ತಿಸುವ ಬಗ್ಗೆ ಸರ್ಕಾರ ಚಿಂತಿಸಿದೆಯೇ ?

## ಮೀನು ಸಾಕಲು ಸರ್ಕಾರದಿಂದ ಬಿಡುಗಡೆಯಾದ ಯೋಜನೆಗಳ ಕುರಿತು

**ಶ್ರೀ ಸುನೀಲ್ ವಲ್ಯಾಪುರ್ (ವಿಧಾನಸಭೆಯಿಂದ ಚುನಾಯಿತರಾದವರು):–**

೧೮೬೭ (೨೧೦೫) ಮಾನ್ಯ ಮೀನುಗಾರಿಕೆ, ಬಂದರು ಮತ್ತು ಒಳನಾಡು ಜಲಸಾರಿಗೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದಲ್ಲಿ ಮೀನು ಸಾಕಾಣಿಕೆ ಹೆಚ್ಚಿಸಲು ರೈತರಿಗೆ ಪ್ರೋತ್ಸಾಹಿಸುವ ಸಲುವಾಗಿ ಸರ್ಕಾರದಿಂದ ಯಾವ ಯೋಜನೆಯನ್ನು ಹಮ್ಮಿಕೊಳ್ಳಲಾಗಿದೆ ; ಯಾವ ಯಾವ ಭಾಗದಲ್ಲಿ ರೈತರಿಗೆ ಮೀನು ಸಾಕಾಣಿಕೆ ಮಾಡಲು ಮೀನುಗಳನ್ನು ವಿತರಿಸಲಾಗುತ್ತಿದೆ ; (ಜಿಲ್ಲಾವಾರು ಮಾಹಿತಿ ನೀಡುವುದು)

(ಆ) ರಾಜ್ಯದಲ್ಲಿ ಮೀನು ಸಾಕಾಣಿಕೆ ಮಾಡಲು ಮೀನು ವಿತರಣೆ ಮಾಡುವಾಗ ರೈತರಿಂದ ಸರ್ಕಾರ ಹಣ ಪಡೆಯಲಾಗುವುದೇ ; ಪಡೆದಿದ್ದಲ್ಲಿ, ಎಷ್ಟು ಹಣ ಪಡೆಯಲಾಗಿದೆ; ರೈತರಿಂದ ಕಳೆದ ೨ ವರ್ಷಗಳಲ್ಲಿ ಎಷ್ಟು ಹಣ ಸಂಗ್ರಹಿಸಲಾಗಿದೆ ; (ಜಿಲ್ಲಾವಾರು ಮಾಹಿತಿ ನೀಡುವುದು)

(ಇ) ಕಳೆದ ೩ ವರ್ಷಗಳಲ್ಲಿ ಮೀನುಗಾರಿಕೆ ಇಲಾಖೆಗೆ ಸರ್ಕಾರದಿಂದ ಬಿಡುಗಡೆಯಾದ ಅನುದಾನ ಎಷ್ಟು ; ಮೀನು ವಿತರಣಾ ಕೇಂದ್ರ ಹೆಚ್ಚಿಸಲು ಸರ್ಕಾರ ಯಾವ ಕ್ರಮ ಕೈಗೊಂಡಿದೆ ;

(ಈ) ಕಲ್ಯಾಣ ಕರ್ನಾಟಕ ಭಾಗದಲ್ಲಿ ನೂತನ ಮೀನು ವಿತರಣಾ ಕೇಂದ್ರ ಸ್ಥಾಪಿಸಲು ಸರ್ಕಾರ ಕ್ರಮ ಕೈಗೊಂಡಿದೆಯೇ ?

## ಕೊಳಚೆ ಅಭಿವೃದ್ಧಿ ಮಂಡಳಿಯಲ್ಲಿ ನಿರ್ಮಾಣವಾಗುವ ಮನೆ ಕುರಿತು

**ಶ್ರೀ ಸುನೀಲ್ ವಲ್ಯಾಪುರ್ (ವಿಧಾನಸಭೆಯಿಂದ ಚುನಾಯಿತರಾದವರು):–**

೧೮೬೮ (೨೧೧೬) ಮಾನ್ಯ ವಸತಿ, ವಕ್ಫ್ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದಲ್ಲಿ ಕೊಳಚೆ ಅಭಿವೃದ್ಧಿ ಮಂಡಳಿಯಲ್ಲಿ ಎಷ್ಟು ಮನೆ ನಿರ್ಮಾಣ ಯೋಜನೆಗಳ ಕ್ರಿಯಾ ಯೋಜನೆಯನ್ನು ತಯಾರಿಸಿ ಅನುಮೋದನೆಗೊಂಡಿರುವ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಳ್ಳಲಾಗಿದೆ ; (ಯೋಜನಾವಾರು/ಜಿಲ್ಲಾವಾರು ಪೂರ್ಣ ಮಾಹಿತಿ ನೀಡುವುದು)

(ಆ) ಈ ಕ್ರಿಯಾ ಯೋಜನೆ ಅನ್ವಯ ಅನುಷ್ಠಾನಗೊಳಿಸಿದ ಕಾಮಗಾರಿಗಳು ಮತ್ತು ಅನುಷ್ಠಾನಗೊಳಿಸದೆ ಅಪೂರ್ಣ ಗೊಂಡಿರುವ ಕಾಮಗಾರಿಗಳು ಯಾವುವು ; (ಪೂರ್ಣ ಜಿಲ್ಲಾವಾರು ಮಾಹಿತಿ ನೀಡುವುದು)

(ಇ) ಅಪೂರ್ಣಗೊಂಡಿರುವ ಕಾಮಗಾರಿಗಳನ್ನು ಪೂರ್ಣಗೊಳಿಸದೆ ನಿಲ್ಲಿಸಿರುವುದರಿಂದ, ಈ ಕಾಮಗಾರಿಗಳು ದುಸ್ಥಿತಿಯಲ್ಲಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಈ) ಈ ಕಾಮಗಾರಿಗಳು ಅಪೂರ್ಣಗೊಳ್ಳಲು ಕಾರಣರಾದ ಗುತ್ತಿಗೆದಾರರು ಮತ್ತು ಮಂಡಳಿ ಅಧಿಕಾರಿಗಳ ಮೇಲೆ ಕೈಗೊಂಡ ಕ್ರಮಗಳೇನು ? (ಸಂಪೂರ್ಣ ವಿವರ ನೀಡುವುದು)

## ಕಂದಾಯ ಇಲಾಖೆಯಲ್ಲಿ ಕರ್ತವ್ಯ ನಿರ್ವಹಿಸುವ ಸಿಬ್ಬಂದಿಗಳ ಮಾಹಿತಿ ಕುರಿತು

**ಶ್ರೀ ಸುನೀಲ್ ವಲ್ಯಾಪುರ್ (ವಿಧಾನಸಭೆಯಿಂದ ಚುನಾಯಿತರಾದವರು):–**

೧೮೬೯ (೧೬೬೨) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಬೆಂಗಳೂರು ನಗರ ಮತ್ತು ಗ್ರಾಮಾಂತರ ಜಿಲ್ಲಾ ವ್ಯಾಪ್ತಿಯಲ್ಲಿ ಹಾಲಿ ಕಾರ್ಯನಿರ್ವಹಿಸುತ್ತಿರುವ ತಹಶೀಲ್ದಾರರು, ಉಪ ತಹಶೀಲ್ದಾರರು, ರಾಜಸ್ವ ನಿರೀಕ್ಷಕರು ಮತ್ತು ಗ್ರಾಮ ಆಡಳಿತ ಅಧಿಕಾರಿಗಳು ಮತ್ತು ಪ್ರಥಮ ದರ್ಜೆ ಹಾಗೂ ದ್ವಿತೀಯ ದರ್ಜೆ ಸಹಾಯಕ ಸಿಬ್ಬಂದಿಗಳ ಸಂಖ್ಯೆ ಎಷ್ಟು ; ಯಾರು ಯಾರು ವಿವರವಾಗಿ ಸಿಬ್ಬಂದಿ ಹೆಸರು, ಹುದ್ದೆಯ ಪದನಾಮ, ಹಾಲಿ ಕರ್ತವ್ಯ ನಿರ್ವಹಿಸುತ್ತಿರುವ ಸ್ಥಳ ಮತ್ತು ವೃತ್ತದೊಂದಿಗೆ ತಾಲ್ಲೂಕುವಾರು, ಹೋಬಳಿವಾರು ದೂರವಾಣಿ ಸಂಖ್ಯೆಯೊಂದಿಗೆ ಮಾಹಿತಿ ನೀಡುವುದು ;

(ಆ) ಸದರಿ ೨ ಜಿಲ್ಲೆಗಳ ವ್ಯಾಪ್ತಿಯಲ್ಲಿ ಎಷ್ಟು ಕಂದಾಯ ಗ್ರಾಮಗಳು ಬರುತ್ತವೆ ; ಸದರಿ ಗ್ರಾಮಗಳ ವ್ಯಾಪ್ತಿಯಲ್ಲಿ ಬರುವ ಗೋಮಾಳ, ಅಮೃತ್ ಮಹಲ್ ಕಾವಲ್, ಸರ್ಕಾರಿ ಖರಾಬು ಜಮೀನುಗಳು ಎಷ್ಟಿವೆ ; (ವಿವರವಾಗಿ ತಾಲ್ಲೂಕುವಾರು, ಹೋಬಳಿವಾರು ಗ್ರಾಮವಾರು, ಸರ್ವೆ ನಂಬರ್ ಹಾಗೂ ವಿಸ್ತೀರ್ಣದೊಂದಿಗೆ ಪೂರ್ಣ ಮಾಹಿತಿ ನೀಡುವುದು)

(ಇ) ಹಾಸನ ಜಿಲ್ಲೆ ಬೇಲೂರು ತಾಲ್ಲೂಕಿನಲ್ಲಿ ಹಾಲಿ ಕಾರ್ಯನಿರ್ವಹಿಸುತ್ತಿರುವ ಮೇಲಿನ ಸಿಬ್ಬಂದಿಗಳ ಸಂಖ್ಯೆ ಎಷ್ಟು; ಯಾರು ಯಾರು ವಿವರವಾಗಿ ಸಿಬ್ಬಂದಿ ಹೆಸರು, ಹುದ್ದೆಯ ಪದನಾಮ, ಹಾಲಿ ಕರ್ತವ್ಯ ನಿರ್ವಹಿಸುತ್ತಿರುವ ಸ್ಥಳ ಮತ್ತು ವೃತ್ತದೊಂದಿಗೆ ತಾಲ್ಲೂಕುವಾರು, ಹೋಬಳಿವಾರು ದೂರವಾಣಿ ಸಂಖ್ಯೆಯೊಂದಿಗೆ ಮಾಹಿತಿ ನೀಡುವುದು ;

(ಈ) ಸದರಿ ತಾಲ್ಲೂಕಿನ ವ್ಯಾಪ್ತಿಯಲ್ಲಿ ಎಷ್ಟು ಕಂದಾಯ ಗ್ರಾಮಗಳು ಬರುತ್ತವೆ ; ಸದರಿ ಗ್ರಾಮಗಳ ವ್ಯಾಪ್ತಿಯಲ್ಲಿ ಬರುವ ಗೋಮಾಳ, ಅಮೃತ್ ಮಹಲ್ ಕಾವಲ್, ಸರ್ಕಾರಿ ಖರಾಬು ಜಮೀನುಗಳು ಎಷ್ಟಿವೆ ; (ವಿವರವಾಗಿ ಹೋಬಳಿವಾರು, ಗ್ರಾಮವಾರು, ಸರ್ವೆ ನಂಬರ್ ಹಾಗೂ ವಿಸ್ತೀರ್ಣದೊಂದಿಗೆ ಪೂರ್ಣ ಮಾಹಿತಿ ನೀಡುವುದು )

(ಉ) ಹಾಸನ ಜಿಲ್ಲೆಯಲ್ಲಿ ಗೊರೂರು ಡ್ಯಾಂ ಹಿನ್ನೀರಿನಲ್ಲಿ ಮುಳುಗಡೆಯಾದ ಜಮೀನುಗಳು ಎಷ್ಟು ; ಪರ್ಯಾಯವಾಗಿ ಬದಲಿ ಜಮೀನನ್ನು ಯಾವ ಯಾವ ಸ್ಥಳದಲ್ಲಿ ನೀಡಲಾಗಿದೆ ; ಮುಳುಗಡೆಯಾದ ಗ್ರಾಮವಾರು, ಕುಟುಂಬದ ಹೆಸರು, ಎಷ್ಟು ಎಕರೆ ಮುಳುಗಡೆಯಾಗಿದೆ ; ಬದಲಿ ಜಮೀನು ಎಷ್ಟು ಎಕರೆ ನೀಡಲಾಗಿದೆ ; ಯಾವ ಗ್ರಾಮ, ಕುಟುಂಬದ ಹೆಸರು, ಸರ್ವೆ ನಂಬರ್ ಸಹಿತ ಮಾಹಿತಿ ನೀಡುವುದು ;

(ಊ) ಹಾಸನ ಜಿಲ್ಲೆ ಶಾಂತಿಗ್ರಾಮ ಹೋಬಳಿ ಅಂಕನಹಳ್ಳಿ ಗ್ರಾಮದಲ್ಲಿ ಈ ಹಿಂದೆ ಪಹಣಿಯಲ್ಲಿ ಖಾತೆದಾರರ ಹೆಸರು ಬರುತ್ತಿದ್ದು ಪ್ರಸ್ತುತ ಖಾತೆದಾರರನ್ನು ಕೈಬಿಟ್ಟಿರುವವರ ಸಂಖ್ಯೆ ಎಷ್ಟು ; ಪಹಣಿಯಿಂದ ಕೈಬಿಡಲು ಸೂಕ್ತ ಕಾರಣವೇನು ? (ಕೈಬಿಟ್ಟವರ ಹೆಸರು. ಸರ್ವೆ ನಂಬರ್, ವಿಸ್ತೀರ್ಣ, ಸೂಕ್ತ ಕಾರಣ ಅಥವಾ ಆದೇಶವಿದ್ದಲ್ಲಿ, ಆದೇಶ ಪತ್ರ ಲಗತ್ತಿಸಿ ನೀಡುವುದು)

## ಧನಗರಗೌಳಿ ಜನಾಂಗದ ಗ್ರಾಮಗಳನ್ನು ಕಂದಾಯ ಗ್ರಾಮಗಳನ್ನಾಗಿ ಮಾಡುವ ಕುರಿತು

**ಶ್ರೀ ಶಾಂತಾರಾಮ್ ಬುಡ್ನ ಸಿದ್ದಿ (ನಾಮನಿರ್ದೇಶನ ಹೊಂದಿದವರು) :–**

೧೮೭೦ (೨೧೧೫) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಧಾರವಾಡ ಮತ್ತು ಬೆಳಗಾವಿ ಜಿಲ್ಲೆಯ ಖಾನಾಪುರ ತಾಲ್ಲೂಕಿನಲ್ಲಿ ಪಶುಪಾಲಕ ಧನಗರಗೌಳಿ ಜನಾಂಗದ ಎಷ್ಟು ಹಳ್ಳಿಗಳಿವೆ ; ಗ್ರಾಮವಾರು ಕುಟುಂಬಗಳ ಸಂಖ್ಯೆ ಮತ್ತು ಗ್ರಾಮದ ಒಟ್ಟು ಜನಸಂಖ್ಯೆಯ ಮಾಹಿತಿ ನೀಡುವುದು ;

(ಆ) ಸದರಿ ಜನಾಂಗದ ಹಳ್ಳಿಗಳನ್ನು ಕಂದಾಯ ಗ್ರಾಮ ಮತ್ತು ಉಪ ಗ್ರಾಮಗಳನ್ನಾಗಿ ಮಾಡುವ ಪ್ರಕ್ರಿಯೆ ಯಾವ ಹಂತದಲ್ಲಿದೆ ಮತ್ತು ಇದು ನಿಧಾನಗತಿಯಲ್ಲಿ ಸಾಗುವುದಕ್ಕೆ ಕಾರಣಗಳೇನು ; ಗ್ರಾಮವಾರು ಮಾಹಿತಿ ನೀಡುವುದು ;

(ಇ) ಸದರಿ ಗ್ರಾಮಗಳನ್ನು ಕಂದಾಯ/ಉಪ ಗ್ರಾಮಗಳನ್ನಾಗಿ ಮಾಡುವ ಪ್ರಕ್ರಿಯೆ ಯಾವ ಕಾಲಮಿತಿಯೊಳಗೆ ಮಾಡಲಾಗುವುದು ? (ಸಂಪೂರ್ಣ ಮಾಹಿತಿ ನೀಡುವುದು)

## ಮನೆಗಳ ಹಂಚಿಕೆ ಕುರಿತು

**ಶ್ರೀ ಶಾಂತಾರಾಮ್ ಬುಡ್ನ ಸಿದ್ದಿ (ನಾಮನಿರ್ದೇಶನ ಹೊಂದಿದವರು) :–**

೧೮೭೧ (೨೧೧೭) ಮಾನ್ಯ ವಸತಿ, ವಕ್ಫ್ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಕಳೆದ ೨ ವರ್ಷದಲ್ಲಿ ವಸತಿ ಇಲಾಖೆ ಅಡಿಯಲ್ಲಿ ಉತ್ತರ ಕನ್ನಡ, ಬೆಳಗಾವಿ ಮತ್ತು ಧಾರವಾಡ ಜಿಲ್ಲೆಯಲ್ಲಿ ಎಷ್ಟು ಮನೆಗಳನ್ನು ಹಂಚಲಾಗಿದೆ ; ಗ್ರಾಮ ಪಂಚಾಯಿತಿವಾರು ಮಾಹಿತಿ ನೀಡುವುದು ;

(ಆ) ಸದರಿ ಜಿಲ್ಲೆಗಳ ಬಡ ಜನರಿಗೆ ಮತ್ತು ಬುಡಕಟ್ಟು ಜನಗಳಿಗಾಗಿ ಕಡಿಮೆ ಪ್ರಮಾಣದ ಮನೆಗಳು ಗ್ರಾಮ ಪಂಚಾಯಿತಿಗಳಿಗೆ ಮಂಜೂರಾಗಿರುವುದರಿಂದ ಅನೇಕ ಜನರು ಮನೆಗಳನ್ನು ಪಡೆದುಕೊಳ್ಳುವಲ್ಲಿ ವಂಚಿತರಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಇ) ವಸತಿ ರಹಿತರಿಗೆ ಮನೆ ಮಂಜೂರು ಮಾಡಲು ಸರ್ಕಾರದ ಮುಂದಿನ ಕ್ರಮಗಳೇನು ?

## ವಿಪತ್ತು ನಿರ್ವಹಣ ನಿಧಿಯ ಖರ್ಚಿನ ಕುರಿತು

**ಶ್ರೀ ಶರವಣ ಟಿ.ಎ. (ವಿಧಾನಸಭೆಯಿಂದ ಚುನಾಯಿತರಾದವರು) :–**

೧೮೭೨ (೨೧೨೭) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಕಳೆದ ಮೂರು ವರ್ಷಗಳವರೆಗೆ ವಿಪತ್ತು ನಿರ್ವಹಣೆ ಮಾಡಲು ಜಿಲ್ಲಾಧಿಕಾರಿ ಕಛೇರಿ ಹಾಗೂ ತಾಲ್ಲೂಕು ಕಛೇರಿಗೆ ಬಿಡುಗಡೆ ಮಾಡಿದ ಮೊತ್ತ ಖರ್ಚಾದ ಮೊತ್ತ ಹಾಗೂ ಬಾಕಿ ಉಳಿದ ಮೊತ್ತವೆಷ್ಟು ; ಬಾಕಿ ಇರಲು ಕಾರಣಗಳೇನು ; (ಜಿಲ್ಲಾವಾರು ಮತ್ತು ತಾಲ್ಲೂಕುವಾರು ಪ್ರತ್ಯೇಕ ಮಾಹಿತಿ ನೀಡುವುದು)

(ಆ) ಕಳೆದ ಮೂರು ವರ್ಷಗಳಿಂದ ಇಲ್ಲಿಯವರೆಗೆ ಹಲವು ಏಜೆನ್ಸಿಗಳು ವಿಪತ್ತು ನಿರ್ವಹಣೆ ವೆಚ್ಚದ ಹಣ ಬಳಕೆ ಪ್ರಮಾಣ ಪತ್ರ ಸಲ್ಲಿಸದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಬಂದಿದ್ದಲ್ಲಿ, ಏಜೆನ್ಸಿಗಳ ಹೆಸರು ಮತ್ತು ಮೊತ್ತದ ಮಾಹಿತಿ ನೀಡುವುದು ; ಸದರಿ ಸಂಸ್ಥೆಗಳು/ಅಧಿಕಾರಿಗಳ ಮೇಲೆ ಕೈಗೊಂಡ ಕ್ರಮಗಳೇನು ; (ವರ್ಷವಾರು ಪ್ರತ್ಯೇಕ ಮಾಹಿತಿ ನೀಡುವುದು)

(ಇ) ಹಿಂದಿನ ಆರ್ಥಿಕ ವರ್ಷಗಳಲ್ಲಿ ವಿಪತ್ತು ನಿರ್ವಹಣೆ ವೆಚ್ಚವನ್ನು ಅನ್ಯ ಉದ್ದೇಶಕ್ಕೆ ಬಳಕೆ ಮಾಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಬಂದಿದ್ದಲ್ಲಿ, ಯಾವ ಉದ್ದೇಶಗಳಿಗೆ ಬಳಸಲಾಗಿದೆ ಹಾಗೂ ಬದಲಿ ಉದ್ದೇಶಕ್ಕೆ ಬಳಸಿದವರ ಮೇಲೆ ಕೈಗೊಂಡ ಕ್ರಮ ಏನು ? (ಜಿಲ್ಲಾವಾರು ಮತ್ತು ತಾಲ್ಲೂಕುವಾರು ಸಂಪೂರ್ಣ ವಿವರ ನೀಡುವುದು)

## ಸಾರಿಗೆ ನಿಗಮಗಳ ಸ್ಥಿತಿಗತಿ ಹಾಗೂ ಶಕ್ತಿ ಯೋಜನೆ ಬಗ್ಗೆ

**ಶ್ರೀ ಶರವಣ ಟಿ.ಎ. (ವಿಧಾನಸಭೆಯಿಂದ ಚುನಾಯಿತರಾದವರು) :–**

೧೮೭೩ (೨೧೨೮) ಮಾನ್ಯ ಸಾರಿಗೆ ಮತ್ತು ಮುಜರಾಯಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ೨೦೨೩ ರಿಂದ ಇಲ್ಲಿಯವರೆಗೆ ಸಾರಿಗೆ ನಿಗಮಗಳು ಪಡೆದ ಸಾಲದ ಪ್ರಮಾಣವೆಷ್ಟು; ಸಾಲದ ಮೂಲಗಳಾವುವು ಮತ್ತು ಯಾವ ಉದ್ದೇಶಗಳಿಗೆ ಬಳಸಲಾಗಿದೆ ಹಾಗೂ ಇಲ್ಲಿಯುವರೆಗೆ ಹಿಂತಿರುಗಿಸಿದ ಸಾಲ ಹಾಗೂ ಬಡ್ಡಿ ಮೊತ್ತವೆಷ್ಟು ;

(ಆ) ಕಳೆದ ಮೂರು ವರ್ಷಗಳಲ್ಲಿ ನಿಗಮಗಳು ಮಾಡಿದ ಬಂಡವಾಳ ವೆಚ್ಚ ಭವಿಷ್ಯ ನಿಧಿ ಬಾಕಿ ಹಾಗೂ ಇಂಧನ ಬಾಕಿಯ ಸಂಪೂರ್ಣ ವಿವರ ನೀಡುವುದು ;

(ಇ) ೨೦೨೩ ರಿಂದ ಇಲ್ಲಿಯವರೆಗೆ ಶಕ್ತಿ ಯೋಜನೆಯಡಿ ಸಾರಿಗೆ ನಿಗಮಗಳಿಗೆ ಬಿಡುಗಡೆ ಮಾಡಬೇಕಾದ ಒಟ್ಟು ಮೊತ್ತವೆಷ್ಟು ; ಬಿಡುಗಡೆಗೆ ಬಾಕಿ ಇರುವ ಮೊತ್ತವೆಷ್ಟು ; ಬಿಡುಗಡೆಗೆ ಬಾಕಿ ಇರಲು ಕಾರಣವೇನು ;

(ಈ) ಶಕ್ತಿ ಯೋಜನೆ ಆರಂಭದಿಂದ ಇಲ್ಲಿಯವರೆಗೆ ಒಟ್ಟು ಎಷ್ಟು ಎಸ್‌ಸಿಪಿ/ಟಿಎಸ್‌ಪಿ ಫಲಾನುಭವಿಗಳು ಸಂಚರಿಸಿದ್ದಾರೆ ಹಾಗೂ ಬಿಡುಗಡೆ ಮಾಡಿದ ಮೊತ್ತವೆಷ್ಟು; ನಿಜವಾದ ಪ್ರಯಾಣ ಬಳಕೆಯನ್ನು ಯಾವ ಮಾನದಂಡಗಳ ಮೇಲೆ ಅಳೆಯಲಾಗುತ್ತಿದೆ ; ಪ್ರಯಾಣಿಸಿದ ಫಲಾನುಭವಿಗಳ ನಿಖರವಾದ ದತ್ತಾಂಶದ ವರದಿಯ ಸಂಪೂರ್ಣ ಮಾಹಿತಿ ನೀಡುವುದು ? (ವರ್ಷವಾರು ಮತ್ತು ನಿಗಮವಾರು ಪ್ರತ್ಯೇಕ ಮಾಹಿತಿ ನೀಡುವುದು)

## ಕಲ್ಯಾಣ ಕರ್ನಾಟಕ ಭಾಗದಲ್ಲಿ ಶೈಕ್ಷಣಿಕ ಉದ್ದೇಶಕ್ಕಾಗಿ ಹಲವು ವಿಧಗಳಲ್ಲಿ ಜಮೀನನ್ನು ಹಸ್ತಾಂತರ ಮಾಡಿರುವ ಕುರಿತು

**ಶ್ರೀ ಶಶೀಲ್ ಜಿ. ನಮೋಶಿ (ಶಿಕ್ಷಕರ ಕ್ಷೇತ್ರದಿಂದ ಚುನಾಯಿತರಾದವರು):–**

೧೮೭೪ (೨೧೩೧) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಕಳೆದ ಮೂರು ವರ್ಷಗಳಲ್ಲಿ ಕಲ್ಯಾಣ ಕರ್ನಾಟಕ ಭಾಗದಲ್ಲಿ ಶೈಕ್ಷಣಿಕ ಉದ್ದೇಶಗಳಿಗೆಂದು ವಿವಿಧ ಸಂಸ್ಥೆಗಳಿಗೆ ಜಮೀನು ಹಂಚಿಕೆ/ಬಾಡಿಗೆ/ಲೀಸ್ ವಿಧಗಳಲ್ಲಿ ಹಸ್ತಾಂತರ ಮಾಡಲಾಗಿದೆಯೇ ;

(ಆ) ಹಂಚಿಕೆ ಮಾಡಲಾದ ಜಮೀನಿಗೆ ಎಷ್ಟು ಬಾಡಿಗೆ ಅಥವಾ ಹಂಚಿಕೆ ಮಾಡಿದಲ್ಲಿ ಎಷ್ಟು ದರ ನಿಗದಿಪಡಿಸಲಾಗಿದೆ ; ಜಿಲ್ಲಾವಾರು ಸಂಸ್ಥೆವಾರು ಮಾಹಿತಿ ನೀಡುವುದು ;

(ಇ) ಮೊದಲೇ ಲೀಸ್/ಬಾಡಿಗೆಯಲ್ಲಿ ನೀಡಿ ಅವಧಿ ಮುಕ್ತಾಯವಾಗಿದ್ದಲ್ಲಿ ನವೀಕರಣ ಮಾಡಲಾಗಿದೆಯೇ ; ಸಂಸ್ಥೆವಾರು ಮಾಹಿತಿ ನೀಡುವುದು ;

(ಈ) ನವೀಕರಣದ ನಂತರ ಹಾಗು ಮೊದಲಿನ ಬಾಡಿಗೆ ವ್ಯತ್ಯಾಸದ ಕುರಿತು ಸಂಸ್ಥೆವಾರು ವಿವರ ನೀಡುವುದು ;

(ಉ) ಇಲ್ಲಿಯವರೆಗೆ ನವೀಕರಣಗೊಳಿಸದೇ ಜಮೀನು ಹಿಂಪಡೆದ ಸಂಸ್ಥೆಗಳ ಜಿಲ್ಲಾವಾರು ವಿವರ ನೀಡುವುದು ?

## ರಾಜ್ಯದಲ್ಲಿರುವ ಗ್ರಾಮ, ಹೋಬಳಿ, ತಾಲ್ಲೂಕು ಹಾಗೂ ಜಿಲ್ಲಾ ಮಟ್ಟದಲ್ಲಿರುವ ರಸ್ತೆಗಳ ಅಗಲೀಕರಣ ಮಾಡುವಾಗ ಸ್ವಾಧೀನಪಡಿಸಿಕೊಳ್ಳುವ ಸಾರ್ವಜನಿಕರ ಅಧಿಕೃತ ಆಸ್ತಿಗಳಿಗೆ ಪರಿಹಾರಧನ ನೀಡುವ ಕುರಿತು

**ಶ್ರೀ ಶಶೀಲ್ ಜಿ. ನಮೋಶಿ (ಶಿಕ್ಷಕರ ಕ್ಷೇತ್ರ) :–**

೧೮೭೫ (೨೧೩೨) ಮಾನ್ಯ ಲೋಕೋಪಯೋಗಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದಲ್ಲಿರುವ ಗ್ರಾಮೀಣ, ಹೋಬಳಿ ತಾಲ್ಲೂಕು ಮತ್ತು ಜಿಲ್ಲಾ ಮಟ್ಟದಲ್ಲಿರುವ ರಸ್ತೆಗಳ ಬದಿಯಲ್ಲಿ ಇರುವ ಸಾರ್ವಜನಿಕರ ಆಸ್ತಿಗಳು ರಸ್ತೆಯಿಂದ ಎಷ್ಟು ದೂರದಲ್ಲಿ ಇರಬೇಕು ಎಂಬ ನಿಯಮಗಳಿವೆ ; ಹಳೆಯ ಹಾಗೂ ಇತ್ತೀಚಿನ ನೂತನ ಆದೇಶ ಪ್ರತಿಗಳನ್ನು ಒದಗಿಸುವುದು ;

(ಆ) ಈ ಎಲ್ಲಾ ರಸ್ತೆಗಳನ್ನು ಅಗಲೀಕರಣಗೊಳಸಬೇಕಾದರೆ, ಇಲಾಖೆಯು ಅನುಸರಿಸಬೇಕಾದ ನಿಯಮಗಳು ಮತ್ತು ಕಾರ್ಯವಿಧಾನಗಳು ಯಾವುವು ; ರಸ್ತೆ ಅಗಲೀಕರಣದ ಸಮಯದಲ್ಲಿ ರಸ್ತೆಯ ಬದಿಯಲ್ಲಿರುವ ಸಾರ್ವಜನಿಕರಿಗೆ ಸರ್ಕಾರದಿಂದ ಯಾವ ರೀತಿಯ ನಿರ್ದೇಶನಗಳನ್ನು ನೀಡಲಾಗುತ್ತದೆ ;

(ಇ) ದಶಕಗಳ ಹಿಂದೆ ಗ್ರಾಮೀಣ, ತಾಲ್ಲೂಕು ಹಾಗೂ ಜಿಲ್ಲಾ ಮಟ್ಟಗಳಲ್ಲಿ ತುಂಬಾ ಕಿರಿದಾದ ರಸ್ತೆಗಳು ಇದ್ದು ಆ ಸಮಯದಲ್ಲಿ

ಸಾರ್ವಜನಿಕರು ಸರ್ಕಾರದಿಂದ ಅಥವಾ ಖಾಸಗಿ ವ್ಯಕ್ತಿಯಿಂದ ಅಧಿಕೃತವಾಗಿ ಪಡೆದ, ಖರೀದಿಸಿದ ಆಸ್ತಿಗಳು ರಸ್ತೆಗಳಿಗೆ ಹೊಂದಿಕೊಡಂತೆ ಇರುವುದರಿಂದ ಪ್ರಸ್ತುತ ಅಂತಹ ರಸ್ತೆಗಳನ್ನು ಅಗಲೀಕರಣ ಗೊಳಿಸಬೇಕಾದರೆ ಸರ್ಕಾರವು ಸ್ವಾಧೀನಪಡಿಸಿಕೊಳ್ಳುವ ಆಸ್ತಿಗಳ ಆಸ್ತಿದಾರರಿಗೆ ಪರಿಹಾರಧನವನ್ನು ನೀಡುತ್ತದೆಯೇ ; ಹೌದು ಎಂದಾದಲ್ಲಿ, ಯಾವ ಆಸ್ತಿಗಳಿಗೆ (NA, Non-NA ಮತ್ತು ಇತರೆ) ಯಾವ ರೀತಿಯ ಪರಿಹಾರಧನವನ್ನು ನೀಡುತ್ತದೆ ; ಇಲ್ಲ ಎಂದಾದಲ್ಲಿ, ಯಾವ ಕಾರಣಕ್ಕಾಗಿ ಪರಿಹಾರ ನೀಡಲಾಗುವುದಿಲ್ಲ ?

## ಖಾಲಿ ಇರುವ ಮತ್ತು ಆರ್ಥಿಕ ಅನುಮೋದನೆ ಪಡೆದಿರುವ ಹುದ್ದೆಗಳ ಕುರಿತು

**ಶ್ರೀ ಶಶೀಲ್ ಜಿ.ನಮೋಶಿ (ಶಿಕ್ಷಕರ ಕ್ಷೇತ್ರ) :–**

೧೮೭೬ (೨೧೩೩) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಪ್ರಸ್ತುತ ಕಂದಾಯ ಇಲಾಖೆಯಲ್ಲಿ ಮಂಜೂರಾಗಿರುವ ಖಾಲಿಯಿರುವ ಭರ್ತಿ ಮಾಡಿಕೊಳ್ಳಲಾದ ಹಾಗೂ ಆರ್ಥಿಕ ಇಲಾಖೆಯಿಂದ ಹೊಸದಾಗಿ ನೇಮಕಾತಿ ಮಾಡಿಕೊಳ್ಳಲು ಅನುಮೋದನೆ ಪಡೆಯಲಾದ ಹುದ್ದೆಗಳ ಸಂಖ್ಯೆ ಎಷ್ಟು ; (ವಿವರ ನೀಡುವುದು)

(ಆ) ಯಾವ ಯಾವ ಹುದ್ದೆಗಳ ನೇಮಕಾತಿಗಾಗಿ ಆರ್ಥಿಕ ಇಲಾಖೆಗೆ ಪ್ರಸ್ತಾವನೆಯನ್ನು ಸಲ್ಲಿಸಲಾಗಿದೆ ; ಆರ್ಥಿಕ ಇಲಾಖೆಯು ಎಷ್ಟು ಹುದ್ದೆಗಳ ನೇಮಕಾತಿಗೆ ಅನುಮೋದನೆ ನೀಡಿದೆ ; ಹುದ್ದೆಗಳ ಪದನಾಮಗಳ ಸಮೇತ ಪೂರ್ಣ ಮಾಹಿತಿಯನ್ನು ಒದಗಿಸುವುದು ;

(ಇ) ಪ್ರಸ್ತುತ ಕಂದಾಯ ಇಲಾಖೆಯಲ್ಲಿ ಖಾಲಿಯಿರುವ ಹಾಗೂ ಆರ್ಥಿಕ ಇಲಾಖೆಯಿಂದ ಅನುಮೋದನೆ ಪಡೆದಿರುವ ಗ್ರಾಮ ಆಡಳಿತ ಅಧಿಕಾರಿ ಹುದ್ದೆಗಳ ಸಂಖ್ಯೆ ಎಷ್ಟು ;

(ಈ) ಪ್ರಸ್ತುತ ಕಂದಾಯ ಇಲಾಖೆಯಲ್ಲಿ ಮಂಜೂರಾಗಿರುವ ಭರ್ತಿಯಾಗಿರುವ ಹಾಗೂ ಆರ್ಥಿಕ ಇಲಾಖೆಯು ಹೊಸದಾಗಿ ನೇಮಕಾತಿ ಮಾಡಿಕೊಳ್ಳಲು ಅನುಮೋದನೆ ನೀಡಿರುವ ಉಪ ನೋಂದಣಾಧಿಕಾರಿಗಳ ಸಂಖ್ಯೆ ಎಷ್ಟು ;

(ಉ) ಗ್ರಾಮ ಆಡಳಿತ ಅಧಿಕಾರಿಗಳು ಹಾಗೂ ಉಪ ನೋಂದಣಾಧಿಕಾರಿಗಳ ಹುದ್ದೆಗಳ ನೇಮಕಾತಿ ಜವಾಬ್ದಾರಿಯನ್ನು ಯಾವ ಪರೀಕ್ಷಾ ಪ್ರಾಧಿಕಾರಕ್ಕೆ ವಹಿಸಲಾಗುವುದು ಕರ್ನಾಟಕ ಪರೀಕ್ಷಾ ಪ್ರಾಧಿಕಾರವು ಪ್ರತಿ ಅರ್ಜಿಗೆ ರೂ. ೭೫೦/- ವಿಧಿಸುತ್ತಿರುವುದರಿಂದ ಅಭ್ಯರ್ಥಿಗಳಿಗೆ ಆರ್ಥಿಕ ಹೊರೆಯಾಗುತ್ತಿಲ್ಲವೇ ; ಈ ಕುರಿತು ಸರ್ಕಾರ ಕೈಗೊಳ್ಳಬಹುದಾದ ನಿಲುವನ್ನು ಸ್ಪಷ್ಟ ಪಡಿಸುವುದು ;

(ಊ) ಸರ್ಕಾರವು ಅಧಿಕೃತವಾಗಿ ಮಾಹಿತಿ ನೀಡಿರುವ ಪ್ರಕಾರ ಮುಂಬರುವ ನೇಮಕಾತಿಗಾಗಿ ಕಂದಾಯ ಇಲಾಖೆಯಿಂದ ಅಧಿಸೂಚನೆ ಹೊರಡಿಸಬಹುದಾದ ಹಾಗೂ ಆರ್ಥಿಕ ಇಲಾಖೆಯಿಂದ ಅನುಮೋದನೆ ಪಡೆದಿರುವ ಕಲ್ಯಾಣ ಕರ್ನಾಟಕ ಮತ್ತು ಉಳಿಕೆ ವೃಂದದ ಹುದ್ದೆಗಳು ಯಾವುವು ; ಎಲ್ಲಾ ಹುದ್ದೆಗಳ ಪದನಾಮಗಳ ಸಮೇತ ಮಾಹಿತಿಯನ್ನು ಒದಗಿಸುವುದು ?

# ಹತ್ತಾರು ವಸತಿ ಯೋಜನೆಗಳಿದ್ದರೂ ಬಡವರಿಗೆ ನಿವೇಶನ ಮನೆ ಸಿಗದೆ ಇರುವ ಬಗ್ಗೆ

**ಡಾ॥ ಉಮಾಶ್ರೀ (ನಾಮನಿರ್ದೇಶನ ಹೊಂದಿದವರು) :–**

೧೮೭೭ (೨೦೬೯) ಮಾನ್ಯ ವಸತಿ, ವಕ್ಫ್ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದಲ್ಲಿ ವಸತಿ ಇಲಾಖೆಯಲ್ಲಿ ಹತ್ತಾರು ವಸತಿ ಯೋಜನೆಗಳಿದ್ದರೂ ಬಡವರಿಗೆ ನಿವೇಶನ, ಮನೆ ಸಿಗದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ, ಹಾಗಿದ್ದಲ್ಲಿ, ಈ ಬಡವರಿಗೆ ನಿವೇಶನ ಮನೆ ನೀಡುವಲ್ಲಿ ಸರ್ಕಾರ ಯಾವ ರೀತಿ ಕ್ರಮ ಕೈಗೊಂಡಿದೆ ;

(ಆ) ರಾಜ್ಯದಲ್ಲಿರುವ ವಸತಿ ಯೋಜನೆಗಳಿಂದ ಕಳೆದ ೩ ವರ್ಷಗಳಲ್ಲಿ ಎಷ್ಟು ಬಡ ಕುಟುಂಬಗಳಿಗೆ ಮನೆ ಹಂಚಿಕೆ ಮಾಡಲಾಗಿದೆ ; (ಜಿಲ್ಲಾವಾರು/ಯೋಜನೆವಾರು ವಿವರ ನೀಡುವುದು)

(ಇ) ರಾಜ್ಯದ ಗ್ರಾಮೀಣ ನಗರ ಪ್ರದೇಶಗಳಲ್ಲಿ ಮನೆ ಬೇಡಿಕೆ ಇರುವ ಕುಟುಂಬಗಳ ಸಂಖ್ಯೆ ಎಷ್ಟು ; (ಜಿಲ್ಲಾವಾರು ಮಾಹಿತಿ ನೀಡುವುದು) ಈ ಕುಟುಂಬಗಳಿಗೆ ಯಾವ ಕಾಲಮಿತಿಯೊಳಗೆ ಮನೆಗಳನ್ನು ಹಂಚಿಕೆ ಮಾಡಲಾಗುವುದು ?

# ರಾಜ್ಯದ ದೇವಾಲಯಗಳ ಆಸ್ತಿಗಳನ್ನು ಸಂರಕ್ಷಿಸುವ ಕುರಿತು

**ಡಾ॥ ಉಮಾಶ್ರೀ (ನಾಮನಿರ್ದೇಶನ ಹೊಂದಿದವರು) :–**

೧೮೭೮ (೨೦೭೦) ಮಾನ್ಯ ಸಾರಿಗೆ ಮತ್ತು ಮುಜರಾಯಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯ ಸರ್ಕಾರ ಕಳೆದ ಸಾಲಿನ ಆಯವ್ಯಯ (೨೦೨೫–೨೬)ದಲ್ಲಿ ಮುಜರಾಯಿ ಇಲಾಖೆಗೆ ಸೇರಿರುವ ರಾಜ್ಯದ ದೇವಾಲಯಗಳ

ಆಸ್ತಿಗಳನ್ನು ಸಂರಕ್ಷಿಸಲು ಹಾಗೂ ದೇವಾಲಯಗಳ ಸ್ಥಿರಾಸ್ತಿಗಳನ್ನು ದಾಖಲೀಕರಣಗೊಳಿಸಲು "ಭೂ ವರಹಾ ಯೋಜನೆ ಘೋಷಿಸಿ, ಇಲ್ಲಿಯವರೆಗೂ ಎಷ್ಟು ದೇವಾಲಯಗಳಿಗೆ ಈ ಯೋಜನೆಯಡಿ ತಂತಿ ಬೇಲಿ ನಿರ್ಮಿಸಲಾಗಿದೆ ; ಇದಕ್ಕೆ ಯಾವ ಯಾವ ದೇವಾಲಯಗಳಿಗೆ ಎಷ್ಟು ಅನುದಾನ ನೀಡಲಾಗಿದೆ; ಈ ಅನುದಾನವನ್ನು ಕೆಲವು ದೇವಾಲಯಗಳಿಗೆ ಇನ್ನೂ ನೀಡದೇ ಇರಲು ಕಾರಣಗಳೇನು ;

(ಆ) ರಾಜ್ಯ ಸರ್ಕಾರದ ಮುಜರಾಯಿ ಇಲಾಖೆಯ ವ್ಯಾಪ್ತಿಗೆ ಒಳಪಡುವ ಒಟ್ಟು ೩೪,೫೬೬ ದೇವಾಲಯಗಳ ಪೈಕಿ ಸುಮಾರು ೪,೧೭೦ ದೇವಾಲಯಗಳು ಭೌತಿಕವಾಗಿ ಅಸ್ತಿತ್ವದಲ್ಲಿ ಇಲ್ಲದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಹಾಗಿದ್ದಲ್ಲಿ, ನಾಪತ್ತೆಯಾಗಿರುವ ದೇವಾಲಯಗಳ ಸಂಖ್ಯೆ ಎಷ್ಟು ; ಈ ದೇವಾಲಯಗಳಿಗೆ ಕಳೆದ ೩ ವರ್ಷಗಳಲ್ಲಿ ಯಾವುದಾದರೂ ಅನುದಾನ ನೀಡಲಾಗಿದೆಯೇ ; ನೀಡಿದ್ದಲ್ಲಿ ಇದುವರೆಗೂ ಎಷ್ಟು ಅನುದಾನ ನೀಡಲಾಗಿದೆ; (ವಿವರ ನೀಡುವುದು)

(ಇ) ಈ ರೀತಿ ಅಸ್ತಿತ್ವದಲ್ಲಿ ಇಲ್ಲದೇ ಇರುವ ದೇವಾಲಯಗಳಿಗೆ ಅನುದಾನ ಬಿಡುಗಡೆ ಮಾಡಿದವರ ಮೇಲೆ ಸರ್ಕಾರ ಯಾವ ರೀತಿ ಕ್ರಮ ಕೈಗೊಂಡಿದೆ ?

## ಬಾಗಲಕೋಟೆ ಜಿಲ್ಲೆಯಲ್ಲಿ ರಾಷ್ಟ್ರೀಯ ಹೆದ್ದಾರಿ ೩೬೭ರ ರಸ್ತೆ ವಿಸ್ತರಣೆ ಕಾಮಗಾರಿ ಬಗ್ಗೆ

**ಡಾ॥ ಉಮಾಶ್ರೀ (ನಾಮನಿರ್ದೇಶನ ಹೊಂದಿದವರು) :–**

೧೮೭೯ (೨೦೨೨) ಮಾನ್ಯ ಲೋಕೋಪಯೋಗಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಬಾಗಲಕೋಟೆ ಜಿಲ್ಲೆಯಲ್ಲಿ ರಾಷ್ಟ್ರೀಯ ಹೆದ್ದಾರಿ ೩೬೭ರ ರಸ್ತೆ ವಿಸ್ತರಣೆ ಕಾಮಗಾರಿ ನಡೆದಿದ್ದು ಈ ರಸ್ತೆಯ ಪಕ್ಕದಲ್ಲಿ ವಾಸಿಸುವ ಜನರು ನಿತ್ಯದ ಆದಾಯ ನಂಬಿ ಜೀವನ ಸಾಗಿಸುವವರಾಗಿದ್ದು, ಬಹುತೇಕ ಅಲ್ಪ ಸಂಖ್ಯಾತ, ಹಿಂದುಳಿದ, ದಲಿತ ಕುಟುಂಬಗಳು ವಾಸಿಸುತ್ತಿರುವ ಸುಮಾರು ೪೯೫ ಕ್ಕೂ ಅಧಿಕ ಬಡಕುಟುಂಬಗಳು ಈ ಕಾಮಗಾರಿಯಿಂದ ಮನೆಯನ್ನು ಕಳೆದುಕೊಂಡಿದ್ದು, ಇವರಿಗೆ ಬದಲಿ ನಿವೇಶನ ನೀಡದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಬಂದಿದ್ದಲ್ಲಿ, ಈ ಬಗ್ಗೆ ಸರ್ಕಾರ ಯಾವ ರೀತಿ ಕ್ರಮಕೈಗೊಂಡಿದೆ ;

(ಆ) ಈ ರಸ್ತೆಯ ವಿಸ್ತರಣೆ ಕಾಮಗಾರಿ ಸಂದರ್ಭದಲ್ಲಿ ಇಲ್ಲಿನ ಸುಮಾರು ೪೯೫ಕ್ಕೂ ಅಧಿಕ ಬಡಕುಟುಂಬಗಳಿಗೆ ೧೨ ಎಕರೆ ಜಾಗವನ್ನು ಗುರುತಿಸಿ ಬಿ.ಟಿ.ಡಿ.ಎ (Bagalkote Town Development Authority) ಯಿಂದ ನಗರಸಭೆಗೆ ಹಸ್ತಾಂತರಿಸುವ ತೀರ್ಮಾನ ಮಾಡಲಾಗಿತ್ತಾದರೂ ಅದರ ಪ್ರಕ್ರಿಯೆಗಳು ಆರಂಭಗೊಂಡಿಲ್ಲದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಹಾಗಿದ್ದಲ್ಲಿ, ಈ ಪ್ರಕ್ರಿಯೆಯನ್ನು ಯಾವಾಗ ಮಾಡಲಾಗುವುದು ; ಈ ರೀತಿ ವಿಳಂಬವಾಗಲು ಕಾರಣಗಳೇನು ?

## ರಬಕವಿ–ಬನಹಟ್ಟಿ ತಾಲ್ಲೂಕಿನಲ್ಲಿ ಪ್ರಜಾಸೌಧ ಕಟ್ಟಡ ನಿರ್ಮಾಣ ಮಾಡುವ ಬಗ್ಗೆ

**ಡಾ॥ ಉಮಾಶ್ರೀ (ನಾಮನಿರ್ದೇಶನ ಹೊಂದಿದವರು) :–**

೧೮೮೦ (೨೦೭೩) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಬಾಗಲಕೋಟೆ ಜಿಲ್ಲೆ ತೇರದಾಳ ವಿಧಾನಸಭಾ ಕ್ಷೇತ್ರದ ರಬಕವಿ–ಬನಹಟ್ಟಿ ತಾಲ್ಲೂಕಿನಲ್ಲಿ ಪ್ರಜಾಸೌಧ ಕಟ್ಟಡ ನಿರ್ಮಾಣ

ಮಾಡುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ, ಹಾಗಿದ್ದಲ್ಲಿ, ಇದಕ್ಕೆ ಬಿಡುಗಡೆ ಮಾಡಿರುವ ಅನುದಾನ ಎಷ್ಟು ; (ಮಾಹಿತಿಯನ್ನು ಒದಗಿಸುವುದು)

(ಆ) ಪ್ರಜಾಸೌಧ ಕಟ್ಟಡ ನಿರ್ಮಾಣಕ್ಕಾಗಿ ರಬಕವಿ ಸರ್ವೆ ನಂ.೮೦ ರಲ್ಲಿರುವ ೧೦ ಎಕರೆ ಪೈಕಿ ಖಾಲಿ ಇರುವ ೩ ಎಕರೆ ೧೮ ಗುಂಟೆ ಜಾಗವು ಲಭ್ಯವಿರುವುದು ನಿಜವೇ, ಹಾಗಿದ್ದಲ್ಲಿ, ಜಿಲ್ಲಾಧಿಕಾರಿಗಳು ತೆಗೆದುಕೊಂಡ ಕ್ರಮವೇನು ;

(ಇ) ಜಿಲ್ಲಾಧಿಕಾರಿಗಳು ಕ್ರಮ ತೆಗೆದುಕೊಂಡಿದ್ದರೆ, ಸದರಿ ಪ್ರಸ್ತಾವನೆಯು ಯಾವ ಹಂತದಲ್ಲಿ ತಡೆಯಾಗಿದೆ ಹಾಗೂ ತಡವಾಗುತ್ತಿರುವುದಕ್ಕೆ ಕಾರಣಗಳೇನು ; ಪ್ರಸ್ತುತ ಪ್ರಸ್ತಾವನೆಯು ಯಾವ ಇಲಾಖೆಯಲ್ಲಿ ಯಾವ ಅಧಿಕಾರಿಯ ಕಛೇರಿಯಲ್ಲಿದೆ ;

(ಈ) ಸದರಿ ಕಟ್ಟಡ ನಿರ್ಮಾಣಕ್ಕೆ ಎಂದು ಭೂಮಿಯನ್ನು ಮಂಜೂರು ಮಾಡಲಾಗಿದ್ದು ಇದನ್ನು ಸಾರ್ವಜನಿಕರ ಸೇವೆಗೆ ಸಮರ್ಪಿಸಲು ಸರ್ಕಾರ ಕಾಲಮಿತಿಯನ್ನು ಹಾಕಿಕೊಂಡಿದೆಯೇ ?

## ಮನೆಗಳ ಹಂಚಿಕೆ ಕುರಿತು

**ಡಾ. ಯತೀಂದ್ರ ಎಸ್. (ವಿಧಾನಸಭೆಯಿಂದ ಚುನಾಯಿತರಾದವರು) :–**

೧೮೮೧ (೨೦೪೮) ಮಾನ್ಯ ವಸತಿ, ವಕ್ಫ್ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ವರುಣಾ ವಿಧಾನಸಭಾ ವ್ಯಾಪ್ತಿಯ ಟಿ ನರಸೀಪುರ ಪುರಸಭೆ ಮತ್ತು ಕಡಕೋಳ ಪಟ್ಟಣ ಪಂಚಾಯಿತಿ ವ್ಯಾಪ್ತಿಯಲ್ಲಿ ಅತಿ ಹೆಚ್ಚು ವಸತಿ ರಹಿತರು ವಾಸಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ಬಂದಿದ್ದಲ್ಲಿ, ಈ ಕುರಿತು ವಸತಿ ರಹಿತರ ಸಮೀಕ್ಷೆ ನಡೆಸಲಾಗಿದೆಯೇ ; ಎಷ್ಟು ವಸತಿ ರಹಿತರನ್ನು ಗುರುತಿಸಲಾಗಿದೆ ; ಈ ರೀತಿ ಗುರುತಿಸಿದ ವಸತಿ ರಹಿತರಿಗೆ ವಸತಿ ಒದಗಿಸಲು ಸರ್ಕಾರ ಕೈಗೊಂಡ ಕ್ರಮಗಳೇನು ? (ವಿವರ ಒದಗಿಸುವುದು)

## ಲೋಕೋಪಯೋಗಿ (PWD) ವಸತಿ ಗೃಹ ಹಂಚಿಕೆ ಮತ್ತು ನಿರ್ವಹಣೆಯ ಬಗ್ಗೆ

**ಶ್ರೀ ಡಿ. ಎಸ್. ಅರುಣ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೧೮೮೨ (೨೧೨೩) ಮಾನ್ಯ ಲೋಕೋಪಯೋಗಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದಲ್ಲಿ ಲೋಕೋಪಯೋಗಿ ಇಲಾಖೆ (PWD) ವಶದಲ್ಲಿರುವ ಸರ್ಕಾರಿ ವಸತಿ (PWD Quarters) ಗೃಹಗಳ ಒಟ್ಟು ಸಂಖ್ಯೆ ಎಷ್ಟು ; (ಜಿಲ್ಲಾವಾರು ವಿವರವನ್ನು ನೀಡುವುದು) ಅದರಲ್ಲಿ ಪ್ರಸ್ತುತ ಖಾಲಿ ಇರುವ ವಸತಿ ಗೃಹಗಳ ಸಂಖ್ಯೆ ಎಷ್ಟು ; ಹಾಗೂ ಅವುಗಳನ್ನು ಬಳಕೆ ಮಾಡುವುದಕ್ಕೆ ಸರ್ಕಾರ ಯಾವ ಕ್ರಮಗಳನ್ನು ಕೈಗೊಂಡಿದೆ ; (ವಿವರ ನೀಡುವುದು)

(ಆ) ರಾಜ್ಯದ ವಿವಿಧ ಜಿಲ್ಲೆಗಳಲ್ಲಿ (PWD) ವಸತಿ ಗೃಹಗಳ ನಿರ್ವಹಣೆ (Maintenance) ಕುರಿತು ದೂರುಗಳು ಬಂದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಬಂದಿದ್ದಲ್ಲಿ, ಸರ್ಕಾರ ಕೈಗೊಂಡ ಕ್ರಮವೇನು ;

(ಇ) ವಿಶೇಷವಾಗಿ ಕಟ್ಟಡಗಳ ಜೀರ್ಣಾವಸ್ಥೆ, ವಿದ್ಯುತ್/ನೀರು ಸೌಲಭ್ಯಗಳ ಕೊರತೆ ಮತ್ತು ಭದ್ರತಾ ಸಮಸ್ಯೆಗಳ ಬಗ್ಗೆ ಪರಿಶೀಲನೆ ನಡೆಸಲಾಗಿದೆಯೇ ; ಕಳೆದ ಮೂರು ವರ್ಷಗಳಲ್ಲಿ ನಿರ್ವಹಣೆಗೆ ಖರ್ಚು ಮಾಡಿರುವ ಮೊತ್ತ ಎಷ್ಟು ; (ಜಿಲ್ಲಾವಾರು ವಿವರ ನೀಡುವುದು)

(ಈ) ಬಹುಕಾಲದಿಂದ ಖಾಲಿ ಇರುವ ಅಥವಾ ಜೀರ್ಣಾವಸ್ಥೆಯಲ್ಲಿರುವ (PWD) ವಸತಿ ಗೃಹಗಳನ್ನು ಪುನರುಜ್ಜೀವನಗೊಳಿಸಲು ಸರ್ಕಾರ ಯಾವುದೇ ಸಮಗ್ರ ಯೋಜನೆ ರೂಪಿಸಿರುವುದೇ ; ಇಲ್ಲದಿದ್ದಲ್ಲಿ, ಸಾರ್ವಜನಿಕ ಆಸ್ತಿ ನಷ್ಟವನ್ನು ತಪ್ಪಿಸಲು ಸರ್ಕಾರ ತುರ್ತು ಕ್ರಮ ಕೈಗೊಳ್ಳುವ ಉದ್ದೇಶವಿದೆಯೇ ? (ವಿವರ ನೀಡುವುದು)

## ಅತಿವೃಷ್ಟಿ ನೆರೆಯಿಂದ ಮನೆ ಹಾನಿಯಾದ ಕುಟುಂಬಗಳಿಗೆ ಪರಿಹಾರ ನೀಡುವ ಬಗ್ಗೆ

**ಶ್ರೀ ಡಿ. ಎಸ್. ಅರುಣ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೧೮೮೩ (೨೧೨೪) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದಲ್ಲಿ ೨೦೨೦–೨೧ನೇ ಸಾಲಿನಿಂದ ಅತಿವೃಷ್ಟಿ ನೆರೆಯಿಂದ ಮನೆ ಹಾನಿಯಾಗಿ ಸಂತ್ರಸ್ತರಾಗಿರುವ ಕುಟುಂಬಗಳ ಸಂಖ್ಯೆ ಎಷ್ಟು ; (ಜಿಲ್ಲಾವಾರು ಮಾಹಿತಿ ನೀಡುವುದು)

(ಆ) ರಾಜ್ಯದಲ್ಲಿ ಕಳೆದ ಮೂರು ವರ್ಷಗಳಲ್ಲಿ ಎಷ್ಟು ಲಕ್ಷ ಮನೆಗಳು ಹಾನಿಯಾಗಿದೆ ಹಾಗೂ ಈ ಅವಧಿಯಲ್ಲಿ ಸರ್ಕಾರದಿಂದ ಪರಿಹಾರ ರೂಪದಲ್ಲಿ ಎಷ್ಟು ಲಕ್ಷ ಮನೆಗಳನ್ನು ಕಟ್ಟಿಸಿಕೊಡಲಾಗಿದೆ ;

(ಇ) ಕಳೆದ ಮೂರು ವರ್ಷದಿಂದ ಇಲ್ಲಿಯವರೆಗೂ ನೆರೆ ಸಂತ್ರಸ್ತರಿಗೆ ಪರಿಹಾರ ನೀಡಲು ಎನ್‌ಡಿಆರ್‌ಎಫ್ ಹಾಗೂ ಎಸ್‌ಡಿ ಆರ್‌ಎಫ್ ನಿಂದ ಬಿಡುಗಡೆಯಾದ ಅನುದಾನವೆಷ್ಟು ?

## ಪ್ರಕೃತಿ ವಿಕೋಪದಿಂದ ನೀಡುತ್ತಿರುವ ಪರಿಹಾರದ ಕುರಿತು

**ಶ್ರೀ ಕೆ. ಅಬ್ದುಲ್ ಜಬ್ಬಾರ್ (ವಿಧಾನಸಭೆಯಿಂದ ಚುನಾಯಿತರಾದವರು) :–**

೧೮೮೪ (೨೧೨೯) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ನೆರೆ/ಬರ ಪರಿಹಾರದ ಧನ ವಿತರಣೆ ಪ್ರಕ್ರಿಯೆಯಲ್ಲಿ ವಿಳಂಬವಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಬಂದಿದ್ದಲ್ಲಿ, ಸದರಿ ವಿಳಂಬವನ್ನು ಸರಿಪಡಿಸಲು ಸರ್ಕಾರ ಕೈಗೊಂಡ ಕ್ರಮಗಳು ಯಾವುವು ;

(ಆ) ಕಳೆದ ಮೂರು ವರ್ಷಗಳಲ್ಲಿ ಪ್ರಕೃತಿ ವಿಕೋಪದಿಂದ ಹಾನಿಗೊಳಗಾದ ಕುಟುಂಬಗಳ ಸಂಖ್ಯೆ ಎಷ್ಟು ; (ಜಿಲ್ಲಾವಾರು ಮಾಹಿತಿ ಒದಗಿಸುವುದು)

(ಇ) ಸದರಿ ಕುಟುಂಬಗಳಿಗೆ ನೀಡುತ್ತಿರುವ ಪರಿಹಾರ ಮೊತ್ತ ಎಷ್ಟು; (ಅಂಕಿ–ಅಂಶ ತಿಳಿಸುವುದು)

(ಈ) ಬೆಳೆ ಹಾನಿ ಮೌಲ್ಯಮಾಪನದಲ್ಲಿ ಪಾರದರ್ಶಕತೆ ಕಾಯ್ದುಕೊಳ್ಳಲು ಯಾವ ಕ್ರಮಗಳನ್ನು ಜಾರಿಗೆ ತರಲಾಗಿದೆ ?

## ಸಾರಿಗೆ ನಿಗಮಗಳ ಕಾರ್ಯಕ್ಷಮತೆ ಕುರಿತು

**ಶ್ರೀ ಕೆ. ಅಬ್ದುಲ್ ಜಬ್ಬಾರ್ (ವಿಧಾನಸಭೆಯಿಂದ ಚುನಾಯಿತರಾದವರು) :–**

೧೮೮೫ (೨೧೩೦) ಮಾನ್ಯ ಸಾರಿಗೆ ಮತ್ತು ಮುಜರಾಯಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಕಳೆದ ಮೂರು ವರ್ಷಗಳಲ್ಲಿ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮದ ಲಾಭ/ನಷ್ಟದ ವಿವರವೇನು ;

(ಆ) ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆಯಲ್ಲಿ ಎಲೆಕ್ಟ್ರಿಕ್ ಬಸ್‌ಗಳ ಸಂಖ್ಯೆ ಎಷ್ಟು ; ಇನ್ನಷ್ಟು ಸೇರ್ಪಡೆ ಮಾಡುವ ಯೋಜನೆ ಸರ್ಕಾರದ ಮುಂದೆ ಇದೆಯೇ ;

(ಇ) ವಾಯುವ್ಯ ಕರ್ನಾಟಕ ರಸ್ತೆ ಸಾರಿಗೆ ನಿಗಮ ಹಾಗೂ ಕಲ್ಯಾಣ ಕರ್ನಾಟಕ ರಸ್ತೆ ಸಾರಿಗೆ ನಿಗಮಗಳಲ್ಲಿ ಖಾಲಿ ಇರುವ ಚಾಲಕ/ನಿರ್ವಾಹಕ ಹುದ್ದೆಗಳ ಸಂಖ್ಯೆ ಎಷ್ಟು ?

# ಮುಜರಾಯಿ ಇಲಾಖಾ ವ್ಯಾಪ್ತಿಯಲ್ಲಿರುವ ದೇವಾಲಯದ ಬಗ್ಗೆ

**ಶ್ರೀ ಎಂ.ಎಲ್. ಅನಿಲ್ ಕುಮಾರ್ (ಸ್ಥಳೀಯ ಸಂಸ್ಥೆಗಳು ಕ್ಷೇತ್ರ) :–**

೧೮೮೬ (೨೧೩೯) ಮಾನ್ಯ ಸಾರಿಗೆ ಮತ್ತು ಮುಜರಾಯಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಕೋಲಾರ ಜಿಲ್ಲೆಯಲ್ಲಿರುವ ಎ.ಬಿ. ಮತ್ತು ಸಿ ಶ್ರೇಣಿಯ ಮುಜರಾಯಿ ದೇವಾಲಯಗಳು ಯಾವುವು ; ತಾಲ್ಲೂಕುವಾರು ಸಂಪೂರ್ಣವಾದ ಮಾಹಿತಿ ನೀಡುವುದು ;

(ಆ) ಕಳೆದ ೩ ವರ್ಷದಿಂದ ಈವರೆಗೂ ಕೋಲಾರ ಜಿಲ್ಲೆಯಲ್ಲಿರುವ ಯಾವ ಯಾವ ದೇವಸ್ಥಾನಗಳಿಗೆ ಸರ್ಕಾರದಿಂದ ಅಭಿವೃದ್ಧಿ ಕಾರ್ಯಗಳಿಗೆ/ಕಾಮಗಾರಿಗಳಿಗೆ ಅನುದಾನ ಬಿಡುಗಡೆಯಾಗಿದೆ ; ಸದರಿ ಬಿಡುಗಡೆಯಾಗಿರುವ ಅನುದಾನವನ್ನು ಸಮರ್ಪಕವಾಗಿ ಬಳಸಿಕೊಳ್ಳಲಾಗಿದೆಯೇ ; ಅಭಿವೃದ್ಧಿ ಕಾಮಗಾರಿಗಳು ಯಾವ ಹಂತದಲ್ಲಿದೆ: ತಾಲ್ಲೂಕುವಾರು, ದೇವಸ್ಥಾನವಾರು ಸಂಪೂರ್ಣವಾದ ಮಾಹಿತಿ ನೀಡುವುದು ;

(ಇ) ಕೋಲಾರ ತಾಲ್ಲೂಕು ಸುಗಟೂರು ಹೋಬಳಿ ಮದನಹಳ್ಳಿ ಗ್ರಾಮದ ಶ್ರೀ ವೇಣುಗೋಪಾಲಸ್ವಾಮಿ ದೇವಾಲಯವನ್ನು ಕೆಡವಿ ಹೊಸದಾಗಿ ನಿರ್ಮಾಣ ಮಾಡುವ ಪ್ರಕ್ರಿಯೆ ಯಾವ ಹಂತದಲ್ಲಿದೆ ; ಸದರಿ ನಿರ್ಮಾಣ ಪ್ರಕ್ರಿಯೆಯು ಯಾವ ಉದ್ದೇಶಕ್ಕಾಗಿ ವಿಳಂಬವಾಗುತ್ತಿದೆ ; (ಪೂರ್ಣವಾದ ಮಾಹಿತಿ ನೀಡುವುದು)

(ಈ) ಮುಜರಾಯಿ ಇಲಾಖೆಗಳಲ್ಲಿ ಕಡತಗಳ ವಿಲೇವಾರಿ ವಿಳಂಬವಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಬಂದಿದ್ದಲ್ಲಿ, ಕಡತಗಳ ವಿಳಂಬ ಮಾಡುತ್ತಿರುವ ಅಧಿಕಾರಿ/ನೌಕರರ ವಿರುದ್ಧ ಯಾವ ಕ್ರಮ ಕೈಗೊಳ್ಳಲಾಗುವುದು ?

## ‘ಡಿ’ ಗ್ರೂಪ್ ಹುದ್ದೆ ಖಾಲಿ ಇರುವ ಕುರಿತು

**ಶ್ರೀ ಭೀಮರಾವ್ ಬಸವರಾಜ ಪಾಟೀಲ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ ) :–**

೧೮೮೭ (೨೯೮೭) ಮಾನ್ಯ ಪಶುಸಂಗೋಪನೆ ಮತ್ತು ರೇಷ್ಮೆ ಸಚಿವರು ಈ  ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಬೀದರ್ ಜಿಲ್ಲೆ ಹುಮ್ನಾಬಾದ್ ಕ್ಷೇತ್ರ ವ್ಯಾಪ್ತಿಯ ಪಶುಸಂಗೋಪನಾ ಇಲಾಖೆಯಲ್ಲಿ ‘ಡಿ’ ಗ್ರೂಪ್ ಹುದ್ದೆಗಳು ಖಾಲಿ ಇರುವುದು ಸರ್ಕಾರದ ಗಮಮನಕ್ಕೆ ಬಂದಿದೆಯೇ ;

(ಆ) ಇದ್ದಲ್ಲಿ, ಸದರಿ ಹುದ್ದೆ ತುಂಬಲು ಸರ್ಕಾರ ಕೈಗೊಂಡ ಕ್ರಮವೇನು ? (ಮಾಹಿತಿ ನೀಡುವುದು)

## ಲೋಕೋಪಯೋಗಿ ಇಲಾಖೆಯ ಕಾಮಗಾರಿಗಳ ಕುರಿತು

**ಶ್ರೀ ಭೀಮರಾವ್ ಬಸವರಾಜ ಪಾಟೀಲ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ ) :–**

೧೮೮೮ (೨೯೮೮) ಮಾನ್ಯ ಲೋಕೋಪಯೋಗಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಕಳೆದ ೨ ವರ್ಷದಿಂದ ಬೀದರ್ ಜಿಲ್ಲೆಯ ವ್ಯಾಪ್ತಿಯಲ್ಲಿ ಲೋಕೋಪಯೋಗಿ ಇಲಾಖೆಯಿಂದ ಕೈಗೊಂಡ ಕಾಮಗಾರಿಗಳು ಯಾವುವು ;  (ತಾಲ್ಲೂಕುವಾರು ಮಾಹಿತಿ ನೀಡುವುದು)

(ಆ) ಹೊಸ ಕಾಮಗಾರಿಗೆ ಜಿಲ್ಲೆಯಿಂದ ಪ್ರಸ್ತಾವನೆ ಬಂದಿದೆಯೇ ; ಬಂದಿದ್ದಲ್ಲಿ, ಯಾವ ಯಾವ ಕಾಮಗಾರಿಗಳು ಬಂದಿವೆ ; (ಮಾಹಿತಿ ನೀಡುವುದು)

(ಇ) ಕಳೆದ ೨ ವರ್ಷದಲ್ಲಿ ಎಷ್ಟು ರಸ್ತೆ ಬ್ರಿಡ್ಜ್ ಕಾಮಗಾರಿಗಳು ಪೂರ್ಣಗೊಂಡಿವೆ ? (ತಾಲ್ಲೂಕುವಾರು ಮಾಹಿತಿ ನೀಡುವುದು)

## ಉಪ ವಿಭಾಗಾಧಿಕಾರಿಗಳ ನ್ಯಾಯಾಲಯದಲ್ಲಿ ಬಾಕಿಯಿರುವ ಕಂದಾಯ ವ್ಯಾಜ್ಯ ಪ್ರಕರಣಗಳ ಬಗ್ಗೆ

**ಶ್ರೀ ಬಸನಗೌಡ ಬಾದರ್ಲಿ (ವಿಧಾನಸಭೆಯಿಂದ ಚುನಾಯಿತರಾದವರು) :–**

೧೮೮೯ (೨೦೧೨) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಸಿಂಧನೂರು ತಾಲ್ಲೂಕಿಗೆ ಸಂಬಂಧಿಸಿದಂತೆ. ೨೦೨೩ರ ಮಾರ್ಚ್‌ವರೆಗೆ ವಿವಿಧ ಪ್ರಕರಣಗಳ ತೀರ್ಪಿಗಾಗಿ ಉಪ ವಿಭಾಗಾಧಿಕಾರಿಗಳ ನ್ಯಾಯಾಲಯದಲ್ಲಿ ಬಾಕಿಯಿದ್ದ ಪ್ರಕರಣಗಳ ಸಂಖ್ಯೆ ಎಷ್ಟು;

(ಆ) ಪಸ್ತುತ ೨೦೨೬ರ ಫೆಬ್ರವರಿ ಅಂತ್ಯಕ್ಕೆ ಸಿಂಧನೂರು ತಾಲ್ಲೂಕಿಗೆ ಸಂಬಂಧಿದಂತೆ ಉಪ ವಿಭಾಗಾಧಿಕಾರಿಗಳ ನ್ಯಾಯಾಲಯದಲ್ಲಿ ಇತ್ಯರ್ಥಕ್ಕಾಗಿ ಬಾಕಿಯಿರುವ ಪ್ರಕರಣಗಳ ಸಂಖ್ಯೆ ಎಷ್ಟು;

(ಇ) ೨೦೨೩ ಏಪ್ರಿಲ್‌ನಿಂದ ಇಲ್ಲಿಯವರೆಗೆ ವಿಲೇವಾರಿಗೊಂಡ ಪ್ರಕರಣಗಳ ಸಂಖ್ಯೆ ಎಷ್ಟು;

(ಈ) ಪ್ರಸ್ತುತ ಸಿಂಧನೂರು ತಾಲ್ಲೂಕಿಗೆ ಸಂಬಂಧಿಸಿದಂತೆ ತೀರ್ಪಿಗಾಗಿ ಬಾಕಿರುವ ಪ್ರಕರಣಗಳ ಸಂಖ್ಯೆ ಎಷ್ಟು?

## ರಾಜೀವ್ ಗಾಂಧಿ ವಸತಿ ನಿಗಮದಿಂದ ಮಂಜೂರಾಗಿರುವ ಮನೆಗಳ ಕುರಿತು

**ಶ್ರೀ ಬಸನಗೌಡ ಬಾದರ್ಲಿ (ವಿಧಾನಸಭೆಯಿಂದ ಚುನಾಯಿತರಾದವರು) :–**

೧೮೯೦ (೨೦೧೩) ಮಾನ್ಯ ವಸತಿ, ವಕ್ಫ್ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಚಿವರು ಈ  ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಕಳೆದ ಎರಡು ವರ್ಷಗಳಲ್ಲಿ ಸಿಂಧನೂರು ತಾಲ್ಲೂಕಿಗೆ ರಾಜೀವ್ ಗಾಂಧಿ ವಸತಿ ನಿಗಮ ನಿಯಮಿತದಿಂದ ಎಷ್ಟು ಮನೆಗಳು ಮಂಜೂರಾಗಿವೆ ;

(ಆ) ಸದರಿ ಮಂಜೂರಾಗಿರುವ ಮನೆಗಳಲ್ಲಿ ನಿರ್ಮಾಣ ಕಾರ್ಯ ಆರಂಭವಾಗದೇ ಇರುವ ಮನೆಗಳ ಸಂಖ್ಯೆ ;

(ಇ) ಮಂಜೂರಾಗಿರುವ ಮನೆಗಳಲ್ಲಿ ಈಗಾಗಲೇ ನಿರ್ಮಾಣಗೊಂಡು ಪೂರ್ಣ ಸಹಾಯಧನ ಪಾವತಿಯಾಗಿರುವ ಮನೆಗಳ ಸಂಖ್ಯೆ ಎಷ್ಟು ?

## ಸಿಂಧನೂರು ತಾಲ್ಲೂಕಿನ ಮುಜರಾಯಿ ದೇವಾಲಯಗಳನ್ನು ಸಂರಕ್ಷಿಸುವ ಬಗ್ಗೆ

**ಶ್ರೀ ಬಸನಗೌಡ ಬಾದರ್ಲಿ (ವಿಧಾನಸಭೆಯಿಂದ ಚುನಾಯಿತರಾದವರು) :–**

೧೮೯೧ (೨೦೧೪) ಮಾನ್ಯ ಸಾರಿಗೆ ಮತ್ತು ಮುಜರಾಯಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಸಿಂಧನೂರು ತಾಲ್ಲೂಕಿನ ಮುಜರಾಯಿ ಇಲಾಖೆಯ ಅಧೀನದಲ್ಲಿ ಬರುವ ಪುರಾತನ ದೇವಾಲಯುಗಳ ಸಂಖ್ಯೆ ಎಷ್ಟು ; (ವಿವರ ನೀಡುವುದು)

(ಆ) ಸದರಿ ದೇವಾಲಯಗಳು ಅಗತ್ಯ ಮೂಲಭೂತ ಸೌಕರ್ಯಗಳನ್ನು ಹೊಂದಿವೆಯೇ ;

(ಇ) ತಾಲ್ಲೂಕಿನ ಸದರಿ ಪುರಾತನ ದೇವಾಲಯಗಳ ಸಂರಕ್ಷಣೆಗೆ ಸರ್ಕಾರದಿಂದ ಯಾವ ಕ್ರಮವಹಿಸಲಾಗಿದೆ ;

(ಈ) ಯಾವ ಕಾಲಮಿತಿಯೊಳಗೆ ತಾಲ್ಲೂಕಿನ ಎಲ್ಲಾ ದೇವಾಲಯಗಳನ್ನು ಸಂರಕ್ಷಣೆ ಮಾಡಲು ಸರ್ಕಾರದಿಂದ ಕ್ರಮವಹಿಸಲಾಗುವುದು ?

## ಮುಜರಾಯಿ ಇಲಾಖೆಯ ಅಧೀನದಲ್ಲಿ ಬರುವ ದೇವಸ್ಥಾನಗಳ ಭೂಮಿಯನ್ನು ಸಂರಕ್ಷಿಸುವ ಬಗ್ಗೆ

**ಶ್ರೀ ಬಸನಗೌಡ ಬಾದರ್ಲಿ (ವಿಧಾನಸಭೆಯಿಂದ ಚುನಾಯಿತರಾದವರು) :–**

೧೮೯೨ (೨೦೧೫) ಮಾನ್ಯ ಸಾರಿಗೆ ಮತ್ತು ಮುಜರಾಯಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಸಿಂಧನೂರು ತಾಲ್ಲೂಕಿನ ಮುಜರಾಯಿ ಇಲಾಖೆಯ ಅಧೀನದಲ್ಲಿ ಬರುವ ದೇವಾಸ್ಥಾನಗಳ ಹೆಸರಿನಲ್ಲಿ ಎಷ್ಟು ಎಕರೆ ಜಮೀನು ಇದೆ ;

(ಆ) ಇಲಾಖೆಯಿಂದ ಸದರಿ ದೇವಾಲಯಗಳ ಜಮೀನಿನ ಸಂರಕ್ಷಣೆಗೆ ಕ್ರಮವಹಿಸಲಾಗಿದೆಯೇ ;

(ಇ) ಪ್ರಸ್ತುತ ಸಿಂಧನೂರು ತಾಲ್ಲೂಕಿನ ದೇವಾಲಯಗಳಿಗೆ ಸೇರಿದ ಎಷ್ಟು ಪ್ರಮಾಣದ ಜಮೀನು ಖಾಸಗಿ ವ್ಯಕ್ತಿಗಳಿಂದ ಒತ್ತುವರಿಯಾಗಿದೆ ;

(ಈ) ಈ ಸಂಬಂಧ ಸರ್ಕಾರದಿಂದ ಯಾವ ಕ್ರಮವಹಿಸಲಾಗಿದೆ ?

## ರಾಜ್ಯ ಹೆದ್ದಾರಿಯಾಗಿ ಘೋಷಿಸಿ ಅಭಿವೃದ್ಧಿಪಡಿಸುವ ಬಗ್ಗೆ

**ಶ್ರೀ ಬಸನಗೌಡ ಬಾದರ್ಲಿ (ವಿಧಾನಸಭೆಯಿಂದ ಚುನಾಯಿತರಾದವರು) :–**

೧೮೯೩ (೨೦೧೬) ಮಾನ್ಯ ಲೋಕೋಪಯೋಗಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಸಿಂಧನೂರು ತಾಲ್ಲೂಕಿನ ಗೋರೇಬಾಳ ಕ್ಯಾಂಪ್‌ನ 'ರಾಷ್ಟ್ರೀಯ ಹೆದ್ದಾರಿ' ರಸ್ತೆಯಿಂದ ಗಾಂಧಿನಗರದ ಮೂಲಕ ವೆಂಕಟೇಶ್ವರ ಕ್ಯಾಂಪ್‌ವರೆಗೆ ಸುಮಾರು ೧೧.೫೦ ಕಿ.ಮೀ ರಸ್ತೆಯಲ್ಲಿ ಅಧಿಕ ಸಂಖ್ಯೆ ಸಾರ್ವಜನಿಕ ಮತ್ತು ಇತರೆ ಖಾಸಗಿ ವಾಹನಗಳು ದಿನನಿತ್ಯ ಚಲಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ಇದ್ದಲ್ಲಿ, ಸದರಿ ರಸ್ತೆಯನ್ನು ಸುರಕ್ಷತೆ ಹಾಗೂ ಸುಗಮ ಸಂಚಾರದ ಹಿತದೃಷ್ಟಿಯಿಂದ 'ರಾಜ್ಯ ಹೆದ್ದಾರಿ' ಯಾಗಿ ಘೋಷಿಸುವ ಕುರಿತು ಸರ್ಕಾರದ ನಿಲುವೇನು ;

(ಇ) ಯಾವ ಕಾಲಮಿತಿಯೊಳಗೆ ಸದರಿ ರಸ್ತೆಯನ್ನು 'ರಾಜ್ಯ ಹೆದ್ದಾರಿ' ಯಾಗಿ ಮೇಲ್ದರ್ಜೆಗೇರಿಸಿ, ಅಭಿವೃದ್ಧಿಗೊಳಿಸಲಾಗುವುದು ?

# ಕರ್ನಾಟಕ ಕೊಳಗೇರಿ ಅಭಿವೃದ್ಧಿ ಮಂಡಳಿ ವತಿಯಿಂದ ನಿರ್ಮಿಸಿರುವ ಮನೆಗಳ ಕುರಿತು

**ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ (ವಿಧಾನಸಭೆಯಿಂದ ಚುನಾಯಿತರಾದವರು) :–**

೧೮೯೪ (೨೧೪೧) ಮಾನ್ಯ ವಸತಿ, ವಕ್ಫ್ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಕರ್ನಾಟಕ ಕೊಳಗೇರಿ ಅಭಿವೃದ್ಧಿ ಮಂಡಳಿ ವತಿಯಿಂದ ಹುಬ್ಬಳ್ಳಿ ನಗರದಲ್ಲಿ ಎಷ್ಟು ಮನೆಗಳನ್ನು ನಿರ್ಮಿಸಲಾಗಿದೆ ; ಎಷ್ಟು ಮನೆಗಳನ್ನು ಫಲಾನುಭವಿಗಳಿಗೆ ಹಸ್ತಾಂತರಿಸಲಾಗಿದೆ ; ಸದರಿ ಫಲಾನುಭವಿಗಳಲ್ಲಿ ಪರಿಶಿಷ್ಟ ಜಾತಿ ಮತ್ತು ಪಂಗಡ, ಹಿಂದುಳಿದ ವರ್ಗಗಳು ಹಾಗೂ ಸಾಮಾನ್ಯ ವರ್ಗಗಳಿಗೆ ಸೇರಿದ ಫಲಾನುಭವಿಗಳ ಸಂಖ್ಯೆ ಎಷ್ಟು ; (ಸಂಪೂರ್ಣ ಮಾಹಿತಿ ನೀಡುವುದು)

(ಆ) ಸದರಿ ಮಂಡಳಿವತಿಯಿಂದ ಹುಬ್ಬಳ್ಳಿ/ಧಾರವಾಡ ನಗರದಲ್ಲಿ ನಿರ್ಮಿಸಿದ ಮನೆಗಳಿಗೆ ಕೇಂದ್ರ ಮತ್ತು ರಾಜ್ಯ ಸರ್ಕಾರವು ಒದಗಿಸಿದ ಅನುದಾವೆಷ್ಟು; ಹಾಗೂ ಫಲಾನುಭವಿಗಳ ಸ್ವಂತ ವಂತಿಕೆ ಎಷ್ಟು; ಮನೆಗಳನ್ನು ನಿರ್ಮಿಸಲು ಎಷ್ಟು ಮೊತ್ತ ವಿನಿಯೋಗಿಸಲಾಗಿದೆ ; (ಸಂಪೂರ್ಣ ಮಾಹಿತಿ ನೀಡುವುದು)

(ಇ) ಕಳೆದ ಮೂರು ವರ್ಷಗಳಲ್ಲಿ ವಸತಿ ಇಲಾಖೆಯಲ್ಲಿರುವ ವಿವಿಧ ಯೋಜನೆಗಳಡಿ ರಾಜ್ಯದ ಬಡಜನರಿಗೆ ಎಷ್ಟು ಮನೆಗಳನ್ನು ಮಂಜೂರು ಮಾಡಲಾಗಿದೆ ; ಕೇಂದ್ರ ಮತ್ತು ರಾಜ್ಯ ಸರ್ಕಾರ ಮಂಜೂರು ಮಾಡಿರುವ ಮನೆಗಳೆಷ್ಟು ; ಆರ್ಥಿಕ ವರ್ಷವಾರು ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ಪ್ರತ್ಯೇಕ ಮಾಹಿತಿ ನೀಡುವುದು ?

# ಬಳ್ಳಾರಿ ಮತ್ತು ವಿಜಯನಗರ ಜಿಲ್ಲೆಗಳಲ್ಲಿ ಪಹಣಿ ಕಾಲಂ ಇಂದೀಕರಣಗೊಳಿಸುವ ಕುರಿತು

**ಶ್ರೀ ವೈ. ಎಂ. ಸತೀಶ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೧೮೯೫ (೨೮೯೬) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಬಳ್ಳಾರಿ ಮತ್ತು ವಿಜಯನಗರ ಜಿಲ್ಲೆಗಳಲ್ಲಿ ಖಾಸಗಿ ಜಮೀನುಗಳಲ್ಲಿ ನೆಲೆಗೊಂಡಿರುವ ದಾಖಲೆ ರಹಿತ ಕಂದಾಯ ಗ್ರಾಮಗಳನ್ನಾಗಿ ಪರಿವರ್ತಿಸಿದ್ದರೂ ಕರ್ನಾಟಕ ಸರ್ಕಾರ ಎಂದು ನಮೂದಿಸಿ ೨–ಇ ಅಧಿಸೂಚನೆ ಹೊರಡಿಸಿ ಪಟ್ಟಾದಾರರ ಹೆಸರಿಗೆ ಮರು ನಮೂದಿಸಲು ಆದೇಶಿಸಿದ್ದರೂ ಈವರೆಗೆ ಪಹಣಿ ಕಾಲಂ ೯ರಲ್ಲಿ ಇಂದೀಕರಣವಾಗದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ೨–ಇ ಅಧಿಸೂಚನೆ ಹೊರಡಿಸಿ ಪಟ್ಟಾದಾರರ ಹೆಸರಿಗೆ ಮರು ನಮೂದಿಸಲು ಆದೇಶಿಸಿದ್ದರೂ ಈವರೆಗೆ ಪಹಣಿ ಕಾಲಂ ೯ರಲ್ಲಿ ಇಂದೀಕರಣವಾಗಲು ಇನ್ನೂ ಬಾಕಿ ಜಮೀನುಗಳು ಎಷ್ಟು; (ವಿವರ ನೀಡುವುದು)

(ಇ) ೨–ಇ ಅಧಿಸೂಚನೆ ಹೊರಡಿಸಿ ಪಟ್ಟಾದಾರರ ಹೆಸರಿಗೆ ಮರು ನಮೂದಿಸಲು ಆದೇಶಿಸಿದ್ದರೂ ಈವರೆಗೆ ಪಹಣಿ ಕಾಲಂ ೯ರಲ್ಲಿ ಇಂದೀಕರಣವಾಗಲು ಇನ್ನೂ ಬಾಕಿ ಇರುವ ಜಮೀನುಗಳ ಪಹಣಿಯಲ್ಲಿ ತುರ್ತಾಗಿ ಇಂದೀಕರಣವಾಗಲು ಸರ್ಕಾರದಿಂದ ಯಾವ ಕ್ರಮ ಕೈಗೊಳ್ಳಲಾಗುವುದು ?

**ಕೆ. ಆರ್. ಮಹಾಲಕ್ಷ್ಮಿ**
ಕಾರ್ಯದರ್ಶಿ
ಕರ್ನಾಟಕ ವಿಧಾನ ಪರಿಷತ್ತು

ಸರ್ಕಾರಿ ಕೇಂದ್ರ ಮುದ್ರಣಾಲಯ, ಬೆಂಗಳೂರು–59/ಕಾ.ಸೂ. O-212/500 ಪ್ರತಿಗಳು/07–03–2026